ಹ್ಯಾಪಿ ಟಿಂಕರಿಂಗ್ 🙂

NITI Aayog

ATAL INNOVATION MISSION

# ಅಟಲ್ ಟಿಂಕರಿಂಗ್ ಲ್ಯಾಬ್ ಕೈಪಿಡಿ

ನವ ನಿರ್ದೇಶನ ನವೀನ ರಚನೆ

ನವ ಭಾರತ

ಜನವರಿ 2019

NITI Aayog | ATAL INNOVATION MISSION

ಟಿಂಕರ್ ಟಿಂಕರ್ ಅರಳುತ್ತಿರುವ ಇನ್ನೋವೇಶನ್ ನಕ್ಷತ್ರಗಳೇ,
ನಿಮ್ಮ ಕನಸುಗಳ ಮೇಲೆ ಲಕ್ಷ್ಯವನ್ನಿಡಿ,
ನಿಮ್ಮ ಕಲ್ಪನೆಗಳಿಗೆ ರೆಕ್ಕೆಗಳನ್ನು ನೀಡಿ ಮತ್ತು ಬಹಳ ಎತ್ತರಕ್ಕೆ ಹಾರಿ
ಭಾರತದ ಇನ್ನೋವೇಶನ್ನ ಆಕಾಶದಲ್ಲಿ
ವಜ್ರಗಳಂತೆ ಸದಾ ಹೊಳೆಯುತ್ತಿರಿ

ಶ್ರೀ ರಾಮನಾಥನ್ ರಮಣನ್
ಮಿಷನ್ ಡೈರೆಕ್ಟರ್
ಅಟಲ್ ಇನ್ನೋವೇಶನ್ ಮಿಷನ್
NITI ಆಯೋಗ್


“ಯುವ ಪೀಳಿಗೆಯು ಈ ರೀತಿಯ ಉತ್ಸಾಹದಿಂದ ನವೀನತೆಯಲ್ಲಿ ಕಾರ್ಯಮಗ್ನರಾಗಿರುವುದನ್ನು ನಾನು ನೋಡುವಾಗ, ’ನವ ಭಾರತ (ನ್ಯೂ ಇಂಡಿಯಾ)’ಕ್ಕಾಗಿರುವ ನನ್ನ ನಿರ್ಧಾರವು ಇನ್ನಷ್ಟು ಬಲಗೊಳ್ಳುತ್ತದೆ. ಜಗತ್ತಿನಲ್ಲಿ ಭಾರತಕ್ಕೆ ಯಾವ ಸ್ಥಾನವು ಅರ್ಹವಾಗಿದೆಯೋ ಆ ಸ್ಥಾನವನ್ನು 21 ನೇ ಶತಮಾನದಲ್ಲಿ ನಾವು ಪಡೆಯಲು ಸಮರ್ಥರಾಗುವೆವು.”

ಶ್ರೀ ನರೇಂದ್ರ ಮೋದಿ
ಭಾರತದ ಸನ್ಮಾನ್ಯ ಪ್ರಧಾನ ಮಂತ್ರಿ



NITI Aayog

ATAL INNOVATION MISSION



**ಡಾ. ರಾಜೀವ್ ಕುಮಾರ್**

**ಉಪಾಧ್ಯಕ್ಷರು**

**NITI ಆಯೋಗ್**

डॉ. राजीव कुमार
उपाध्यक्ष
DR. RAJIV KUMAR
VICE CHAIRMAN
Phones: 23096677, 23096688
Fax : 23096699
E-mail : vch-niti@gov.in

सत्यमेव जयते

भारत सरकार
नीति आयोग, संसद मार्ग
नई दिल्ली–110 001
Government of India
NATIONAL INSTITUTION FOR TRANSFORMING INDIA
NITI Aayog, Parliament Street
New Delhi-110 001

**Foreword**

India is embarking on an exciting journey through innovation. The various complex challenges that we face today provide immense opportunities for the innovative youth of our country to go beyond and create value, not only for India but also for the world.

The Atal Innovation Mission (AIM), NITI Aayog is a first of its kind intervention by the Govt. of India to foster the spirit of innovation and entrepreneurship in India. The Atal Tinkering Labs (ATL) in schools are revolutionizing education like never before with young student innovators coming up with some very interesting concepts and prototypes. I have personally experienced the energy and vibrancy of an Atal Tinkering Lab and am witness to the impact they are creating amongst the young students.

I commend the AIM team for coming up with the ATL Handbook which can further help schools to improve productivity of ATLs and make us more successful in our efforts. My best wishes to all ATL students, teachers and mentors for their energy and dedication in taking this Mission forward.

(Rajiv Kumar)

स्वच्छ भारत
एक कदम स्वच्छता की ओर

“ನಾನು ಸಮೃದ್ಧವಾದ, ಪ್ರಬಲವಾದ ಮತ್ತು ಕಾಳಜಿಭರಿತ ಭಾರತದ ಕನಸು ಕಂಡಿದ್ದೇನೆ. ಮಹಾನ್ ರಾಷ್ಟ್ರಗಳ ಸಾಮಾಜಿಕ ಮರ್ಯಾದೆಯಲ್ಲಿ ಗೌರವಾನ್ವಿತ ಸ್ಥಾನವನ್ನು ಮರಳಿ ಪಡೆಯುವಂಥ ಭಾರತದ ಕನಸು ನನ್ನದಾಗಿದೆ.”

ದಿವಂಗತ ಶ್ರೀ ಅಟಲ್ ಬಿಹಾರಿ ವಾಜಪೇಯಿ
ಭಾರತದ ಮಾಜಿ ಪ್ರಧಾನ ಮಂತ್ರಿ



NITI Aayog | ATAL INNOVATION MISSION



**ಶ್ರೀ ಅಮಿತಾಬ್ ಕಾಂತ್**

ಸಿಇಒ

**NITI ಆಯೋಗ್**


अमिताभ कांत
Amitabh Kant
मुख्य कार्यकारी अधिकारी
Chief Executive Officer

सत्यमेव जयते

भारत सरकार
नीति आयोग, संसद मार्ग,
नई दिल्ली-110 001
Government of India
NATIONAL INSTITUTION FOR TRANSFORMING INDIA
NITI Aayog, Parliament Street,
New Delhi-110001
Tel. : 23096576, 23096574 Fax : 23096575
E-mail : ceo-niti@gov.in, amitabh.kant@nic.in


## Message

Atal Innovation Mission, the flagship programme of NITI Aayog, has been establishing Atal Tinkering Labs across India. With an ambitious target of establishing ATLs in over 5,400 schools and covering all major districts and Aspirational Districts of India by March 2019, and 10,000 schools by 2020 eventually, AIM is well poised to change the face of the traditional Indian education system.

Equipped with the latest technologies, our young students are now capable of solving any problem in their labs by creating innovative prototypes, and eventually becoming an entrepreneur. India really needed ATLs and the way AIM has been successfully able to implement the programme in such a short time, I have great hopes that India of 2030 will be a high skilled, innovative and entrepreneurial nation.

It's great to see the AIM Team coming up with this ATL Handbook, for schools to emulate the guidelines and reach their fullest potential. I urge the states to use this as an implementation code and establish more ATLs with the support of AIM. My best wishes to everyone contributing towards this national movement, with the best of their efforts.

(Amitabh Kant)

Place: New Delhi
Date: 09.01.2019

“ಯುವಜನರ ಜ್ವಲಿಸುವಂಥ ಮನಸ್ಸುಗಳು ಭೂಮಿಯಲ್ಲೇ ಲಭ್ಯವಿರುವ ಅತ್ಯಂತ ಪ್ರಬಲ ಸಂಪನ್ಮೂಲಗಳಾಗಿವೆ.”

ದಿವಂಗತ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ
ಭಾರತದ ಮಾಜಿ ರಾಷ್ಟ್ರಪತಿ



NITI Aayog | ATAL INNOVATION MISSION



**ಶ್ರೀ ರಾಮನಾಥನ್ ರಮಣನ್**

ಮಿಷನ್ ಡೈರೆಕ್ಟರ್

ಅಟಲ್ ಇನ್ನೋವೇಶನ್ ಮಿಷನ್

**NITI** ಆಯೋಗ್


आर. रमणन

**R. Ramanan**

Tel. : +91 1123042337

: +91 1123096580

E-mail : r.ramanan@gov.in

सत्यमेव जयते

मिशन निदेशक, अटल इनोवेशन मिशन

अतिरिक्त सचिव, नीति आयोग

भारत सरकार

संसद मार्ग, नई दिल्ली

Mission Director, Atal Innovation Mission

Additional Secretary, NITI Aayog

Government of India

Sansad Marg, New Delhi


## Message

Atal Innovation Mission (AIM), NITI Aayog has embarked on a strategic nationwide initiative to create, nurture and promote an ecosystem of innovation and entrepreneurship across the country in a holistic manner - across schools, universities and the industry.

At a school level the Atal Tinkering Labs (ATLs) is a game changing disruptive initiative to embed problem solving innovative mindsets in millions of high school children. ATLs are facilitating transformational changes in technological innovation and pedagogy.

With more than 5,000 schools being equipped with ATLs by mid-2019, this will help greatly expand the reach of the ATL program, increasing the number of children exposed to tinkering and innovation and providing our budding young innovators access to technologies like 3D Printing, Robotics, IoT and microprocessors. It is expected that these schools will facilitate the creation of over **One Million Neoteric Child Innovators** by 2020. ATLs will function as innovation hubs for these student innovators to explore solutions to unique local problems, which they come across in their everyday lives.

AIM also envisions a strong growth in the collaborative ecosystem created by the ATL initiative, where students, teachers, mentors and industry partners work to facilitate innovation, foster scientific temper and an entrepreneurial spirit in the children of today, who will go on to become successful contributors to nation-building.

We are happy to launch the ATL Handbook, which can be used by the existing ATL schools to improvise on their operations. The handbook can also be used by authorities to establish more ATLs, by implementing the guidelines and learning from our experiences at AIM.

My best wishes to all innovators.

(R.Ramanan)

स्वच्छ भारत

एक कदम स्वच्छता की ओर



**ಅಲೋಕ್ ಓಹ್ರಿ**
ಅಧ್ಯಕ್ಷ ಮತ್ತು ವ್ಯವಸ್ಥಾಪಕ
ನಿರ್ದೇಶಕ
ಡೆಲ್ ಇ.ಎಮ್.ಸಿ ಭಾರತ

# ಸಂದೇಶ

ಮಾನವ ಪ್ರಗತಿಯನ್ನು ಬಲವಾಗಿ ಪ್ರಚೋದಿಸುವಂಥ ಟೆಕ್ನಾಲಜಿಗಳನ್ನು ಸೃಷ್ಟಿಸುವುದೇ ಡೆಲ್‌ನಲ್ಲಿ ನಮಗಿರುವ ಉದ್ದೇಶವಾಗಿದೆ. ಟೆಕ್ನಾಲಜಿ ನೇತೃತ್ವದ ವಿಧಾನದಿಂದ ಸಾಮಾಜಿಕ ಒಳಗೊಳ್ಳುವಿಕೆ, ನವೀನತೆ ಮತ್ತು ವಾಣಿಜ್ಯೋದ್ಯಮವನ್ನು ಸರಿದೂಗಿಸುವ ಮೂಲಕ ಜಗತ್ತಿಗೇ ವ್ಯತ್ಯಾಸವನ್ನು ಉಂಟುಮಾಡುವ ವಿಷಯದಲ್ಲಿ ನಾವು ಭಾವೋದ್ರಿಕ್ತರಾಗಿದ್ದೇವೆ.

ಈ ಪೂರ್ವಾಪರ ಸನ್ನಿವೇಶದಲ್ಲಿ, NITI ಆಯೋಗದೊಂದಿಗಿನ ನಮ್ಮ ಪಾಲುದಾರಿಕೆಯು ನಮ್ಮ ಸಂಸ್ಥೆಯ ಉದ್ದೇಶಕ್ಕೆ ಕೇಂದ್ರೀಯವಾಗಿದೆ. 'ಅಟಲ್ ಇನ್ನೋವೇಶನ್ ಮಿಷನ್' ಮೂಲಕ ನವೀನತೆಗಾಗಿರುವ ಬಲವಾದ ಪ್ರಚೋದನೆಯನ್ನು ಬೆಂಬಲಿಸುವುದು, ನಾಗರಿಕ ಸೇವೆಗಳ ವಿತರಣೆಯಲ್ಲಿ "ಡಿಜಿಟಲ್"ನ ಉನ್ನತ ಅಳವಡಿಕೆಗಾಗಿ ಒಂದು ನೀಲಿನಕ್ಷೆಯನ್ನು ಒದಗಿಸುವುದು ಮತ್ತು NITI ಜೊತೆ ಸೇರಿಕೊಂಡು "ಸ್ಕಿಲ್ ಇಂಡಿಯಾ (ಕೌಶಲ್ಯ ಭಾರತ)" ವಿಷಯದಲ್ಲಿ ಸರಕಾರದ ಮುನ್ನೆಚ್ಚರಿಕೆಯನ್ನು ಬೆಂಬಲಿಸುವುದು ಖಂಡಿತವಾಗಿಯೂ ನಮಗೆ ಸಿಕ್ಕಿರುವ ಗೌರವ ಮತ್ತು ಸುಯೋಗವಾಗಿದೆ.

'ಅಟಲ್ ಇನ್ನೋವೇಶನ್ ಮಿಷನ್'ನ ಒಂದು ಭಾಗವಾಗಿರುವ 'ಅಟಲ್ ಟಿಂಕರಿಂಗ್ ಲ್ಯಾಬ್ಸ್' ಅಪೂರ್ವವಾದ ಮುನ್ನೆಚ್ಚರಿಯಾಗಿದ್ದು, ಶಾಲಾ ವಿದ್ಯಾರ್ಥಿಗಳ ನಡುವೆ ನವೀನತೆ ಮತ್ತು ಉದ್ಯಮಶೀಲತೆಯ ಸಂಸ್ಕೃತಿಯನ್ನು ಪರಿಚಯಿಸಲು NITI ಆಯೋಗ್-ನ ಬೆಂಬಲದಿಂದ ಸರಕಾರಿ ಶಾಲೆಗಳಲ್ಲಿ ಕಾರ್ಯಕ್ಷೇತ್ರಗಳನ್ನು ಸ್ಥಾಪಿಸಲಾಗಿದೆ. ನವೀನತೆಯ ನಮ್ಮ ಸಾಬೀತಾದ ಪರಂಪರೆಯಿಂದಾಗಿ, ಯುವ ಪೀಳಿಗೆಯ ಪ್ರಗತಿಗೆ ತಂತ್ರಜ್ಞಾನವು ಕಾರ್ಯಸಾಧಕವಾಗುವಂತೆ ಮಾಡುವ ಪ್ರಯತ್ನದಲ್ಲಿ ಡೆಲ್ ಇ.ಎಮ್.ಸಿ ಪ್ರಮುಖವಾಗಿದೆ. ಈ ಕಾರ್ಯಕ್ಷೇತ್ರದಲ್ಲಿ ನಮಗಿರುವ ಪರಿಣಿತಿಯು, ವಿದ್ಯಾರ್ಥಿಗಳ ಸೃಜನಾತ್ಮಕ ಕಲ್ಪನೆಯ (ಕ್ರಿಯೇಟಿವ್ ಟಿಂಕರಿಂಗ್) ಪ್ರಯಾಣದಲ್ಲಿ ಅವರಿಗೆ ದೃಢವಾದ ಬೆಂಬಲವನ್ನು ನೀಡುವ ಮೂಲಕ ಅವರಿಗೆ ಸಲಹೆ ನೀಡಲು ಮತ್ತು ಮಾರ್ಗದರ್ಶಿಸಲು ಸಹಾಯ ಮಾಡಿದೆ. ಇದು ಸಕಾರಾತ್ಮಕ ಮತ್ತು ಪ್ರಭಾವಶಾಲಿ ಫಲಿತಾಂಶಗಳನ್ನು ಪ್ರಚೋದಿಸಲು ಇನ್ನಷ್ಟು ನೆರವು ನೀಡಿದೆ. ಈ ಕಾರ್ಯಕ್ರಮವು ಪ್ರತಿಭೆಯನ್ನು ಗುರುತಿಸಲು, ಕುತೂಹಲವನ್ನು ಕೆರಳಿಸಲು ಮತ್ತು ಸೃಜನಾತ್ಮಕ ಚಿಂತಕರನ್ನು ಉತ್ಪಾದಿಸಲು ಅಪಾರವಾದ ಸಾಮರ್ಥ್ಯವನ್ನು ಹೊಂದಿದ್ದು, ಇಂಥವರು ನೈಜವಾದ ಜಾಗತಿಕ ಸವಾಲುಗಳಿಗೆ ಪರಿಹಾರಗಳನ್ನು ಒದಗಿಸುವವರಾಗಿರುತ್ತಾರೆ.

'ತಯಾರಕ (ಮೇಕರ್)' ಮನೋಭಾವವನ್ನು ಉತ್ತೇಜಿಸುವುದರಲ್ಲಿ NITI ಆಯೋಗ್-ನೊಂದಿಗೆ ಪಾಲುದಾರರಾಗಲು ನಾವು ಉತ್ಸುಕರಾಗಿದ್ದೇವೆ ಮತ್ತು ಈ ಮುನ್ನೆಚ್ಚರಿಯು ಯುವಜನರಲ್ಲಿ ಉದ್ಯಮಶೀಲ ಭಾವನೆಯನ್ನು ಪ್ರಚೋದಿಸುತ್ತದೆ ಮತ್ತು ವ್ಯಾಪಕವಾಗಿ ನವೀನತೆಯನ್ನು ಹುರಿದುಂಬಿಸುತ್ತದೆ ಎಂಬ ಆಶಾವಾದ ನಮಗಿದೆ. "ನವ ಭಾರತ"ಕ್ಕೆ ಬಲವನ್ನು ನೀಡುವ ಹೆಚ್ಚಿನ ಪರಿವರ್ತಕರು ಮತ್ತು ಉದ್ಯಮಿಗಳನ್ನು ರಚಿಸುವಂಥ ಒಂದು ಪ್ರಯಾಣಕ್ಕಾಗಿ ನಾವು ಎದುರು ನೋಡುತ್ತೇವೆ.

ಅಲೋಕ್ ಓಹ್ರಿ



**ಡಾ. ಅಂಜಲೀ ಪ್ರಕಾಶ್**
ಅಧ್ಯಕ್ಷರು
ಲರ್ನಿಂಗ್ ಲಿಂಕ್ಸ್ ಫೌಂಡೇಶನ್

# ಸಂದೇಶ

ಆಲ್ಬರ್ಟ್ ಐನ್ಸ್ಟೈನ್ ಒಮ್ಮೆ ಹೇಳಿದ್ದು: "ನನ್ನಲ್ಲಿ ವಿಶೇಷ ಪ್ರತಿಭೆ ಇಲ್ಲ. ನನ್ನಲ್ಲಿ ಭಾವೋದ್ರಿಕ್ತ ಕುತೂಹಲ ತುಂಬಿದೆ ಅಷ್ಟೆ."

ಮಾಡಲಾಗುತ್ತಿರುವ ಎಲ್ಲ ವಿಷಯಗಳಲ್ಲಿ ಮತ್ತು ಅದನ್ನು ಹೇಗೆ ಮಾಡಲಾಗುತ್ತಿದೆ ಎಂಬುದರಲ್ಲಿ ನವೀನತೆಯು ಮೇಲುಗೈ ಪಡೆಯುತ್ತಿರುವಂಥ ಈ ಯುಗದಲ್ಲಿ, 'ಕುತೂಹಲ' ಮತ್ತು 'ಸೃಜನಶೀಲತೆ'ಗಳು ಪ್ರಮುಖ ಸ್ಥಾನವನ್ನು ಆಕ್ರಮಿಸುತ್ತವೆ ಮತ್ತು ಗಮನದ ಕೇಂದ್ರ ಬಿಂದುವಾಗಿವೆ. ಇವು ಅತ್ಯಂತ ಜಟಿಲವಾದ ಜಾಗತಿಕ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಪ್ರಮುಖ ಪಾತ್ರವನ್ನು ಹೊಂದಿವೆ. ನಾವು ಮುಂದಿನ ಪೀಳಿಗೆಯವರನ್ನು ಜಿಜ್ಞಾಸೆಯುಳ್ಳ ಸಮಸ್ಯೆ-ಪರಿಹಾರಕರನ್ನಾಗಿ ಬೆಳೆಸಲು ಬಯಸುವುದಾದರೆ, ಕೇವಲ ಬದಲಾವಣೆಗೆ ಹೊಂದಿಕೊಳ್ಳುವವರಾಗಿರುವ ಬದಲು ಬದಲಾವಣೆಯನ್ನು ಮುನ್ನಡೆಸಲು ಅವರನ್ನು ಸಿದ್ಧಪಡಿಸಬೇಕಾದರೆ, ಅನ್ವೇಷಿಸಲು ಮತ್ತು ಪ್ರಯೋಗ ಮಾಡಲು ಅವರಿಗೆ ಸಾಕಷ್ಟು ಅವಕಾಶಗಳು ದೊರಕುವುದನ್ನು ನಾವು ಖಚಿತಪಡಿಸಿಕೊಳ್ಳಬೇಕು. ಇದನ್ನು ಸಾಧಿಸಲಿಕ್ಕಾಗಿ, NITI ಆಯೋಗ್-ನ ಪ್ರಮುಖ ಮುನ್ನೆಜ್ಜೆಯಾದ 'ಅಟಲ್ ಇನ್ನೋವೇಶನ್ ಮಿಷನ್,' ದೇಶದಾದ್ಯಂತ ನವೀನತೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುತ್ತದೆ. ಮಕ್ಕಳಲ್ಲಿ ಕುತೂಹಲ ಮತ್ತು ಸೃಜನಶೀಲತೆಯನ್ನು ಬೆಳೆಸಲು ಇಂಥ ರೀತಿಯ ಮುನ್ನೆಜ್ಜೆಯು ಅತ್ಯಗತ್ಯವಾಗಿತ್ತು, ಏಕೆಂದರೆ ಈ ಮಕ್ಕಳೇ ಉತ್ತಮ ನಾಳೆಗಳನ್ನು ನಿರ್ಮಿಸಬಲ್ಲರು.

'ಅಟಲ್ ಇನ್ನೋವೇಶನ್ ಮಿಷನ್'ನಿಂದ ಮಾಡಲಾಗುತ್ತಿರುವ ಕೆಲಸಕ್ಕೆ ನನ್ನ ಕೊಡುಗೆಯನ್ನು ನೀಡುವುದು ನನಗೆ ಬಹಳ ಸಂತೋಷವನ್ನು ತರುತ್ತದೆ. ಬದಲಾವಣೆಯ ಮಾರ್ಗದರ್ಶಿಯಾಗಿರುವ ನನಗೆ, 'ಅಟಲ್ ಟಿಂಕರಿಂಗ್ ಲ್ಯಾಬ್ಸ್' (ATL) ಕೇವಲ ವಿದ್ಯಾರ್ಥಿಗಳು ಕಲಿಯುವ ರೀತಿಯಲ್ಲಿ ಮಾತ್ರವಲ್ಲ, ಅದಕ್ಕಿಂತಲೂ ಪ್ರಾಮುಖ್ಯವಾಗಿ ತಮ್ಮ ಸಮುದಾಯಗಳಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಲು ಅವರು ತಮ್ಮ ಕಲಿಕೆಯನ್ನು ಹೇಗೆ ಅನ್ವಯಿಸುತ್ತಾರೆ ಎಂಬುದರಲ್ಲಿ ಸಹ ಬದಲಾವಣೆಯನ್ನು ತಂದಿದೆ ಎಂಬುದನ್ನು ನಿಕಟವಾಗಿ ಗಮನಿಸುವ ಅವಕಾಶ ನನಗೆ ಸಿಕ್ಕಿತ್ತು. ವಿದ್ಯಾರ್ಥಿಗಳು ಕೆಲಸ ಮಾಡುವ ಹೊಸ ಹೊಸ ವಿಧಾನಗಳನ್ನು ಪ್ರಯತ್ನಿಸುವುದರಲ್ಲಿ ಹೆಚ್ಚು ಆಸಕ್ತರಾಗಿರುವುದು ಮತ್ತು ತಮ್ಮ ಐಡಿಯಾಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಉತ್ಸುಕರಾಗಿರುವುದು ನಿಜವಾಗಿಯೂ ಗಮನಾರ್ಹವಾದ ಬದಲಾವಣೆಯಾಗಿದೆ. ಜಟಿಲವಾದ ಮತ್ತು ಬಹುಬೇಗ ಬದಲಾಗುವ ಭಾವೀ ಪರಿಸರದ ಬೇಡಿಕೆಗಳನ್ನು ಪೂರೈಸಲು ಅವರು ಸಹಕಾರ, ಸಮಸ್ಯೆ ಬಗೆಹರಿಸುವಿಕೆ, ಸೃಜನಶೀಲತೆ ಮತ್ತು ನಿರ್ಣಾಯಕ ಚಿಂತನೆಯಂಥ ನವ ಯುಗದ ಕೌಶಲಗಳನ್ನು ಸಹ ಬೆಳೆಸಿಕೊಳ್ಳುತ್ತಿದ್ದಾರೆ. ಲರ್ನಿಂಗ್ ಲಿಂಕ್ಸ್ ಫೌಂಡೇಶನ್ ನೇತೃತ್ವದಲ್ಲಿ ATL ಮುನ್ನೆಜ್ಜೆಗಳನ್ನು ಅಳವಡಿಸಿಕೊಂಡಿರುವ ಶಾಲೆಗಳ ವಿದ್ಯಾರ್ಥಿಗಳು ಅಂತರರಾಷ್ಟ್ರೀಯ ವೇದಿಗಳಲ್ಲಿ ಪ್ರಶಸ್ತಿಗಳನ್ನು ಸಹ ಗೆದ್ದಿದ್ದಾರೆ.

ಇಷ್ಟರ ತನಕದ ಪ್ರಯಾಣವು ಅತ್ಯದ್ಭುತಕರವಾಗಿ ಕಂಡುಬಂದಿದೆ ಮತ್ತು ದೇಶದಾದ್ಯಂತ ಶಾಲೆಗಳಲ್ಲಿ ಟಿಂಕರಿಂಗ್ ಅನ್ನು ಪರಿಚಯಿಸುತ್ತಾ ಹೋದಂತೆ ಇದು ಇನ್ನಷ್ಟು ಅದ್ಭುತಕರವಾಗುವ ಭರವಸೆಯಿದೆ. ಭಾರತದಲ್ಲಿ ಶಿಕ್ಷಣವನ್ನು ಮುಂದಿನ ಹಂತಕ್ಕೆ ಏರಿಸುವಂಥ ಒಂದು ಮುನ್ನೆಜ್ಜೆಯಲ್ಲಿ ಲರ್ನಿಂಗ್ ಲಿಂಕ್ಸ್ ಫೌಂಡೇಶನ್ ಪಾಲುದಾರಿಕೆ ಹೊಂದಿರುವುದು ನಿಜಕ್ಕೂ ಗೌರವಯುತವಾಗಿದೆ. ತನ್ನ ಭವಿಷ್ಯದ ಪ್ರಯತ್ನಗಳಲ್ಲಿ 'ಅಟಲ್ ಇನ್ನೋವೇಶನ್ ಮಿಷನ್'ಗೆ ಸರ್ವ ಯಶಸ್ಸೂ ಸಿಗಲಿ ಎಂದು ನಾನು ಹಾರೈಸುತ್ತೇನೆ.

Anjlee Prakash
ಡಾ. ಅಂಜಲೀ ಪ್ರಕಾಶ್

# ಮುನ್ನುಡಿ

ನಮ್ಮ ಮಾಜಿ ಪ್ರಧಾನ ಮಂತ್ರಿಯಾಗಿದ್ದ ದಿವಂಗತ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರು, ಈ ದೇಶದ ಭವಿಷ್ಯವು ಯುವಜನರ ಕೈಯಲ್ಲಿದೆ ಎಂದು ನಂಬಿದ್ದರು ಮತ್ತು ಅವರ ಪರಂಪರೆಯ ಜ್ಞಾಪಕಾರ್ಥವಾಗಿ ಹೆಸರಿಡಲಾಗಿರುವ 'ಅಟಲ್ ಇನ್ನೋವೇಶನ್ ಮಿಷನ್,' ಅವರ ಕನಸುಗಳನ್ನು ನನಸಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಒಂದು ಪ್ರಯತ್ನವಾಗಿದೆ.

'ಅಟಲ್ ಇನ್ನೋವೇಶನ್ ಮಿಷನ್' ಭಾರತ ಸರಕಾರದ ಒಂದು ಪ್ರಮುಖ ಮುನ್ನೆಜ್ಜೆಯಾಗಿದ್ದು, ಇದು NITI ಆಯೋಗ್-ದ ಆಶ್ರಯದಲ್ಲಿದ್ದು, ಸಾರ್ವಜನಿಕ-ಖಾಸಗಿ ಪಾಲುದಾರಿಕೆಗಳ ಸಹಾಯದಿಂದ ಭಾರತದಾದ್ಯಂತ ನವೀನತೆ ಮತ್ತು ಉದ್ಯಮಶೀಲತೆಯ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಗುರಿಯುಳ್ಳದ್ದಾಗಿದೆ. 'ಅಟಲ್ ಟಿಂಕರಿಂಗ್ ಲ್ಯಾಬ್' ಮುನ್ನೆಜ್ಜೆಯು ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಭಂಗಪಡಿಸುವ ಗುರಿಯನ್ನು ಹೊಂದಿದೆ. ಇದು ಮೂಲಭೂತ ಬದಲಾವಣೆಯನ್ನು ಉಂಟುಮಾಡುತ್ತಿದೆ, ಅಂದರೆ 12 ರಷ್ಟು ಚಿಕ್ಕ ವಯಸ್ಸಿನ ಮಕ್ಕಳನ್ನು ತಂತ್ರಜ್ಞಾನದ ನವೀನತೆಯ ಜಗತ್ತಿಗೆ ಪರಿಚಯಿಸಲಾಗುತ್ತಿದೆ ಮತ್ತು ಭಾರತೀಯ ಶಾಲೆಗಳಲ್ಲಿ ಸಾಂಸ್ಕೃತಿಕವಾಗಿ ಭಿನ್ನವಾಗಿರುವಂಥ ಒಂದು ಅತಿ ಸೂಕ್ಷ್ಮ ವಾತಾವರಣವನ್ನು ಅವರು ಅನುಭವಿಸುತ್ತಿದ್ದು, ಇದು ಒಂದು ನಿರ್ದಿಷ್ಟ ಅಥವಾ ಸ್ಥಿರವಾದ ಪಠ್ಯಕ್ರಮವಿಲ್ಲದೇ ಅವರ ಆಸಕ್ತಿಯ ಕ್ಷೇತ್ರದಲ್ಲಿ ಕೆಲಸ ಮಾಡಲು ಅನುವು ಮಾಡಿಕೊಡುತ್ತಿದೆ. ATL ನ ಸಹಾಯದಿಂದಾಗಿ, ಸಮಸ್ಯೆಯನ್ನು ಬಗೆಹರಿಸುವುದು ಅವರ ನಡವಳಿಕೆಯ ಅವಿಭಾಜ್ಯ ಅಂಗವಾಗಿ ಪರಿಣಮಿಸಿದೆ. ಟಿಂಕರಿಂಗ್ ಲ್ಯಾಬ್ ಮಿಷನ್ ಈಗ ರಾಷ್ಟ್ರದಾದ್ಯಂತ ಸಾಮೂಹಿಕ ಚಳುವಳಿಯನ್ನು ಹುರಿದುಂಬಿಸುತ್ತಿದೆ ಮತ್ತು ಜನಸಾಮಾನ್ಯರಲ್ಲಿ ಲಕ್ಷಾಂತರ ಯುವ ಪ್ರೌಢ ಶಾಲಾ ಪರಿವರ್ತಕರನ್ನು ಸೃಷ್ಟಿಸುತ್ತಿದೆ. ಇದು ಸೃಜನಶೀಲತೆ, ನವೀನತೆ, ವಿಮರ್ಶಾತ್ಮಕ ಆಲೋಚನೆ, ಸಾಮಾಜಿಕ ಮತ್ತು ವಿಭಿನ್ನ-ಸಂಸ್ಕೃತಿಯ ಸಹಯೋಗ, ಎಥಿಕಲ್ ಲೀಡರ್ಶಿಪ್ ಇನ್ನು ಮುಂತಾದ ಕೌಶಲಗಳನ್ನೂ ಸೇರಿಸಿ 21ನೇ ಶತಮಾನಕ್ಕೆ ನಿರ್ಣಾಯಕವಾಗಿರುವ ಕೌಶಲಗಳನ್ನು ಅಭಿವೃದ್ಧಿಪಡಿಸುವುದರಲ್ಲಿ ಯುವ ವಿದ್ಯಾರ್ಥಿಗಳಿಗೆ ಕ್ರಮಬದ್ಧವಾಗಿ ಸಹಾಯವನ್ನೂ ಮಾಡುತ್ತಿದೆ.

ಅಟಲ್ ಟಿಂಕರಿಂಗ್ ಲ್ಯಾಬ್ ಎಂಬುದು, ಶಾಲಾ ಮಕ್ಕಳ ನಡುವೆ ನವೀನತೆ ಮತ್ತು ಉದ್ಯಮಶೀಲತೆಯ ಘಾತೀಯ ಅಲೆಯನ್ನು ಸೃಷ್ಟಿಸಲು ಪ್ರೋತ್ಸಾಹವು ಉತ್ತಮ ಆರಂಭವಾಗಿದೆ ಎಂಬ ತತ್ವಶಾಸ್ತ್ರದ ಮೇಲೆ ಆಧಾರಿತವಾಗಿದೆ. ತಮ್ಮ ಆವಿಷ್ಕಾರಗಳನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಲು ಮತ್ತು ಅವುಗಳನ್ನು ಸಂಭವನೀಯ ಬಳಕೆದಾರರೊಂದಿಗೆ ಪರೀಕ್ಷಿಸಲು ಚಿಕ್ಕ ಮಕ್ಕಳಿಗೆ ಮಾರ್ಗದರ್ಶನ ಬೆಂಬಲವನ್ನು ಪಡೆಯುವ ಕಟ್ಟಾಸೆಯಿದೆ. ಇದು ಸಾರ್ವಜನಿಕ-ಖಾಸಗಿ ಪಾಲುದಾರಿಕೆಯ ಸಹಾಯದಿಂದ, ಗ್ರಾಮೀಣ-ನಗರ ವಿಭಜನೆ ಮತ್ತು ಸರಕಾರೀ-ಖಾಸಗಿ ವಿಭಜನೆಯ ಹೊರತಾಗಿಯೂ ಎಲ್ಲ ಪ್ರದೇಶಗಳಿಗೆ ಮತ್ತು ಎಲ್ಲ ಮಕ್ಕಳಿಗೆ ಸಮಾನ ಅವಕಾಶವನ್ನು ಒದಗಿಸುವ ಮೂಲಕ ನವೀನತೆಗಾಗಿ ಅಂತರ್ಗತ ಮಾದರಿಯನ್ನು ನಿರ್ಮಿಸುವ ಪ್ರಯತ್ನವಾಗಿದೆ.

'ಅಟಲ್ ಟಿಂಕರಿಂಗ್ ಲ್ಯಾಬ್ ಹ್ಯಾಂಡ್-ಬುಕ್ (ಕೈಪಿಡಿ),' 2016 ರಲ್ಲಿ ಭಾರತದಲ್ಲಿ ಪ್ರಾರಂಭವಾದ ಟಿಂಕರಿಂಗ್ ಚಳುವಳಿಯ ಮೂರು ಮುಖ್ಯ ಅಂಶಗಳನ್ನು ಸೆರೆಹಿಡಿಯುವ ಒಂದು ಪ್ರಯತ್ನವಾಗಿದೆ. ಮೊದಲನೆಯದಾಗಿ, ಭಾರತದ ಯಾವುದೇ ಶಾಲೆಯಲ್ಲಿ ಅಥವಾ ಜಾಗತಿಕವಾಗಿ ಒಂದು ಅಟಲ್ ಟಿಂಕರಿಂಗ್ ಲ್ಯಾಬ್ ಅನ್ನು ಸ್ಥಾಪಿಸಲು ಅರ್ಜಿಹಾಕುವ ಮತ್ತು ಆಯ್ಕೆಯನ್ನು ಮಾಡುವ ಕಾರ್ಯವಿಧಾನವನ್ನು ವಿವರಿಸಲಾಗಿದೆ. ಎರಡನೆಯದಾಗಿ, ವಿದ್ಯಾರ್ಥಿಗಳು, ಶಿಕ್ಷಕರು, ಮಾರ್ಗದರ್ಶಕರು, ಪೋಷಕರು, ಸ್ಥಳೀಯ ಸಮುದಾಯದ ಸದಸ್ಯರು, ಶೈಕ್ಷಣಿಕ ಸಂಸ್ಥೆಗಳು ಮತ್ತು ಖಾಸಗಿ ಉದ್ಯಮಗಳನ್ನು ತೊಡಗಿಸಿಕೊಳ್ಳುವ ಮೂಲಕ ಒಂದು ರೋಮಾಂಚಕ ಸಮುದಾಯವನ್ನು ಸೃಷ್ಟಿಸುವ ವಿಧಾನಗಳನ್ನು ಚರ್ಚಿಸಲಾಗಿದೆ. ಭಾರತದ ಬೇರೆ ಬೇರೆ ರಾಜ್ಯಗಳನ್ನು ಪ್ರತಿನಿಧಿಸುವಂಥ ಸಫಲದಾಯಕ ಕೇಸ್ ಸ್ಟಡೀಸ್-ನಲ್ಲಿ ಕೆಲವನ್ನು ಸಹ ಇಲ್ಲಿ ಹೈಲೈಟ್ ಮಾಡಲಾಗಿದೆ. ಮೂರನೇಯದಾಗಿ, ಅಟಲ್ ಟಿಂಕರಿಂಗ್ ಲ್ಯಾಬ್ ನಿಂದ ಉಂಟಾಗಿರುವ ಫಲಿತಾಂಶ ಮತ್ತು ಪರಿಣಾಮವನ್ನು ಪ್ರದರ್ಶಿಸಲಾಗಿದೆ ಮತ್ತು ಇದರಲ್ಲಿ ಕಳೆದ ಎರಡು ವರ್ಷಗಳಲ್ಲಿ ಮಾಡಲಾಗಿರುವ ಆವಿಷ್ಕಾರಗಳ ಆಚರಣೆ ಮತ್ತು ಪುರಸ್ಕಾರದ ಕೆಲವು ಉದಾಹರಣೆಗಳನ್ನು ಸಹ ಸೇರಿಸಲಾಗಿದೆ.

ಅಟಲ್ ಟಿಂಕರಿಂಗ್ ಲ್ಯಾಬ್ ಹ್ಯಾಂಡ್-ಬುಕ್ (ಕೈಪಿಡಿ) ಅನ್ನು ಸಿದ್ಧಪಡಿಸುವುದರಲ್ಲಿ ನಾವು ಆಳವಾಗಿ ಭಾಗವಹಿಸುವಂಥ ವಿಧಾನವನ್ನು ಅನುಸರಿಸಿದ್ದೇವೆ. ಇದು ಭಾರತದಾದ್ಯಂತ ಇರುವ ಅತ್ಯುತ್ತಮ ಅಟಲ್ ಟಿಂಕರಿಂಗ್ ಲ್ಯಾಬ್ಸ್-ಗಳಲ್ಲಿ ಕೆಲವು ಲ್ಯಾಬ್ಗಳಿಂದ ಅಭಿಪ್ರಾಯಗಳು, ಒಳನೋಟಗಳು, ಅನುಭವಗಳು ಮತ್ತು ಕೇಸ್ ಸ್ಟಡೀಸ್-ಗಳನ್ನು ಸೆರೆಹಿಡಿಯುತ್ತದೆ. ಶಾಲೆಗಳಿಗೆ ಮತ್ತು ಮಾರ್ಗದರ್ಶಕರಿಗೆ ಟಿಂಕರಿಂಗ್ ಮತ್ತು ನವೀನತೆಗಳ ಒಟ್ಟಾರೆ ಅನುಭವವನ್ನು ಉತ್ತಮಗೊಳಿಸಲು ಅನೇಕ ಪಾಲುದಾರರಿಂದ ನಿರಂತರವಾದ ಫೀಡ್-ಬ್ಯಾಕನ್ನು ಪಡೆಯಲಾಗಿದೆ ಮತ್ತು ಪ್ರಮುಖ ಕಲಿಕೆಗಳಲ್ಲಿ ಕೆಲವನ್ನು ಅಟಲ್ ಟಿಂಕರಿಂಗ್ ಲ್ಯಾಬ್ ಹ್ಯಾಂಡ್-ಬುಕ್ ನಲ್ಲಿ ಹಂಚಿಕೊಳ್ಳಲಾಗುತ್ತಿದೆ.

ಸಾರ್ವಜನಿಕ–ಖಾಸಗಿ ಪಾಲುದಾರಿಕೆ ಹಾಗೂ ಕೇಂದ್ರ–ರಾಜ್ಯ ಸಹಕಾರದ ಮೂಲಕ, ಅಟಲ್ ಟಿಂಕರಿಂಗ್ ಲ್ಯಾಬ್ ಮುನ್ನೆಜ್ಜೆಗೆ ಸುಗಮವಾದ ಸ್ಕೇಲ್ ಅಪ್ ವಿಧಾನಕ್ಕೆ ಆಧಾರವನ್ನು ಒದಗಿಸಸಾಧ್ಯವಿರುವ ಕ್ರಿಯಾ ಯೋಜನೆಯನ್ನು ಪ್ರಸ್ತುತಪಡಿಸುವುದೇ ಈಗ ನಡೆಯುತ್ತಿರುವ ಪ್ರಯತ್ನವಾಗಿದೆ. ಈ ಹ್ಯಾಂಡ್–ಬುಕ್ನ ಉದ್ದೇಶಿತ ಪ್ರೇಕ್ಷಕರಲ್ಲಿ ಯಾರೆಲ್ಲಾ ಸೇರಿದ್ದಾರೆಂದರೆ, ಸ್ಕೂಲ್ ಮ್ಯಾನೇಜ್ಮೆಂಟ್, ATL ಇನ್–ಚಾರ್ಜುಗಳು, ವಿದ್ಯಾರ್ಥಿ ಅನ್ವೇಷಕರು, ಮಾರ್ಗದರ್ಶಕರು, ಕಾರ್ಪೋರೇಟ್ ಸಂಸ್ಥೆಗಳು, ರಾಜ್ಯ ಸರಕಾರದ ಅಧಿಕಾರಿಗಳು ಹಾಗೂ ಇನ್ನಿತರರು. ಮತ್ತು ಈ ಮುನ್ನೆಜ್ಜೆಯು ತನ್ನ ನಿಜವಾದ ಸಾಮರ್ಥ್ಯವನ್ನು ತಲಪುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಇವರಲ್ಲಿ ಪ್ರತಿಯೊಬ್ಬರೂ ನಿರ್ದಿಷ್ಟ ಪಾತ್ರವನ್ನು ನಿರ್ವಹಿಸಲಿಕ್ಕಿದೆ. ಪ್ರೌಢ ಶಾಲೆಯ ಮಟ್ಟದಲ್ಲಿ ಟಿಂಕರಿಂಗ್ ಮತ್ತು ನವೀನತೆಗೆ ಸಮರ್ಥನೀಯ ಹಾದಿಯನ್ನು ಸೃಷ್ಟಿಸುವ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಪಾಲುದಾರರನ್ನು ಒಟ್ಟುಗೂಡಿಸಲು ಈ ಡಾಕ್ಯುಮೆಂಟ್ ಸಹಾಯ ಮಾಡುತ್ತದೆ ಎಂದು ನಾವು ಭಾವಿಸುತ್ತೇವೆ.

ಈ ಸಂದರ್ಭದಲ್ಲಿ ನಾನು NITI ಆಯೋಗ್–ನ ಉಪಾಧ್ಯಕ್ಷರಾದ ಡಾ. ರಾಜೀವ್ ಕುಮಾರ್, ಸಿಇಒ ಆಗಿರುವ ಶ್ರೀ ಅಮಿತಾಭ್ ಕಾಂತ್ ಮತ್ತು ಮಿಷನ್ ಡೈರೆಕ್ಟರ್ ಶ್ರೀ ರಾಮನಾಥನ್ ರಮಣನ್, ಅಟಲ್ ಇನ್ನೋವೇಶನ್ ಮಿಷನ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ, ಏಕೆಂದರೆ ATL ಅನ್ನು ಭಾರತದಾದ್ಯಂತ ಒಂದು ರಾಷ್ಟ್ರೀಯ ಚಳುವಳಿಯಾಗಿ ಮಾಡುವ ನಿಟ್ಟಿನಲ್ಲಿ ಅವರು ಉತ್ಸಾಹಭರಿತ ನಾಯಕತ್ವ ಹಾಗೂ ಸತತ ಬೆಂಬಲವನ್ನು ನೀಡಿದ್ದಾರೆ. ಪ್ರೊಫೆಸರ್ ಕೆ. ವಿಜಯ್ ರಾಘವನ್ ಮತ್ತು ಡಾ. ರೇಣು ಸ್ವರೂಪ್ ಅವರನ್ನೂ ಸೇರಿಸಿ AIMನ ಮಿಷನ್ ಹೈ ಲೆವೆಲ್ ಕಮಿಟಿಯ ಎಲ್ಲ ಸದಸ್ಯರಿಗೆ, ಕುಮಾರಿ ಅಣ್ಣಾ ರಾಯ್, ಡಾ. ಮುರುಳಿಕೃಷ್ಣ ಕುಮಾರ್ ಮತ್ತು ಶ್ರೀ ಯು. ಕೆ. ಶರ್ಮಾರವರನ್ನೂ ಸೇರಿಸಿ NITI ಆಯೋಗ್–ನ ಸದಸ್ಯರಿಗೆ ನಾನು ಹೃತ್ಪೂರ್ವಕ ಕೃತಜ್ಞತೆ ಮತ್ತು ಧನ್ಯವಾದಗಳನ್ನು ವ್ಯಕ್ತಪಡಿಸಲು ಬಯಸುತ್ತೇನೆ. ಏಕೆಂದರೆ ಇವರೆಲ್ಲರೂ AIMನ ದೃಷ್ಟಿಕೋನವನ್ನು ರೂಪಿಸುವ ನಿಟ್ಟಿನಲ್ಲಿ ನಮಗೆ ನಿರಂತರವಾಗಿ ಮಾರ್ಗದರ್ಶನ ಮತ್ತು ಬೆಂಬಲವನ್ನು ನೀಡುತ್ತಿದ್ದಾರೆ.

ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಜೈವಿಕ ತಂತ್ರಜ್ಞಾನ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಬೌದ್ಧಿಕ ಆಸ್ತಿ ಹಕ್ಕುಗಳ ಪ್ರಚಾರ ಮತ್ತು ನಿರ್ವಹಣೆಗಾಗಿರುವ ಕೋಶ, ಸ್ಟಾರ್ಟ್–ಅಪ್ ಇಂಡಿಯಾ, ಇನ್ವೆಸ್ಟ್ ಇಂಡಿಯಾ ಮತ್ತು ಕೈಗಾರಿಕಾ ನೀತಿ ಮತ್ತು ಪ್ರಚಾರ ಇಲಾಖೆಗೆ ನನ್ನ ಹೃದಯದಾಳದಿಂದ ಕೃತಜ್ಞತೆಯನ್ನು ತಿಳಿಸುತ್ತೇನೆ. ಏಕೆಂದರೆ ಹಲವಾರು ನವೀನ ನಿಗದಿತ ಕಾರ್ಯಕ್ರಮಗಳ ಮೂಲಕ ATLನ ಸಂಪೂರ್ಣ ಪ್ರಭಾವವನ್ನು ವರ್ಧಿಸುವುದರಲ್ಲಿ ಇವು ಸಾಕಷ್ಟು ಕೊಡುಗೆಯನ್ನು ನೀಡಿವೆ.

ATL ಒಂದು ರಾಷ್ಟ್ರಾದ್ಯಂತ ಹಮ್ಮಿಕೊಳ್ಳುವ ಕಾರ್ಯಕ್ರಮವಾಗಿದೆ ಮತ್ತು ಮೂಲಮಟ್ಟದಲ್ಲೇ ಭಾರೀ ಯಶಸ್ಸನ್ನು ಸಾಧಿಸಲು ಕೇಂದ್ರ ಹಾಗೂ ರಾಜ್ಯ ಎರಡೂ ಒಟ್ಟುಗೂಡಿ ಕಾರ್ಯನಡಿಸುವ ಅಗತ್ಯವಿದೆ. ಛತ್ತೀಸ್ಘಡ್, ಮಹಾರಾಷ್ಟ್ರ, ತೆಲಂಗಾಣ, ಆಂಧ್ರ ಪ್ರದೇಶ್ ಮತ್ತು ಗುಜರಾತ್ ರಾಜ್ಯ ಸರಕಾರಗಳ ಪ್ರಯತ್ನಗಳನ್ನು ನಾನು ವಿಶೇಷವಾಗಿ ಪ್ರಸ್ತಾಪಿಸಲು ಬಯಸುತ್ತೇನೆ. ತಮ್ಮ ತಮ್ಮ ರಾಜ್ಯಗಳಲ್ಲಿ ATL ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವುದರಲ್ಲಿ ಈ ರಾಜ್ಯ ಸರಕಾರಗಳು ಪೂರ್ವಭಾವಿಯಾಗಿ ಭಾಗವಹಿಸಿದ್ದವು.

ಐಐಟಿ ದೆಹಲಿ, ಐಐಟಿ ಮುಂಬೈ ಮತ್ತು ಇಂಟೆಲ್, ಐಬಿಎಮ್, ಡೆಲ್, ಲರ್ನಿಂಗ್ ಲಿಂಕ್ಸ್ ಫೌಂಡೇಶನ್, ಎಫ್ಐಸಿಇ, ಕೆಪಿಐಟಿ, ಮೈಕ್ರೋಸಾಫ್ಟ್, ನೆಟ್ವರ್ಕ್ ಕ್ಯಾಪಿಟಲ್, ಎಸ್ಎಪಿ, ಸ್ಟಾಟಾಸಿಸ್, ಟಿಜಿಇಎಲ್ಎಫ್, ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಡ್ಯುಕೇಷನ್, ವರ್ಕ್–ಬೆಂಚ್ ಪ್ರೋಜೆಕ್ಟ್, ಮೇಕರ್ಸ್ ಅಸಿಲಮ್, ಟಿ–ವರ್ಕ್ಸ್, ಎನ್ಮ್ಯೂಬ್ ಲ್ಯಾಬ್ಸ್ ಮತ್ತು ದಿ ಬೆಟರ್ ಇಂಡಿಯಾಗಳನ್ನೂ ಸೇರಿಸಿ ನಮ್ಮ ಎಲ್ಲ ಪಾಲುದಾರರಿಗೆ ಅವರಿಂದ ಸಿಕ್ಕಿದ ಸಹಕಾರ ಮತ್ತು ಬೆಂಬಲಕ್ಕಾಗಿ ನನ್ನ ವಿಶೇಷವಾದ ಅಭಿನಂದನೆಗಳು. ಏಕೆಂದರೆ ಭಾರತದಲ್ಲಿ ಟಿಂಕರಿಂಗ್ ಮತ್ತು ನವೀನತೆಯ ರೋಮಾಂಚಕ ಸಮುದಾಯವನ್ನು ನಿರ್ಮಿಸುವ ನಿಟ್ಟಿನಲ್ಲಿ ಇವು ಅಪಾರವಾದ ಕೊಡುಗೆಯನ್ನು ನೀಡಿವೆ ಮತ್ತು ವಚನಬದ್ಧತೆಯನ್ನು ತೋರಿಸಿವೆ. ೦ಖಬಒ ಇನ್ಕ್ಯುಬೇಟರ್ಸ್ ಆಗಿರುವ ಸಿ–ಕ್ಯಾಂಪ್, ಅಮೃತಾ ಟಿಬಿಐ, ಆರ್ಟೆಕ್, ಮತ್ತು ಟಿ.ಆರ್.ಇ.ಸಿ–ಎಸ್.ಟಿ.ಇ.ಪಿ ಅವರಿಗೆ ಸಹ ನಾನು ಧನ್ಯವಾದ ಅರ್ಪಿಸುತ್ತೇನೆ. ಇವು ೦ಖಿಐ ಸ್ಟೂಡೆಂಟ್ ಇನ್ನೋವೇಟರ್ ಪ್ರೋಗ್ರಾಮ್–ಗಳಿಗೆ ಬೆಂಬಲ ನೀಡಿವೆ ಮತ್ತು ವಿದ್ಯಾರ್ಥಿಗಳು ತಮ್ಮ ನವನವೀನ ಐಡಿಯಾಗಳನ್ನು ಮುಂದುವರಿಸುವುದರಲ್ಲಿ ಸಹಾಯ ಮಾಡಿವೆ. ನಮ್ಮ ಯುವ ಪರಿವರ್ತಕರು ನವೀನತೆಯ ಹಾದಿಯಲ್ಲಿ ಸಾಗುತ್ತಿರುವಾಗ ತಮ್ಮ ಕಥೆಗಳಿಂದ ಅವರನ್ನು ಪ್ರೇರೇಪಿಸಿರುವ ನಮ್ಮ ಎಲ್ಲ ಅತ್ಯುತ್ತಮ ಮಾರ್ಗದರ್ಶಕರಿಗೂ ನಾನು ಧನ್ಯವಾದ ತಿಳಿಸುತ್ತೇನೆ.

AIM ತಂಡಕ್ಕೆ ಸತತವಾಗಿ ಸ್ಫೂರ್ತಿಯ ಮೂಲವಾಗಿ ನಿಂತಿರುವುದಕ್ಕಾಗಿ ಇಡೀ ATL ಸಮುದಾಯಕ್ಕೆ, ಮಾರ್ಗದರ್ಶಕರಿಗೆ, ಶಿಕ್ಷಕರಿಗೆ, ವಿದ್ಯಾರ್ಥಿ ಪರಿವರ್ತಕರಿಗೆ ಮತ್ತು ಪೋಷಕರಿಗೆ ನನ್ನ ವಿಶೇಷವಾದ ಪ್ರಶಂಸಾ ನುಡಿಗಳು ಮತ್ತು ಕೃತಜ್ಞತೆಗಳು. ಅದ್ಭುತಕರವಾದ ತಂಡದ ಪ್ರಯತ್ನದಿಂದಾಗಿ ATLನ ಆರಂಭಿಕ ಯಶಸ್ಸಿನ ಕಥೆಗಳಲ್ಲಿ ಕೆಲವನ್ನು ಸಾಧಿಸಲು ಸಾಧ್ಯವಾಗಿದೆ. ATLಗಾಗಿರುವ ನಮ್ಮ ಎಲ್ಲ ಮುನ್ನೆಜ್ಜೆಗಳಲ್ಲಿ ಪಟ್ಟುಬಿಡದೇ ನಮ್ಮನ್ನು ಬೆಂಬಲಿಸುತ್ತಿರುವುದಕ್ಕಾಗಿ, AIMನಲ್ಲಿರುವ ನನ್ನ ಸಹೋದ್ಯೋಗಿಗಳಾದ ಡಾ. ಉನ್ನತ್ ಪಂಡಿತ್, ಶ್ರೀ ಮುಡಿತ್ ನರೈನ್, ಮಿಸ್ ಇಶಿತ ಅಗರ್ವಾಲ್, ಶ್ರೀ ಅರ್ನಾಬ್ ಕುಮಾರ್, ಶ್ರೀ ಸಕ್ಷಮ್ ಸಕ್ಸೇನಾ, ಮಿಸ್ ದಂಡಪಾಣಿ ವರ್ಷಾ, ಮಿಸ್ ಅದಿತಿ ಬ್ಯಾನರ್ಜಿ, ಶ್ರೀ ವೇದಾಂತ್ ಶರ್ಮಾ, ಶ್ರೀ ಅಕ್ಷತ್ ಬಾಗ್ಲಾ, ಶ್ರೀ ತಾರಂಗ್ ಗುಪ್ತಾ, ಶ್ರೀ ದೇಶ್ ಗೌರವ್ ಸೆಖ್ರಿ, ದಿವಂಗತ ಮಿಸ್ ಸುಪರ್ಣಾ ಜೈನ್, ಮಿಸ್ ಪವಿತ್ರ ಎಸ್. ರಂಗನ್, ಶ್ರೀ ಮನನ್ ಕಪೂರ್, ಮಿಸ್ ಅವಂತಿಕಾ ಬಹ್ಲ್, ಮಿಸ್ ಸೈಮಾ ನಫೀಸ್ ಮತ್ತು ಶ್ರೀ ಉಮರ್ ಅಹ್ಮದ್ ಅವರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಲು ಬಯಸುತ್ತೇನೆ. ಈ ಪುಸ್ತಕವನ್ನು ರಚಿಸುವಾಗ ಮತ್ತು ಬರೆಯುವ ಸಮಯದಲ್ಲಿ AIMನ ಡಾ. ಆಶಿಶ್ ನಾಯನ್, ಶ್ರೀ ರೋನಕ್ ಜೋಗೇಶ್ವರ್ ಮತ್ತು ಡೆಲ್–ಲರ್ನಿಂಗ್ ಲಿಂಕ್ಸ್ ಫೌಂಡೇಶನ್ ತಂಡವು ಬಹಳಷ್ಟು ಕಷ್ಟಪಟ್ಟು ಕೆಲಸ ಮಾಡಿತು ಮತ್ತು ನನಗೆ ಅಗತ್ಯವಿದ್ದ ಅತ್ಯಮೂಲ್ಯ ಬೆಂಬಲವನ್ನು ಒದಗಿಸಿತು.

ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪರಿವರ್ತಕರಾಗಿ ರೂಪಾಂತರಗೊಳ್ಳಲು ಮತ್ತು ಇಸವಿ 2022 ರಷ್ಟಕ್ಕೆ ಒಂದು 'ನವ ಭಾರತ'ವನ್ನು ವಿಕಸಿಸಲಿಕ್ಕಾಗಿ ಮುಂದಿನ ಹಾದಿಯನ್ನು ಸುಗಮಗೊಳಿಸುವಂಥ ಉದ್ಯಮಶೀಲತಾ ಮನೋಭಾವವನ್ನು ಬೆಳೆಸಿಕೊಳ್ಳಲು ಸಹಾಯ ಮಾಡಲಿಕ್ಕಾಗಿ, ದೇಶದ ಬೇರೆ ಬೇರೆ ಭಾಗಗಳಲ್ಲಿ ಮೂಲಮಟ್ಟದಲ್ಲೇ ಅಟಲ್ ಟಿಂಕರಿಂಗ್ ಲ್ಯಾಬ್ ಮುನ್ನೆಜ್ಜೆಯು ಹೇಗೆ ಕಾರ್ಯನಡಿಸುತ್ತಿದೆ ಎಂಬುದನ್ನು ಸೆರೆಹಿಡಿಯುವ ಮತ್ತು ಪ್ರದರ್ಶಿಸುವ ಪ್ರಯತ್ನವನ್ನು ಈ ಪುಸ್ತಕದ ಮೂಲಕ ಮಾಡಲಾಗುತ್ತಿದೆ. ಆದುದರಿಂದ ನಾವೆಲ್ಲರೂ ಒಟ್ಟಿಗೆ ಸೇರಿಕೊಂಡು ಅಟಲ್ ಟಿಂಕರಿಂಗ್ ಲ್ಯಾಬ್ನ ಜಗತ್ತನ್ನು ಗಹನವಾಗಿ ಪರಿಶೋಧಿಸೋಣ ಮತ್ತು ನಮ್ಮ ಕಿರಿಯ ಮನಸ್ಸುಗಳನ್ನು ನವೀನತೆಯ ಕಡೆಗೆ ಹುರಿದುಂಬಿಸೋಣ!

ಹ್ಯಾಪಿ ಟಿಂಕರಿಂಗ್ ☺

ಡಾ. ಆಯೆಷಾ ಚೌಧರಿ
ಅಟಲ್ ಇನ್ನೋವೇಶನ್ ಮಿಷನ್
NITI ಆಯೋಗ್



# ಪರಿವಿಡಿ


1. ಅಟಲ್ ಟಿಂಕರಿಂಗ್ ಲ್ಯಾಬಿನ ಉಗಮ 1

1.1 NITI ಆಯೋಗ್ 3

1.1.1 NITI ಆಯೋಗ್‌ನ ಸಂಯೋಜನೆ 4

1.2 ಅಟಲ್ ಇನ್ನೋವೇಶನ್ ಮಿಷನ್ 4

1.3 ಅಟಲ್ ಟಿಂಕರಿಂಗ್ ಲ್ಯಾಬ್‌ಗೆ ಪೀಠಿಕೆ 5

1.3.1 ಭಾರತಕ್ಕಾಗಿ ಅಟಲ್ ಟಿಂಕರಿಂಗ್ ಲ್ಯಾಬ್‌ನ ಮಹತ್ವ 6

1.3.2 ಅಟಲ್ ಟಿಂಕರಿಂಗ್ ಲ್ಯಾಬ್‌ನ ಧ್ಯೇಯಗಳು 6

1.3.3 ಅಟಲ್ ಟಿಂಕರಿಂಗ್ ಲ್ಯಾಬ್‌ನ ಪ್ರೋಗ್ರಾಮ್ ವಿನ್ಯಾಸ 6

2. ಅಟಲ್ ಟಿಂಕರಿಂಗ್ ಲ್ಯಾಬ್ ಇನ್ನೋವೇಶನ್ ಪ್ರಯಾಣದ ಪ್ರಾರಂಭ 9

2.1 ಸೆಲೆಕ್ಷನ್ ಪ್ರೋಸೆಸ್ ಮತ್ತು ಟೈಮ್‌ಲೈನ್ಸ್ 11

2.2 ಅಟಲ್ ಟಿಂಕರಿಂಗ್ ಲ್ಯಾಬ್ ಸಹಾಯ–ಧನ ವಿತರಣೆಗಾಗಿ ಅನುಸರಣೆ ಪ್ರಕ್ರಿಯೆ 12

2.2.1 ಡಾಕ್ಯುಮೆಂಟರಿ ಅನುಸರಣೆ 12

2.2.2 PFMS ಅನುಸರಣೆ 13

2.3 ಸಂಗ್ರಹಣೆ ಹಾಗೂ ಸಹಾಯ–ಧನ ನಿಧಿ ಬಳಕೆ ಮಾರ್ಗದರ್ಶನವನ್ನು ಅರ್ಥಮಾಡಿಕೊಳ್ಳುವುದು 13

2.4 ಸಂಗ್ರಹಣೆಗಾಗಿ ಸರಕಾರದ ಇ–ಮಾರ್ಕೆಟ್ ಪ್ಲೇಸನ್ನು ಅರ್ಥಮಾಡಿಕೊಳ್ಳುವುದು 14

3. ಅಟಲ್ ಟಿಂಕರಿಂಗ್ ಲ್ಯಾಬ್ ಅನ್ನು ಯಶಸ್ವಿಕರವಾಗಿ ನಿರ್ವಹಿಸುವುದು 17

3.1 ಅಟಲ್ ಟಿಂಕರಿಂಗ್ ಲ್ಯಾಬ್ ಜಾಗವನ್ನು ವಿನ್ಯಾಸಿಸುವುದು 19

3.2 ಸರಿಯಾದ ಮಾನವ ಸಂಪನ್ಮೂಲವನ್ನು ಗುರುತಿಸುವುದು 21

3.3 ಟಿಂಕರಿಂಗ್ನ ನಾಲ್ಕು ಹಂತಗಳ ಮೂಲಕ ಅಟಲ್ ಟಿಂಕರಿಂಗ್ ಲ್ಯಾಬ್ ಅನ್ನು ಶಾಲೆಯ ಪಠ್ಯಕ್ರಮದೊಂದಿಗೆ ಸಂಯೋಜಿಸುವುದು 23

3.4 ಹತ್ತಿರದ ಸಮುದಾಯ ಮತ್ತು ಅಟಲ್ ಟಿಂಕರಿಂಗ್ ಲ್ಯಾಬ್ ಭಾಗವಲ್ಲದ ಶಾಲೆಗಳನ್ನು ಒಳಗೂಡಿಸುವುದು 28

3.5 AIM, NITI ಆಯೋಗ್ ವೆಬ್ಸೈಟ್ ನಿಂದ ವಿಷಯ ಮತ್ತು ಸಂಪನ್ಮೂಲಗಳನ್ನು ಸದುಪಯೋಗಿಸಿಕೊಳ್ಳುವುದು 31

3.6 ಅಟಲ್ ಟಿಂಕರಿಂಗ್ ಲ್ಯಾಬ್ ಅನ್ನು ವ್ಯವಸ್ಥಾಪಿಸುವುದು 31

3.6.1 ಇನ್ವೆಂಟರಿ ಮ್ಯಾನೇಜ್ಮೆಂಟ್ 31

3.6.2 ಮಾಹಿತಿ ನಿರ್ವಹಣೆ 32

4. ಹುರುಪಿನ ಅಟಲ್ ಟಿಂಕರಿಂಗ್ ಲ್ಯಾಬ್ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವುದು 33

4.1 ಅಟಲ್ ಟಿಂಕರಿಂಗ್ ಲ್ಯಾಬ್ ಕಮ್ಯುನಿಟಿ ಡೇ 35

4.2 ಅಟಲ್ ಟಿಂಕರಿಂಗ್ ಲ್ಯಾಬ್ ಸ್ಕೂಲ್ ಆಫ್ ದ ಮಂತ್ ಚಾಲೆಂಜ್ 36

4.3 ಅಟಲ್ ಟಿಂಕರಿಂಗ್ ಲ್ಯಾಬ್ ಟಿಂಕರಿಂಗ್ ಫೆಸ್ಟಿವಲ್ 36

4.4 ಅಟಲ್ ಟಿಂಕರಿಂಗ್ ಲ್ಯಾಬ್ ಟಿಂಕರಿಂಗ್ ಮತ್ತು ಇನ್ನೋವೇಶನ್ ಮ್ಯಾರಥಾನ್ 37

4.5 ಅನ್ಬಾಕ್ಸ್ ಟಿಂಕರಿಂಗ್ - ಶಿಕ್ಷಕರ ತರಬೇತಿ ಕಾರ್ಯಕ್ರಮ 40

4.6 ಅಟಲ್ ಟಿಂಕರಿಂಗ್ ಲ್ಯಾಬ್ನೊಂದಿಗೆ ನಿರಂತರ ಸಂವಾದ 40

5. ಅಟಲ್ ಟಿಂಕರಿಂಗ್ ಲ್ಯಾಬ್ನ ಯಶಸ್ಸಿಗಾಗಿ ಮಾರ್ಗದರ್ಶನ 43

6. ಪ್ರಭಾವಶಾಲಿ ಅಟಲ್ ಟಿಂಕರಿಂಗ್ ಲ್ಯಾಬಿಗಾಗಿ ಸಹಯೋಗ 49

7. ಒಂದು ಅಟಲ್ ಟಿಂಕರಿಂಗ್ ಲ್ಯಾಬಿನ ಯಶಸ್ಸನ್ನು ಅಳೆಯುವುದು 55

7.1 ಮಾನಿಟರಿಂಗ್ ಡ್ಯಾಶ್ಬೋರ್ಡ್ 57

7.2 ಸೃಷ್ಟಿಸಲಾದ ಪ್ರಭಾವ 57

8. ಕನಸುಗಳನ್ನು ನನಸು ಮಾಡುವುದು: ಆವಿಷ್ಕಾರವನ್ನು ಆಚರಿಸುವುದು 59

8.1 ಅಟಲ್ ಟಿಂಕರಿಂಗ್ ಲ್ಯಾಬ್ ವಾಲ್ ಆಫ್ ಫೇಮ್ 61

8.2 ಸೋಶಿಯಲ್ ಮೀಡಿಯಾ ಕಥೆಗಳು 61

8.3 ಟಿಂಕರರ್ಸ್ ಅವಕಾಶಗಳು 61

***ಟಿಪ್ಪಣಿ:*** *ಈ ಡಾಕ್ಯುಮೆಂಟ್ ಹಲವಾರು ವೆಬ್ಲಿಂಕ್ಗಳನ್ನು ಮತ್ತು ಸಂಬಂಧಿತ QR ಕೋಡ್ಗಳನ್ನು ಹೊಂದಿದೆ. ಸಂಬಂಧಿತ ಡಾಕ್ಯುಮೆಂಟುಗಳನ್ನು ಮತ್ತು ವಿಡಿಯೋಗಳನ್ನು ವೆಬ್ಲಿಂಕನ್ನು ಕ್ಲಿಕ್ ಮಾಡುವ ಮೂಲಕ ಅಥವಾ ಒಂದು QR ಕೋಡ್ ಸ್ಕ್ಯಾನರ್ ಅಪ್ಲಿಕೇಶನ್—ಇದನ್ನು ಅಪ್ಲಿಕೇಶನ್ ಸ್ಟೋರ್ ಮೂಲಕ ಯಾವುದೇ ಸ್ಮಾರ್ಟ್–ಫೋನಿನಲ್ಲಿ ಡೌನ್ಲೋಡ್ ಮಾಡಬಹುದು —ಉಪಯೋಗಿಸಿ QR ಕೋಡನ್ನು ಸ್ಕ್ಯಾನ್ ಮಾಡುವುದರ ಮೂಲಕ ಆಕ್ಸೆಸ್ ಮಾಡಬಹುದು.*

# ಸಂಕ್ಷೇಪಣಗಳ ಪಟ್ಟಿ

| ಸಂಕ್ಷೇಪಣಗಳು | ಅರ್ಥವಿವರಣೆ |
|---|---|
| ATL | ಅಟಲ್ ಟಿಂಕರಿಂಗ್ ಲ್ಯಾಬ್ |
| AIC | ಅಟಲ್ ಇನ್ಕ್ಯುಬೇಶನ್ ಸೆಂಟರ್ |
| ARISE | ಅಟಲ್ ರಿಸರ್ಚ್ ಆಂಡ್ ಇನ್ನೋವೇಶನ್ ಇನ್ ಸ್ಮಾಲ್ ಎಂಟರ್ಪ್ರೈಸಸ್ |
| ANIC | ಅಟಲ್ ನ್ಯೂ ಇಂಡಿಯಾ ಚ್ಯಾಲೆಂಜಸ್ |
| MoC | ಮೆಂಟರ್ ಆಫ್ ಚೇಂಜ್ |
| PFMS | ಪಬ್ಲಿಕ್ ಫೈನಾನ್ಸ್ ಮ್ಯಾನೇಜ್ಮೆಂಟ್ ಸಿಸ್ಟಮ್ |
| MoA | ಮೆಮೊರಾಂಡಮ್ ಆಫ್ ಅಗ್ರೀಮೆಂಟ್ |
| AAB | ATL ಅಡ್ವೈಸರಿ ಬಾಡಿ |
| GeM | ಗವರ್ನಮೆಂಟ್ ಇ–ಮಾರ್ಕೆಟ್–ಪ್ಲೇಸ್ |
| CSR | ಕಾರ್ಪೋರೇಟ್ ಸೋಶಿಯಲ್ ರೆಸ್ಪಾನ್ಸಿಬಲಿಟಿ |
| SIP | ಸ್ಟೂಡೆಂಟ್ ಇನ್ನೋವೇಟರ್ ಪ್ರೋಗ್ರಾಮ್ |
| MSME | ಮೈಕ್ರೋ, ಸ್ಮಾಲ್ ಆಂಡ್ ಮೀಡಿಯಮ್ ಎಂಟರ್ಪ್ರೈಸಸ್ |
| IP | ಇನ್ಟಲೆಕ್ಚುಅಲ್ ಪ್ರಾಪರ್ಟಿ |

# ಕೋಷ್ಟಕಗಳ ಪಟ್ಟಿ


| ಸಂಖ್ಯೆ. | ವಿವರಣೆ |
| --- | --- |
| 1 | ATL ಟಿಂಕರಿಂಗ್ ಪ್ಲ್ಯಾನ್ |
| 2 | ಮಾದರಿ ATL ಶೆಡ್ಯೂಲ್ |

CHAPTER 1

# ಅಟಲ್ ಟಿಂಕರಿಂಗ್ ಲ್ಯಾಬಿನ ಉಗಮ

ಸಾಮಾಜಿಕ ಫಲಿತಾಂಶಗಳೊಂದಿಗೆ ವಿಜ್ಞಾನ, ತಂತ್ರಜ್ಞಾನ ಮತ್ತು ನವೀನತೆಗಳನ್ನು ಸಂಪರ್ಕಿಸುವುದು, ಭಾರತಕ್ಕೆ ಪ್ರಬಲವಾದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯನ್ನು ತೀವ್ರಗೊಳಿಸುತ್ತದೆ. ನವೀನತೆಯ ಜಾಗತಿಕ ಭೂಪಟದಲ್ಲಿ ಭಾರತವನ್ನು ಇರಿಸಲು ವಿಭಿನ್ನ ರೀತಿಯ ಅನೇಕ ರಚನಾತ್ಮಕ ಸುಧಾರಣೆಗಳನ್ನು ಕೈಗೊಳ್ಳಲಾಗುತ್ತಿದೆ. ಒಂದು ನವ ಭಾರತದ ಬೆಳವಣಿಗೆಯನ್ನು ವೇಗಗೊಳಿಸಲಿಕ್ಕಾಗಿ, ಕೇವಲ ನವೀನತೆಗೆ ನಡೆಸುವಂಥ ವೈಜ್ಞಾನಿಕ ಯೋಗ್ಯತೆಯನ್ನು ಉತ್ಪನ್ನಮಾಡುವುದು ಮಾತ್ರವಲ್ಲ, ಚಿಕ್ಕ ವಯಸ್ಸಿನಲ್ಲಿಯೇ ಸೃಜನಾತ್ಮಕ ಹಾಗೂ ನವೀನ ಮನೋರೂಢಿಗಳನ್ನು ಪೋಷಿಸುವಂಥ ಸಕ್ರಿಯ ಪರಿಸರವನ್ನು ಸೃಷ್ಟಿಸಲು ಶಿಕ್ಷಣ, ಸರಕಾರ ಮತ್ತು ಉದ್ಯಮದ ನಡುವೆ ಬಲವಾದ ಸಂಪರ್ಕಗಳನ್ನು ರಚಿಸಲಾಗುತ್ತಿದೆ[1]. ಸಾಂಪ್ರದಾಯಿಕ ಭಾರತೀಯ ಶಿಕ್ಷಣ ವ್ಯವಸ್ಥೆಯು ಉದ್ಯಮದ ತ್ವರಿತಗತಿಯಲ್ಲಿ ಬದಲಾಗುತ್ತಿರುವ ಆವಶ್ಯಕತೆಗಳನ್ನು ನಿರ್ವಹಿಸಲು ಶಕ್ತವಾಗಿಲ್ಲ ಮತ್ತು ಭಾರತದಲ್ಲಿನ ಶಾಲಾ ಶಿಕ್ಷಣವನ್ನು ನವೀನತೆಯಿಂದ ಭಿನ್ನ ರೀತಿಯಲ್ಲಿ ನಿರೂಪಿಸುವುದು ಅತ್ಯಗತ್ಯವಾಗಿತ್ತು. ಭಾರತದ ಇತಿಹಾಸದಲ್ಲೇ ಈ ರೀತಿಯ ಮೊದಲನೆಯ ಕಥೆಯನ್ನು ಮತ್ತು ಸರಕಾರದ ನೇತೃತ್ವದ ಅತಿ ದೊಡ್ಡ ಮುನ್ನೆಜ್ಜೆಯನ್ನು ಈ ಪುಸ್ತಕವು ವಿವರಿಸುತ್ತದೆ. ಇದು ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಭಂಗಪಡಿಸಲಿಕ್ಕಾಗಿ ಮತ್ತು ಸೃಜನಶೀಲತೆ, ನವೀನತೆ, ವಿಮರ್ಶಾತ್ಮಕ ಆಲೋಚನೆ, ಸಾಮಾಜಿಕ ಮತ್ತು ವಿಭಿನ್ನ–ಸಂಸ್ಕೃತಿಯ ಸಹಯೋಗ, ಎಥಿಕಲ್ ಲೀಡರ್ಶಿಪ್ ಇನ್ನು ಮುಂತಾದ ಕೌಶಲಗಳನ್ನೂ ಸೇರಿಸಿ 21ನೇ ಶತಮಾನಕ್ಕೆ ನಿರ್ಣಾಯಕವಾಗಿರುವ ಕೌಶಲಗಳನ್ನು ಎಳೆಯ ವಿದ್ಯಾರ್ಥಿಗಳಲ್ಲಿ ಸಬಲೀಕರಿಸಲಿಕ್ಕಾಗಿ ಮತ್ತು ಇದರಿಂದ ಒಂದು ನವ ಭಾರತವನ್ನು ನಿರ್ಮಿಸಲಿಕ್ಕಾಗಿ ಪರಿಚಯಿಸಲ್ಪಟ್ಟಿದೆ.

## 1.1 NITI ಆಯೋಗ್

ಜನವರಿ 1, 2015 ರಂದು ಯೂನಿಯನ್ ಕ್ಯಾಬಿನೆಟ್ನ ರೆಸಲ್ಯೂಶನ್ ಮೂಲಕ 'ನ್ಯಾಷನಲ್ ಇನ್ಸ್ಟಿಟೂಶನ್ ಫಾರ್ ಟ್ರಾನ್ಸ್ಫಾರ್ಮಿಂಗ್ ಇಂಡಿಯ' ವನ್ನು ರಚಿಸಲಾಯಿತು ಮತ್ತು ಇದನ್ನು NITI ಆಯೋಗ್ ಎಂದು ಸಹ ಕರೆಯಲಾಗುತ್ತದೆ. NITI ಆಯೋಗ್ ಭಾರತ ಸರಕಾರದ ಪ್ರಧಾನ ಧೋರಣೆ (ಪಾಲಿಸಿ) 'ಥಿಂಕ್ ಟ್ಯಾಂಕ್' ಆಗಿದ್ದು, ಇದು ಡೈರೆಕ್ಷನಲ್ ಹಾಗೂ ಪಾಲಿಸಿ ಇನ್–ಪುಟ್ ಅನ್ನು ಒದಗಿಸುತ್ತದೆ. NITI ಆಯೋಗ್ ಭಾರತ ಸರಕಾರಕ್ಕಾಗಿ ಕಾರ್ಯತಂತ್ರದ ಹಾಗೂ ದೀರ್ಘಾವಧಿಯ ಪಾಲಿಸಿಗಳನ್ನು ಮತ್ತು ಪ್ರೋಗ್ರಾಮ್ಗಳನ್ನು ವಿನ್ಯಾಸಿಸುತ್ತದೆ ಮತ್ತು ಅದೇ ಸಮಯದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಕ್ಕೆ ಸಂಬಂಧಿತ ತಾಂತ್ರಿಕ ಸಲಹೆಗಳನ್ನು ಸಹ ಒದಗಿಸುತ್ತದೆ.

ಇಸವಿ 1950 ರಲ್ಲಿ ಸ್ಥಾಪನೆಯಾದ 'ಯೋಜನಾ ಆಯೋಗ'ವನ್ನು ಬದಲಾಯಿಸಲು ಭಾರತ ಸರಕಾರವು ತನ್ನ ಸುಧಾರಣಾ ಕಾರ್ಯಸೂಚಿಗೆ ಅನುಗುಣವಾಗಿ NITI ಆಯೋಗ್ ಅನ್ನು ಸ್ಥಾಪಿಸಿತು. ಭಾರತದ ಜನರ ಅಗತ್ಯಗಳನ್ನು ಮತ್ತು ಆಕಾಂಕ್ಷೆಗಳನ್ನು ಹೆಚ್ಚು ಉತ್ತಮವಾದ ರೀತಿಯಲ್ಲಿ ಪೂರೈಸಲಿಕ್ಕಾಗಿ ಇದನ್ನು ಮಾಡಲಾಯಿತು. ಗತ ಸಮಯಕ್ಕಿಂತ ಒಂದು ಪ್ರಮುಖ ವಿಕಸನೀಯ ಬದಲಾವಣೆ ಏನೆಂದರೆ, ರಾಷ್ಟ್ರೀಯ ಆಸಕ್ತಿಯಲ್ಲಿ ರಾಜ್ಯಗಳು ಒಟ್ಟಿಗೆ ಕಾರ್ಯನಡಿಸುವಂತೆ ಅವುಗಳನ್ನು ಒಟ್ಟುಗೂಡಿಸಲು NITI ಆಯೋಗ್ ಭಾರತ ಸರಕಾರದ ಸರ್ವೋತ್ಕೃಷ್ಟ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಈ ಮೂಲಕ ಸಹಕಾರಯುತ ಸಂಯುಕ್ತ ವ್ಯವಸ್ಥೆಯನ್ನು ಉತ್ತೇಜಿಸುತ್ತದೆ.

ಅಗತ್ಯವಿರುವ ಸಂಪನ್ಮೂಲಗಳು, ಜ್ಞಾನ ಮತ್ತು ಕೌಶಲಗಳ ಸಹಾಯದಿಂದ NITI ಆಯೋಗ್ ಸ್ವತಃ ಒಂದು ಸ್ಟೇಟ್–ಆಫ್–ದ–ಆರ್ಟ್ ರಿಸೋರ್ಸ್ ಸೆಂಟರ್ ಆಗಿ ಸಹ ಅಭಿವೃದ್ಧಿ ಹೊಂದುತ್ತಿದ್ದು, ಇದು ತ್ವರಿತಗತಿಯಲ್ಲಿ ಕ್ರಿಯೆಗೈಯಲು, ಸಂಶೋಧನೆ ಮತ್ತು ನವೀನತೆಯನ್ನು ಉತ್ತೇಜಿಸಲು, ಸರಕಾರಕ್ಕೆ ಕಾರ್ಯತಂತ್ರದ ನೀತಿ ದೃಷ್ಟಿಯನ್ನು ಒದಗಿಸಲು ಮತ್ತು ಅನಿಶ್ಚಿತ ಸಮಸ್ಯೆಗಳೊಂದಿಗೆ ವ್ಯವಹರಿಸಲು ಶಕ್ತವನ್ನಾಗಿ ಮಾಡುತ್ತದೆ.

NITI ಆಯೋಗ್ ನ ಪ್ರಮುಖ ಜವಾಬ್ದಾರಿಗಳು ಯಾವುವೆಂದರೆ:

- ರಾಷ್ಟ್ರೀಯ ಅಭಿವೃದ್ಧಿಯ ವಿಷಯದಲ್ಲಿ ಹಂಚಿಕೊಂಡಿರುವ ದೃಷ್ಟಿಕೋನವನ್ನು ಆದ್ಯತೆಯ ಕ್ಷೇತ್ರಗಳಲ್ಲಿ ವಿಕಾಸಗೊಳಿಸುವುದು ಮತ್ತು ರಾಷ್ಟ್ರದ ಧ್ಯೇಯಗಳ ಬೆಳಕಿನಲ್ಲಿ ರಾಜ್ಯಗಳ ಸಕ್ರಿಯ ಒಳಗೊಳ್ಳುವಿಕೆಯೊಂದಿಗೆ ಕಾರ್ಯತಂತ್ರಗಳನ್ನು ವಿಕಸಿಸುವುದು
- ಮೂಲಮಟ್ಟದಲ್ಲೇ ವಿಶ್ವಾಸಾರ್ಹ ಯೋಜನೆಗಳನ್ನು ರೂಪಿಸಲು ಕಾರ್ಯವಿಧಾನಗಳನ್ನು (ಮೆಕಾನಿಸಮ್ಸ್) ವಿಕಸಿಸುವುದು ಮತ್ತು ಸರಕಾರದ ಉನ್ನತ ಮಟ್ಟಗಳಲ್ಲಿ ಇವುಗಳನ್ನು ಕ್ರಮೇಣ ಒಟ್ಟುಗೂಡಿಸುವುದು
- ನಮ್ಮ ಸಮಾಜದ ವಿಭಾಗಗಳು ರಾಷ್ಟ್ರೀಯ ಆರ್ಥಿಕ ಪ್ರಗತಿಗೆ ಸೇರಲು ಶಕ್ತರಾಗುವಂತೆ ಮಾಡಲು ವಿಶೇಷ ಗಮನದ ಆವಶ್ಯಕತೆಯಿರುವ ವಿಭಾಗಗಳಿಗೆ ಅಂಥ ಗಮನವನ್ನು ನೀಡುವುದು
- ಕಾರ್ಯತಂತ್ರದ ಹಾಗೂ ದೀರ್ಘಾವಧಿಯ ಪಾಲಿಸಿ ಮತ್ತು ಪ್ರೋಗ್ರಾಮ್ ಚೌಕಟ್ಟುಗಳನ್ನು ವಿನ್ಯಾಸಿಸುವುದು

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ತಜ್ಞರು, ವೈದ್ಯರು ಮತ್ತು ಇತರ ಪಾಲುದಾರರ ಸಹಯೋಗದಾಯಕ ಸಮುದಾಯದ ಮೂಲಕ ಜ್ಞಾನ, ನವೀನತೆ ಮತ್ತು ಉದ್ಯಮಶೀಲತೆಯ ಸಪೋರ್ಟ್ ಸಿಸ್ಟಮ್ ಅನ್ನು ರಚಿಸುವುದೇ.

[1] ಭಾರತ 2020: ಹೊಸ ಮಿಲೇನಿಯಮ್‌ಗಾಗಿರುವ ಒಂದು ದೂರದೃಷ್ಟಿ, 1998

ಅಪೇಕ್ಷಿತ ರೂಪಾಂತರವನ್ನು ಕಾರ್ಯರೂಪಕ್ಕೆ ತರಲಿಕ್ಕಾಗಿ ದೇಶದಾದ್ಯಂತ 17 ಸಮರ್ಥನೀಯ ಅಭಿವೃದ್ಧಿ ಗುರಿಗಳನ್ನು ಮೇಲ್ವಿಚಾರಣೆಮಾಡಲು, ಸಂಘಟಿಸಲು ಮತ್ತು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು, ವಿಶ್ವ ಸಂಸ್ಥೆಯು NITI ಆಯೋಗ್ ಅನ್ನು ನೋಡಲ್ ಏಜೆನ್ಸಿಯಾಗಿಯೂ ನಾಮನಿರ್ದೇಶನಮಾಡಿದೆ.

### 1.1.1 NITI ಆಯೋಗ್‌ನ ಸಂಯೋಜನೆ

NITI ಆಯೋಗ್ ನ ಗುರಿಗಳನ್ನು ಮತ್ತು ಧ್ಯೇಯಗಳನ್ನು ಸಾಧಿಸಲು, ಪ್ರಧಾನ ಮಂತ್ರಿಯವರು ಅದರ ಅಧ್ಯಕ್ಷರಾಗಿ, ಆಡಳಿತ ಮಂಡಳಿಯಲ್ಲಿ ರಾಜ್ಯಗಳ ಮುಖ್ಯ ಮಂತ್ರಿಗಳು ಮತ್ತು ಯೂನಿಯನ್ ಟೆರಿಟೊರಿಗಳ ಲೆಫ್ಟಿನೆಂಟ್ ಗವರ್ನರ್‌ಗಳು, ವಿವಿಧ ಕ್ಷೇತ್ರಗಳ ತಜ್ಞರು ಮತ್ತು ವಿಶೇಷಜ್ಞರು ಮತ್ತು ಪ್ರಾದೇಶಿಕ ಸಮಿತಿಯನ್ನು ಒಳಗೂಡಿರುವ ಒಂದು ಹೈ ಲೆವೆಲ್ ತಂಡವು ಜೊತೆಗೂಡಿ ಕಾರ್ಯನಡಿಸುತ್ತದೆ.

## 1.2 ಅಟಲ್ ಇನ್ನೋವೇಶನ್ ಮಿಷನ್

**ಅಟಲ್ ಇನ್ನೋವೇಶನ್ ಮಿಷನ್ (AIM)** ಭಾರತ ಸರಕಾರದ ಒಂದು ಪ್ರಮುಖ ಮುನ್ನೆಜ್ಜೆಯಾಗಿದ್ದು, ಇದು NITI ಆಯೋಗ್–ದ ಆಶ್ರಯದಲ್ಲಿದ್ದು, ದೇಶದಾದ್ಯಂತ ನವೀನತೆ (ಆವಿಷ್ಕಾರ) ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುವ ಗುರಿಯುಳ್ಳದ್ದಾಗಿದೆ.

AIM ಮತ್ತು NITI ಆಯೋಗ್ ಅನ್ನು ಅಂಬ್ರೆಲ್ಲ ಇನ್ನೋವೇಶನ್ ಆರ್ಗನೈಝೇಶನ್ (ಆಶ್ರಯದಾತ ನವೀನತೆ ಸಂಘಟನೆ) ಆಗಿ ಪರಿಗಣಿಸಲಾಗಿದ್ದು, ಇದು ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆಯ ಮೂಲಕ ಬೇರೆ ಬೇರೆ ಮಟ್ಟಗಳಲ್ಲಿ ಅಂದರೆ ಹೈಯರ್ ಸೆಕೆಂಡರಿ ಶಾಲೆಗಳು, ಉನ್ನತ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳು ಹಾಗೂ SME/MSME ಉದ್ಯಮ, ಕಾರ್ಪೋರೇಟ್ ಮತ್ತು ಸರಕಾರಿ ಸಚಿವಾಲಯದ ಮಟ್ಟದಲ್ಲಿ ನವೀನತೆ ಹಾಗೂ ಉದ್ಯಮಶೀಲತೆಯ ಪರಿಸರ ವ್ಯವಸ್ಥೆಯ ಒತ್ತಾಸೆಯನ್ನು ಉತ್ತೇಜಿಸುವ ಮೂಲಕ ಕೇಂದ್ರ, ರಾಜ್ಯ ಮತ್ತು ವಲಯ ಸಚಿವಾಲಯಗಳ ನಡುವೆ ನವೀನತೆ ಪಾಲಿಸಿಗಳ ಜೋಡಣೆಯಲ್ಲಿ ಒಂದು ಸಾಧನವಾಗಿ ಕಾರ್ಯನಡಿಸುತ್ತದೆ.

ನವೀನತೆ ಮತ್ತು ಉದ್ಯಮಶೀಲತೆಯ ಮನೋಭಾವವನ್ನು ಪೋಷಿಸಲು ಒಂದು ಸಾಂಸ್ಥಿಕ ಚೌಕಟ್ಟನ್ನು ರಚಿಸುವುದರ ಕಡೆಗೆ ಆರಂಭಿಕ ಗಮನವನ್ನು ಕೊಡಲಾಗಿದೆ. ಅಟಲ್ ಟಿಂಕರಿಂಗ್ ಲ್ಯಾಬ್ಸ್ (ATL) ಮೂಲಕ AIM ಶಾಲಾ ಮಟ್ಟದಲ್ಲೇ ನವೀನತೆಯನ್ನು ಬೆಳೆಸುತ್ತಿದೆ, ಇದರಿಂದಾಗಿ ವಿದ್ಯಾರ್ಥಿಗಳು ಡಿಸೈನ್ ಥಿಂಕಿಂಗ್ ಅನ್ನು ಅನುಭವಿಸಲು ಮತ್ತು ದಿನನಿತ್ಯದ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ತಮ್ಮ ಬೌದ್ಧಿಕ ಪರಿಧಿಗಳನ್ನು ವಿಶಾಲಗೊಳಿಸಲು ಮತ್ತು ತಮ್ಮ ಆವಿಷ್ಕಾರಗಳನ್ನು ಪ್ರತಿಷ್ಠಿತ ವೇದಿಕೆಗಳ ಮೇಲೆ ಪ್ರದರ್ಶಿಸಲು ಅವಕಾಶ ಸಿಗುತ್ತದೆ. ಮೆಂಟರ್ ಆಫ್ ಚೇಂಜ್ (MoC) ಪ್ರೋಗ್ರಾಮ್ ಎಂಬುದು ಇನ್ನೊಂದು ನಾಗರಿಕ ನೇತೃತ್ವದ ರಾಷ್ಟ್ರೀಯ ಚಳುವಳಿಯಾಗಿದ್ದು AIM ಇದರ ನಾಯಕತ್ವ ವಹಿಸುತ್ತದೆ. ಇದರಲ್ಲಿ ಪರಿಣಿತ ವೃತ್ತಿಪರರು ರಾಷ್ಟ್ರದ ನಿರ್ಮಾಣದ ನಿಟ್ಟಿನಲ್ಲಿ ಬಲವಾದ ಅನಿಸಿಕೆಯೊಂದಿಗೆ ಎಳೆಯ ATL ಪರಿವರ್ತಕರಿಗೆ (ಇನ್ನೋವೇಟರ್ಸ್) ಉಚಿತ ಮಾರ್ಗದರ್ಶನವನ್ನು ಒದಗಿಸುತ್ತಾರೆ. AIM ನ ಅಟಲ್ ಇನ್ಕ್ಯೂಬೇಶನ್ ಸೆಂಟರ್ (AICs) ಗಳು ಮೆಂಟರಿಂಗ್ ಮತ್ತು ಇನ್ವೆಸ್ಟರ್ ನೆಟ್ವರ್ಕ್–ಗಳಿಗೆ ಪ್ರವೇಶವನ್ನು ಒಳಗೂಡಿಸಿ ಅಗತ್ಯವಿರುವ ಕೈಯಾಸರೆಯನ್ನು ನೀಡುವ ಮೂಲಕ, ಹೊಸದಾಗಿ ಸ್ಥಾಪಿತವಾದ ಯೋಜನೆಗಳು ಬೆಳೆದು ಏಳಿಗೆ ಹೊಂದಲಿಕ್ಕಾಗಿ ವಿಶ್ವದರ್ಜೆಯ ಪರಿಸರ ವ್ಯವಸ್ಥೆಗಳನ್ನು ರಚಿಸುತ್ತಿವೆ. ಆವಿಷ್ಕಾರವನ್ನು ಒಂದು ರಾಷ್ಟ್ರೀಯ ಚಳುವಳಿಯಾಗಿ ಮಾಡುವುದರ ಪ್ರಮುಖತೆಯನ್ನು AIM ಅರಿತುಕೊಂಡಿದ್ದು, ಇದರಲ್ಲಿ ನಾಗರಿಕರು ಮಹತ್ತರ ಪ್ರಭಾವವನ್ನು ಉಂಟುಮಾಡುವ ಜವಾಬ್ದಾರಿಯನ್ನು ಮನಗಂಡಿದ್ದು ಈ ನಿಟ್ಟಿನಲ್ಲಿ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಭಾರತ ಸರಕಾರದ ಐದು ಸಚಿವಾಲಯಗಳೊಂದಿಗಿನ ಸಹಯೋಗದಿಂದ AIM ಪ್ರಾರಂಭಿಸಿದ ಅಟಲ್ ನ್ಯೂ ಇಂಡಿಯಾ ಚ್ಯಾಲೆಂಜಸ್ (ANIC), ರಾಷ್ಟ್ರೀಯ ಪ್ರಮುಖತೆಯ 24 ವಿಭಿನ್ನ ಕ್ಷೇತ್ರಗಳಲ್ಲಿ ತಾಂತ್ರಿಕ ಪರಿಹಾರಗಳನ್ನು ಪ್ರಸ್ತಾಪಿಸುವ ಅವಕಾಶವನ್ನು ಪರಿವರ್ತಕರಿಗೆ ಒದಗಿಸಿತು. ಆಯ್ದ ಆವಿಷ್ಕಾರಗಳಿಗೆ ತ್ವರಿತಗತಿಯ ಉತ್ಪಾದನೆ ಮತ್ತು ವಾಣಿಜ್ಯೀಕರಣಕ್ಕಾಗಿರುವ ಬೆಂಬಲದ ಜೊತೆಗೆ ಸಹಾಯ ಧನವನ್ನೂ ನೀಡಲಾಗುವುದು. ಕೊನೆಯದಾಗಿ, ಪರಿಕಲ್ಪನೆಯ ಅಂತಿಮ ಹಂತಗಳಲ್ಲಿ ಇನ್ನೊಂದು ಪ್ರೋಗ್ರಾಮ್, ಅಂದರೆ ಅಟಲ್ ರಿಸರ್ಚ್ ಆಂಡ್ ಇನ್ನೋವೇಶನ್ ಇನ್ ಸ್ಮಾಲ್ ಎಂಟರ್ಪ್ರೈಸಸ್ (ARISE) ಪ್ರೋಗ್ರಾಮ್, ಸಂಶೋಧನೆ ಮತ್ತು ಆವಿಷ್ಕಾರದಲ್ಲಿ ಬಂಡವಾಳ ಹೂಡುವಂತೆ ಸಚಿವಾಲಯಗಳನ್ನು ಉತ್ತೇಜಿಸುತ್ತದೆ ಮತ್ತು ಸಂಗ್ರಹಣೆಗಾಗಿ ಬಹಳ ವಿಸ್ತಾರವಾಗಿರುವ ಚೌಕಟ್ಟಿನ ಮೂಲಕ ಸಣ್ಣ ಉದ್ಯಮಗಳಿಂದ ಸಾರ್ವಜನಿಕ ವ್ಯವಸ್ಥೆಗಳಿಗೆ ಆವಿಷ್ಕಾರಗಳನ್ನು ಸ್ವೀಕರಿಸಲು ಸಾಧ್ಯವಾಗುತ್ತದೆ.

## 1.3 ಅಟಲ್ ಟಿಂಕರಿಂಗ್ ಲ್ಯಾಬ್‌ಗೆ ಪೀಠಿಕೆ

**NITI ಆಯೋಗ್ ಅಡಿಯಲ್ಲಿ AIM ನೊಂದಿಗೆ,** ಆವಿಷ್ಕಾರ ಮತ್ತು ಉದ್ಯಮಶೀಲತೆಯು ನಮ್ಮ ರಾಷ್ಟ್ರೀಯ ನಿಯೋಗದ ಅವಿಭಾಜ್ಯ ಅಂಗವಾಗಿ ಪರಿಣಮಿಸಿದೆ ಮತ್ತು ATL ಅನ್ನು ಶಾಲೆಗಳಲ್ಲಿ ಹೊಂದಿರುವ ಮೂಲಕ 12ರ ಪ್ರಾಯದಷ್ಟು ಚಿಕ್ಕ ಪ್ರಾಯದ ಮಕ್ಕಳನ್ನು ತಂತ್ರಜ್ಞಾನದ ಆವಿಷ್ಕಾರದ ಜಗತ್ತಿಗೆ ಪರಿಚಯಿಸಲಾಗುತ್ತಿದೆ. ATL ಎಂಬುದು AIM ಭಾರತ ಸರಕಾರದ ಪ್ರಮುಖ ಮುನ್ನೆಜ್ಜೆಯಾಗಿದ್ದು, ಇದು ದೇಶದಾದ್ಯಂತ ಪ್ರೌಢ ಶಾಲೆಯ ವಿದ್ಯಾರ್ಥಿಗಳ ನಡುವೆ ನವೀನತೆಯ ಮನೋಭಾವವನ್ನು ಬೆಳೆಸುವ ಗುರಿಯುಳ್ಳದ್ದಾಗಿದೆ.

ಅಟಲ್ ಟಿಂಕರಿಂಗ್ ಲ್ಯಾಬ್ ಪ್ರೋಗ್ರಾಮ್, ಪುರಾತನ ಭಾರತೀಯ ಗುರುಕುಲ್ ಶಿಕ್ಷಣ ವ್ಯವಸ್ಥೆಯಿಂದ ಮತ್ತು ಜಗತ್ತಿನ ಅತ್ಯಂತ ಯಶಸ್ವಿ ಫಿನಿಶ್ ಶಿಕ್ಷಣ ವ್ಯವಸ್ಥೆಯಿಂದ ಅದರ ಮೂಲತತ್ವಗಳನ್ನು ಪಡೆದುಕೊಂಡಿದ್ದು, ಸ್ವಯಂ–ಕಲಿಕೆಯ ವಿಧಾನ, ಪ್ರಾಯೋಗಿಕ ತರಬೇತಿ ಮತ್ತು ನೈಜ ಜಗತ್ತಿನ ಸನ್ನಿವೇಶಗಳಿಗೆ ಒಡ್ಡಲ್ಪಡುವ ವಿಚಾರದ ಮೇಲೆ ಕೇಂದ್ರೀಕರಿಸಿದೆ[2]. ಈ ATL ಕುತೂಹಲವನ್ನು ಉತ್ತೇಜಿಸುತ್ತದೆ ಮತ್ತು ಚಿಕ್ಕ ವಯಸ್ಸಿನಲ್ಲಿಯೇ ಆವಿಷ್ಕಾರಗಳನ್ನು ಆರಂಭಿಸುವ ಅವಕಾಶ ಮಾಡಿಕೊಡುತ್ತದೆ. ವಿದ್ಯಾರ್ಥಿಗಳಿಗೆ ಆಲೋಚಿಸಲು ಮತ್ತು ಅನ್ವೇಷಿಸಲು, ಪ್ರಯತ್ನಿಸಲು ಮತ್ತು ವಿಫಲರಾಗಲು, ಸೃಜನಾತ್ಮಕ ರೀತಿಯಲ್ಲಿ ಆಲೋಚಿಸಿ ಏನನ್ನಾದರೂ ರಚಿಸಲು ಸ್ವಾತಂತ್ರವಿರುತ್ತದೆ. ಡಿಸೈನ್ ಥಿಂಕಿಂಗ್, ವಿಮರ್ಶಾತ್ಮಕ ಚಿಂತನೆ, ಗಣನಾ ಚಿಂತನೆ, ಡಿಜಿಟಲ್ ಫ್ಯಾಬ್ರಿಕೇಶನ್ ಗಳಂಥ 21 ನೇ ಶತಮಾನದ ಕೌಶಲಗಳೊಂದಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ಈ ಪ್ರೋಗ್ರಾಮ್ ಅನ್ನು ವಿನ್ಯಾಸಿಸಲಾಗಿದೆ. ಇದಕ್ಕೆ ಬೇಕಾದ ಸ್ಫೂರ್ತಿಯನ್ನು ಸ್ಟ್ಯಾನ್ಫೋರ್ಡ್ ಇಂಡಿಯಾ ಬಯೋಡಿಸೈನ್ ಪ್ರೋಗ್ರಾಮ್ (ಇದು ಭಾರತ ಸರಕಾರದ ಬಯೋಟೆಕ್ನಾಲಜಿ ಇಲಾಖೆಯ ಮುನ್ನೆಜ್ಜೆಯಾಗಿತ್ತು), ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ದೆಹಲಿ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ದೆಹಲಿ ಮತ್ತು ಸ್ಟ್ಯಾನ್ಫೋರ್ಡ್ ಯೂನಿವರ್ಸಿಟಿಯಿಂದ ಪಡೆದುಕೊಳ್ಳಲಾಗಿದೆ[3]. ಇದು ಗ್ಲೋಬಲ್ ಮೇಕರ್ಸ್ ಚಳುವಳಿಯಲ್ಲಿ[4] (ಡೌಘರ್ಟಿ, 2012) ಭಾರತವು ಒಂದು ಕಚ್ಚನ್ನು (ಡೆಂಟ್) ಸೃಷ್ಟಿಸಲು ಮತ್ತು ವಿಶ್ವದರ್ಜೆಯ ಆವಿಷ್ಕಾರಕ್ಕೆ ಒಂದು ಜಾಗತಿಕ ವೇದಿಕೆಯಾಗಿ ಪರಿಣಮಿಸಲು ಸಹಾಯ ಮಾಡುತ್ತದೆ. ಈ ATL ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಪ್ರಯೋಗಿಸಿ ನೋಡುವಂತೆ, ಅನ್ವೇಷಣೆ ಮಾಡುವಂತೆ ಮತ್ತು ಸ್ವಯಂ–ಕಲಿಕೆಯ ಮಾರ್ಗವನ್ನು ಅನುಸರಿಸುವಂತೆ ಪ್ರೋತ್ಸಾಹಿಸುತ್ತಿದೆ. ಇದು ಅವರನ್ನು ಸಮಸ್ಯೆಗಳ ಬಗ್ಗೆ ಭಿನ್ನವಾಗಿ ಯೋಚಿಸಲು ಮತ್ತು 3D ಪ್ರಿಂಟಿಂಗ್, ಇಂಟರ್ನೆಟ್ ಆಫ್ ಥಿಂಗ್ಸ್, ರೋಬೋಟಿಕ್ಸ್, ಮಿನಿಯೇಚರೈಸ್ಡ್ ಎಲೆಕ್ಟ್ರಾನಿಕ್ಸ್, ಸ್ಪೇಸ್ ಟೆಕ್ನಾಲಜಿ, ಡ್ರೋನ್ ಟೆಕ್ನಾಲಜಿ, ತಂತ್ರಜ್ಞಾನ ಪ್ರೇರಿತ ಟೆಕ್ಸೈಲ್ ಗಳು ಇನ್ನು ಮುಂತಾದವುಗಳನ್ನೂ ಸೇರಿಸಿ ಅನೇಕ ಅತ್ಯಾಧುನಿಕ ಟೆಕ್ನಾಲಜಿ ಟೂಲ್ ಗಳನ್ನು ಗರಿಷ್ಠ ಮಟ್ಟದಲ್ಲಿ ಉಪಯೋಗಿಸುವ ಮೂಲಕ ನವೀನ ಪರಿಹಾರಗಳನ್ನು ವಿಕಸಿಸಲು ಅರ್ಹರನ್ನಾಗಿ ಮಾಡುತ್ತದೆ. ಆವಿಷ್ಕಾರದಲ್ಲಿ ಅಥವಾ ನವೀನತೆಯಲ್ಲಿ ಆಸಕ್ತಿಯಿರುವ ಪೋಷಕರು, ಮಾರ್ಗದರ್ಶಕರು ಮತ್ತು ಇತರ ವ್ಯಕ್ತಿಗಳನ್ನೂ ಒಳಗೊಡಿಸಿ ಸಮುದಾಯದ ಇತರ ವಿಭಾಗಗಳಿಗೆ, ತಮ್ಮ ಕಲ್ಪನೆಗಳಿಗೆ ಜೀವ ಕೊಡಲಿಕ್ಕಾಗಿ ATL ಒದಗಿಸುವಿಕೆಯನ್ನೂ ಮಾಡುತ್ತಿದೆ. ಆಗಿಂದಾಗ್ಗೆ ಸಮುದಾಯ ಅಧಿವೇಶನಗಳನ್ನು ಏರ್ಪಡಿಸುವ ಮೂಲಕ ATL ಸಮಾಜದ ದಿನನಿತ್ಯದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ನೆರವು ನೀಡುವಂಥ ಪರಿಸರವನ್ನು ರೂಪಿಸುತ್ತಿದೆ, ಇದರಿಂದಾಗಿ ರಾಷ್ಟ್ರೀಯ ಸೇವೆಯ ಬಲವಾದ ಆಂತರಿಕ ಭಾವನೆಯನ್ನು ಸೃಷ್ಟಿಸುತ್ತಿದೆ[5].

ಈ ATL ಯೋಜನೆಯಡಿ, ATL ಅನ್ನು ಸ್ಥಾಪಿಸಲು ಆಯ್ಕೆಯಾಗಿರುವ ಶಾಲೆಗಳಿಗೆ 20 ಲಕ್ಷದಷ್ಟು ಸಹಾಯ ಧನವನ್ನು ಸಹ ಒದಗಿಸಲಾಗುತ್ತದೆ. ಈ ಸಹಾಯ ಧನವನ್ನು 5 ವರ್ಷಗಳ ನಿಗದಿತ ಗರಿಷ್ಠ ಅವಧಿಯೊಳಗೆ ನಿರ್ದಿಷ್ಟ ಉದ್ದೇಶಕ್ಕಾಗಿ ಮಾತ್ರವೇ ಖರ್ಚುಮಾಡಬೇಕು, 10 ಲಕ್ಷ ರೂಪಾಯಿಗಳನ್ನು ಬಂಡವಾಳದ ವೆಚ್ಚಕ್ಕೆ ಮತ್ತು ಉಳಿದ 10 ಲಕ್ಷ ರೂಪಾಯಿಗಳನ್ನು ಕಾರ್ಯಾಚರಣೆ ಹಾಗೂ ನಿರ್ವಹಣೆ ವೆಚ್ಚಗಳಿಗಾಗಿ ಬಳಸಬೇಕು.

ಇಸವಿ 2018ರ ಡಿಸೆಂಬರ್ ತಿಂಗಳಷ್ಟಕ್ಕೆ 5,000 ಕ್ಕಿಂತಲೂ ಹೆಚ್ಚು ATLಗಳನ್ನು ಘೋಷಿಸಲಾಗಿದ್ದು, ಇದು ಭಾರತದ ಎಲ್ಲಾ ಜಿಲ್ಲೆಗಳಲ್ಲಿ 87% ಜಿಲ್ಲೆಗಳನ್ನು ಮತ್ತು 110 ಮಹತ್ವಾಕಾಂಕ್ಷೆಯ ಜಿಲ್ಲೆಗಳನ್ನು ಆವರಿಸಿದೆ. ಈ ಲ್ಯಾಬ್ ಗಳನ್ನು ಸರಕಾರೀ ಹಾಗೂ ಖಾಸಗಿ ಶಾಲೆಗಳಲ್ಲಿ ಸ್ಥಾಪಿಸಲಾಗಿದೆ ಮತ್ತು ಇವುಗಳಲ್ಲಿ ಹೆಚ್ಚಿನವು ಸಹ–ಶಿಕ್ಷಣ ಶಾಲೆಗಳಲ್ಲಿ ಮತ್ತು ಬಾಲಕಿಯರ ಶಾಲೆಗಳಲ್ಲಿ ಸ್ಥಾಪಿತವಾಗಿದ್ದು, ಆವಿಷ್ಕಾರ ಅಥವಾ ನವೀನತೆಯ ಸಮುದಾಯ ಕೇಂದ್ರಗಳಾಗಿ ಕಾರ್ಯನಡಿಸುತ್ತಿವೆ ಹಾಗೂ ಭಾರತವು ಕಲಿಯುವ, ಯೋಚಿಸುವ ವಿಧಗಳಲ್ಲಿ' ಅದರ ಆದರ್ಶಗಳಲ್ಲಿ ಮತ್ತು ಆವಿಷ್ಕಾರಗಳಲ್ಲಿ ಬದಲಾವಣೆಯನ್ನು ತಂದಿವೆ. NITI ಆಯೋಗ್ ನಿಂದ ಪ್ರಕಟಿಸಲಾದ ಸ್ಟ್ರಾಟಜಿ ಫಾರ್ ನ್ಯೂ ಇಂಡಿಯಾಕ್ಕನುಸಾರ[6], AIM 2020 ನೇ ಇಸವಿಯಷ್ಟಕ್ಕೆ 10,000 ಕ್ಕಿಂತಲೂ ಹೆಚ್ಚು ATLಗಳನ್ನು ಸ್ಥಾಪಿಸಲಿದೆ.

---

2 ಶಿಕ್ಷಕರ ದಿನ 2018: ಯಂಗ್ ಟೀಚರ್ಸ್ ಇನ್ಫಾರ್ ಮಾಡರ್ ಮಾಡರ್ನ್ ಏಜ್ 'ಗುರುಸ್', ಬಿಸಿನೆಸ್ ವರ್ಲ್ಡ್, 2018

3 ಶಿಕ್ಷಕರ ದಿನ 2018: ಯಂಗ್ ಟೀಚರ್ಸ್ ಇನ್ಫಾರ್ ಮಾಡರ್ ಮಾಡರ್ನ್ ಏಜ್ 'ಗುರುಸ್', ಬಿಸಿನೆಸ್ ವರ್ಲ್ಡ್, 2018

4 ಡೌಘರ್ಟಿ, ಡಿ. (2012). ದ ಮೇಕರ್ ಮೂಮೆಂಟ್. ಇನ್ನೋವೇಷನ್ಸ್

5 ಇನ್ನೋವೇಟ್ ಮಾಡಲು ಯುವ ವಿದ್ಯಾರ್ಥಿಗಳನ್ನು ಸಮರ್ಥಗೊಳಿಸುವುದರಲ್ಲಿ ಜೀವನದ ಉದ್ದೇಶ ಕಂಡುಕೊಳ್ಳುವುದು, ಬಿಸ್ನೆಸ್ ವರ್ಲ್ಡ್, 2018

[6] ನವ ಭಾರತಕ್ಕಾಗಿ ತಂತ್ರ @75, NITI ಆಯೋಗ್, 2018

### 1.3.1 ಭಾರತಕ್ಕಾಗಿ ಅಟಲ್ ಟಿಂಕರಿಂಗ್ ಲ್ಯಾಬ್‌ನ ಮಹತ್ವ

ಸಾಂಪ್ರದಾಯಿಕ ಬೋಧನಾ ವಿಧಾನಗಳನ್ನು ಇಂದಿನ ಅನುಭವದ ಕಲಿಕೆಯೊಂದಿಗೆ ಸಂಯೋಜಿಸುವುದು, ಭಾರತದಲ್ಲಿ ಒಂದು ವಿಶಿಷ್ಟ ಸಂಯೋಜಿತ ಶಿಕ್ಷಣ ವ್ಯವಸ್ಥೆಯನ್ನು ಸೃಷ್ಟಿಸುವ ನಿಟ್ಟಿನಲ್ಲಿ ಪ್ರಮುಖ ಅಂಶವಾಗಿದೆ. ಬೆಳೆಯುತ್ತಿರುವ ಆರ್ಥಿಕತೆಯ ಬೇಡಿಕೆಗಳು ಮತ್ತು ಆವಿಷ್ಕಾರ ಅಥವಾ ನವೀನತೆಯ ಅಭಿವೃದ್ಧಿಯಲ್ಲಿ ಜಾಗತಿಕ ಬೆಳವಣಿಗೆಯನ್ನು ಮನಸ್ಸಿನಲ್ಲಿಟ್ಟು, ಮಕ್ಕಳಲ್ಲಿ ಜಟಿಲ ಸಮಸ್ಯೆಯ ಪರಿಹಾರ, ವಿಮರ್ಶಾತ್ಮಕ ಆಲೋಚನೆ, ಹೊಂದಾಣಿಕೆಯ ಕಲಿಕೆ, ಗಣನಾ ಕೌಶಲಗಳಂಥ ಭವಿಷ್ಯದ ಕೌಶಲಗಳನ್ನು ಪೋಷಿಸುವಂಥ ಒಂದು ಪರಿಸರ ವ್ಯವಸ್ಥೆಯನ್ನು ರಚಿಸಲು ಭಾರತ ಸರಕಾರವು ಒಂದು ಉದಾತ್ತ ನಿಯೋಗವನ್ನು ಪ್ರಾರಂಭಿಸಿದೆ. ಇದು ATL ಮುನ್ನೆಜ್ಜೆಯ ಸಹಾಯದಿಂದ 1 ಮಿಲಿಯ ಆಧುನಿಕ ಪರಿವರ್ತಕರನ್ನು ರೂಪಿಸುವ ದೃಷ್ಟಿಕೋನ ಹೊಂದಿದೆ. ಇಂದು ಭಾರತದಾದ್ಯಂತ ATL ಮುನ್ನೆಜ್ಜೆಯು ಮಕ್ಕಳ ಸಹಜ ಕಲ್ಪನಾಶೀಲತೆ ಮತ್ತು ಸಮಸ್ಯೆಯನ್ನು ಬಗೆಹರಿಸುವ ಚಾತುರ್ಯವನ್ನು ಬಳಸಿಕೊಳ್ಳುತ್ತಿದೆ ಮತ್ತು ಭವಿಷ್ಯದಲ್ಲಿ ಅಗತ್ಯವಿರುವ ಕೌಶಲಗಳೊಂದಿಗೆ ಅವರನ್ನು ಸಜ್ಜುಗೊಳಿಸುತ್ತಿದೆ. ಹಲವಾರು ATL ಸಂಪನ್ಮೂಲಗಳಿಗೆ ಪ್ರವೇಶಾವಕಾಶವನ್ನು ಹೊಂದಿರುವುದು, ಸಮುದಾಯವನ್ನು ಬಾಧಿಸುತ್ತಿರುವ ಗಣನೀಯ ಸಮಸ್ಯೆಗಳಿಗೆ ಅನುಕೂಲಕರ ಪರಿಹಾರಗಳನ್ನು ಕಲ್ಪಿಸಲು ಮತ್ತು ರಚಿಸಲು ಸಹಾಯ ಮಾಡುತ್ತಿದೆ.

ಭಾರತಕ್ಕಾಗಿ ATLನ ಪ್ರಸ್ತುತತೆಯನ್ನು ವಿವರಿಸುವ ಒಂದು ವಿಡಿಯೋ ಅನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

https://www.youtube.com/watch?v=f4Sqd6RDIoE

ಅಷ್ಟುಮಾತ್ರವಲ್ಲ, ATLನ ಧ್ಯೇಯಗಳನ್ನು ಯಶಸ್ವಿಕರವಾಗಿ ಸಾಧಿಸುವುದರಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಪ್ರಿನ್ಸಿಪಾಲರು ಮತ್ತು ಪೋಷಕರ ಬೆಂಬಲವು ನಿರ್ಣಾಯಕವೆಂದು ಪರಿಗಣಿಸಲಾಗಿದೆ. ಇದರ ಒಟ್ಟಾರೆ ಗುರಿಯು ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು ಭಂಗಪಡಿಸುವುದು ಮತ್ತು ನವ ಭಾರತವನ್ನು ನಿರ್ಮಿಸುವ ನಿರಂತರ ಪ್ರಯತ್ನದಲ್ಲಿ ಇನ್ನೂ ಹೆಚ್ಚಿನ ಸವಾಲುಗಳನ್ನು ಎದುರಿಸಲು ಸಿದ್ಧರಾಗಿರುವಂಥ ಯುವ ಪರಿವರ್ತಕರ ಸೇನೆಯನ್ನು ರಚಿಸುವುದೇ ಆಗಿದೆ.

### 1.3.2 ಅಟಲ್ ಟಿಂಕರಿಂಗ್ ಲ್ಯಾಬ್‌ನ ಧ್ಯೇಯಗಳು

ATL ಅನ್ನು ಸ್ಥಾಪಿಸುವ ಪ್ರಮುಖ ಧ್ಯೇಯಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ:

ಎ. ಎಳೆಯ ಮನಸ್ಸುಗಳು ನವೀನತೆಯ ಕೌಶಲಗಳನ್ನು ಕಲಿಯಸಾಧ್ಯವಿರುವ, ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಕಲ್ಪನೆಗಳನ್ನು ಕೆತ್ತುವ, ನಮ್ಮ ಪರಿಸರದಲ್ಲಿ ಕೆಲಸಮಾಡಿ ಕಲಿಯುವಂಥ ಕಾರ್ಯಕ್ಷೇತ್ರಗಳನ್ನು ನಿರ್ಮಿಸುವುದು.

ಬಿ. ಸೃಜನಶೀಲತೆ, ನವೀನತೆ, ವಿಮರ್ಶಾತ್ಮಕ ಆಲೋಚನೆ, ಡಿಸೈನ್ ಥಿಂಕಿಂಗ್, ಸಾಮಾಜಿಕ ಮತ್ತು ವಿಭಿನ್ನ–ಸಂಸ್ಕೃತಿಯ ಸಹಯೋಗ, ಎಥಿಕಲ್ ಲೀಡರ್ಶಿಫ್ ಇನ್ನು ಮುಂತಾದ 21ನೇ ಶತಮಾನದ ಕೌಶಲಗಳಿಂದ ನಮ್ಮ ಯುವಕರನ್ನು ಸಬಲೀಕರಿಸುವುದು.

ಸಿ. ಭಾರತದ ವಿಶಿಷ್ಟ ಸಮಸ್ಯೆಗಳಿಗೆ ನವೀನ ಪರಿಹಾರಗಳನ್ನು ನಿರ್ಮಿಸಲು ಸಹಾಯ ಮಾಡುವುದು ಮತ್ತು ಈ ಮೂಲಕ ಜ್ಞಾನ ಆರ್ಥಿಕ ಸ್ವರೂಪವನ್ನು ಬೆಳೆಸಲು ಭಾರತವು ಮಾಡುತ್ತಿರುವ ಪ್ರಯತ್ನಗಳಿಗೆ ಬೆಂಬಲ ನೀಡುವುದು.

### 1.3.3 ಅಟಲ್ ಟಿಂಕರಿಂಗ್ ಲ್ಯಾಬ್‌ನ ಪ್ರೋಗ್ರಾಮ್ ವಿನ್ಯಾಸ

ATL ಪ್ರೋಗ್ರಾಮ್ ವಿನ್ಯಾಸವು, ಯುವ ಪರಿವರ್ತಕರ ನಡುವೆ ನವೀನತೆಯ ಮನೋಭಾವವನ್ನು ಬೆಳೆಸಲು ಇನ್–ಚಾರ್ಜ್ಗೆ ಕ್ರಮಬದ್ಧವಾಗಿ ಸಹಾಯ ಮಾಡುತ್ತದೆ. ನವೀನತೆಯನ್ನೂ ಮೀರಿ, ವಿದ್ಯಾರ್ಥಿಗಳು ATL ಚಟುವಟಿಕೆಗಳಲ್ಲಿ ತೊಡಗಿರುವಾಗ ಅವರ ಒಟ್ಟಾರೆ ವ್ಯಕ್ತಿತ್ವದ ವಿಕಸನ, ಮೃದು ಕೌಶಲಗಳು, ತಾಂತ್ರಿಕ ಕೌಶಲಗಳು ಮತ್ತು 21ನೇ ಶತಮಾನದ ಕೌಶಲಗಳಿಂದ ಪ್ರಯೋಜನ ಪಡೆಯುತ್ತಿದ್ದಾರೆ.

ಈ ATL ಭಾರತೀಯ ವಿದ್ಯಾರ್ಥಿಗಳನ್ನು ತೀರ ಭಿನ್ನವಾದ ಸೂಕ್ಷ್ಮ ಪರಿಸರಕ್ಕೆ ಪರಿಚಯಿಸುತ್ತದೆ, ಇದು ಹೊಸ ಕಲ್ಪನೆಗಳನ್ನು ಅನ್ವೇಷಿಸಲು, ಅವುಗಳನ್ನು ಪರೀಕ್ಷಿಸಲು ಮತ್ತು 'ಮಾಡುವ ಮೂಲಕ ಕಲಿಯುವಿಕೆ' ವಿಧಾನವನ್ನು ಅನುಸರಿಸಲು ಸ್ವಾತಂತ್ರ್ಯವನ್ನು ನೀಡುತ್ತದೆ[7]. ವಿದ್ಯಾರ್ಥಿಗಳನ್ನು 4 ವಿಭಿನ್ನ ಮಟ್ಟದ ಕಲ್ಪನೆಗಳಿಗೆ (ಟಿಂಕರಿಂಗ್) ಪರಿಚಯಿಸಲಾಗುತ್ತದೆ. ಇವುಗಳ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ವಿವರವಾಗಿ ವರ್ಣಿಸಲಾಗಿದೆ ಮತ್ತು ಇದರಿಂದಾಗಿ ಅವರು ವಿನ್ಯಾಸ ಚಿಂತನೆ (ಡಿಸೈನ್ ಥಿಂಕಿಂಗ್) ಅನ್ನು ಅನುಭವಿಸುತ್ತಾರೆ ಹಾಗೂ ಈ ವಿಚಾರಧಾರೆಯು ಸಾಮಾಜಿಕ ಮತ್ತು ಸಮುದಾಯದ ಸಮಸ್ಯೆಗಳ ಕಡೆಗೆ ಒಂದು ಹೊಸ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ಅವರಿಗೆ ಸಹಾಯ ಮಾಡುತ್ತದೆ.

[7] ಅನ್ವೇಷಕ ಮನದ ಶಕ್ತಿಯನ್ನು ಸಡಿಲಿಸುವುದು ಎಂಟ್ರಿಪ್ರಿನ್ಯೂರ್ ಇಂಡಿಯಾ, 2018

ಈ ಪ್ರಯಾಣದಲ್ಲಿ ವಿದ್ಯಾರ್ಥಿಗಳು ಇನ್ನಷ್ಟು ಪ್ರಗತಿಯನ್ನು ಮಾಡುತ್ತಾ ಹೋದಂತೆ, ಅವರನ್ನು ಹೊಸ ತಂತ್ರಜ್ಞಾನಗಳಿಗೆ, ಗಣನಾ ಚಿಂತನೆಯ ಪರಿಕಲ್ಪನೆಗಳಿಗೆ ಮತ್ತು ಭೌತಿಕ ಕಂಪ್ಯೂಟಿಂಗ್ ಹಾಗೂ ಇನ್ನಿತರ ವಲಯ ಕ್ಷೇತ್ರಗಳಿಗೆ ಪರಿಚಯಿಸಲಾಗುತ್ತದೆ. ಮತ್ತು ಕೊನೆಯದಾಗಿ ಅವರು ತಂಡಗಳಲ್ಲಿ ಕೆಲಸಮಾಡಲು ಪ್ರಾರಂಭಿಸುತ್ತಾರೆ, ಹಿಂದಿನ ಹಂತಗಳಿಂದ ತಾವು ಕಲಿತಿರುವ ವಿಷಯಗಳನ್ನು ಗರಿಷ್ಠ ಪ್ರಮಾಣದಲ್ಲಿ ಸದುಪಯೋಗಿಸುವ ಮೂಲಕ ನೈಜವಾದ ಜಾಗತಿಕ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕಾರ್ಯನಡಿಸುತ್ತಾರೆ. ಇಂಥ ಕ್ರಮಬದ್ಧ ವಿಧಾನವು ವಿದ್ಯಾರ್ಥಿಗಳು ಈ ಹೊಸ ಹಾಗೂ ನವೀನ ಅನುಭವಕ್ಕೆ ತಮ್ಮನ್ನು ಒಗ್ಗಿಸಿಕೊಳ್ಳಲು, ಹೊಸ ತಂತ್ರಜ್ಞಾನವನ್ನು ಕಲಿಯಲು ಮತ್ತು ತಮ್ಮೊಳಗೆ ಆಗುತ್ತಿರುವ ರೂಪಾಂತರವನ್ನು ಗಣ್ಯಮಾಡಲು ಅನುವು ಮಾಡಿಕೊಡುತ್ತದೆ. ATL ಯುವ ವಿದ್ಯಾರ್ಥಿಗಳಿಗೆ ಬೆಳವಣಿಗೆಯ ಮನೋಭಾವವನ್ನು ಉತ್ತೇಜಿಸುತ್ತದೆ ಮತ್ತು ಈ ಲ್ಯಾಬ್ ಗಳಲ್ಲಿ ಟಿಂಕರಿಂಗ್ನ ನಾಲ್ಕು ಹಂತಗಳ ಮೂಲಕ ಪದವೀಧರರಾಗಲು ಅವರಿಗೆ ಶ್ರದ್ಧೆಯಿಂದ ಸಹಾಯ ಮಾಡುತ್ತದೆ. ಇವುಗಳ ಬಗ್ಗೆ 4ನೇ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಟಿಂಕರಿಂಗ್ ವಿಚಾರವನ್ನು ವಿವರಿಸುವಂಥ ಒಂದು ವಿಡಿಯೋ ಅನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

https://www.youtube.com/watch?v=78CcarCgt8Y



*ಭಾರತದ ಸನ್ಮಾನ್ಯ ಉಪಾಧ್ಯಕ್ಷರಾದ ಶ್ರೀ ಎಮ್. ವೆಂಕಯ್ಯ ನಾಯ್ಡು ಅವರು ಒಂದು ATLನಲ್ಲಿ*

## ಸಾರಾಂಶ

ಈ ಅಧ್ಯಾಯವು ATLನ ಉಗಮವನ್ನು ಪರಿಚಯಿಸುತ್ತಾ, ಅವುಗಳ ಪೀಠಿಕೆ, ಧ್ಯೇಯಗಳು ಮತ್ತು ಒಟ್ಟು ಕಾರ್ಯಕ್ರಮದ ವಿನ್ಯಾಸವನ್ನು ವಿವರಿಸಿತು ಹಾಗೂ ಭಾರತಕ್ಕೆ ಟಿಂಕರಿಂಗ್ ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ಸಹ ಎತ್ತಿತೋರಿಸಿತು.

ಮುಂದಿನ ಅಧ್ಯಾಯವು ಶಾಲೆಗಳು ತಮ್ಮ ATL ನವೀನತೆ ಅಥವಾ ಆವಿಷ್ಕಾರದ ಪ್ರಯಾಣವನ್ನು ಹೇಗೆ ಪ್ರಾರಂಭಿಸುತ್ತವೆ ಎಂಬುದನ್ನು ಒತ್ತಿಹೇಳುತ್ತದೆ ಮತ್ತು ಆಯ್ಕೆ, ಅಂಗೀಕಾರ ಮತ್ತು ನಂತರದ ಸಹಾಯ ಧನ ಪಾವತಿಯ ಕಾರ್ಯವಿಧಾನದ ಕುರಿತು ವಿವರಿಸುತ್ತದೆ.

CHAPTER 2

# ಅಟಲ್ ಟಿಂಕರಿಂಗ್ ಲ್ಯಾಬ್ ಇನ್ನೋವೇಶನ್ ಪ್ರಯಾಣದ ಪ್ರಾರಂಭ

ATL ನವೀನತೆ ಅಥವಾ ಆವಿಷ್ಕಾರದ ಪ್ರಯಾಣವು, ಭಾರತ ಸರಕಾರದಿಂದ ATL ಆಯ್ಕೆಯ ಪ್ರಕ್ರಿಯೆಯೊಂದಿಗೆ ಪ್ರಾರಂಭವಾಗುತ್ತದೆ. ಯಾವ ಶಾಲೆಗಳಲ್ಲಿ ATL ಅನ್ನು ಸ್ಥಾಪಿಸಬೇಕಾಗಿದೆಯೋ ಅಂಥ ಶಾಲೆಗಳನ್ನು ಆಯ್ಕೆಮಾಡಲು, AIM ಬಹಳ ವ್ಯವಸ್ಥಿತವಾದ ಹಾಗೂ ಕಟ್ಟುನಿಟ್ಟಾದ ಸವಾಲು–ಆಧಾರಿತ ಅಪ್ಲಿಕೇಶನ್, ಸ್ಕ್ರೀನಿಂಗ್ ಮತ್ತು ಸೆಲೆಕ್ಷನ್ ಕಾರ್ಯವಿಧಾನವನ್ನು ರಚಿಸಿದೆ. ವೆಬ್ಸೈಟ್–ಆಧಾರಿತ ಪೋರ್ಟಲ್ ಮೂಲಕ ಶಾಲೆಗಳು AIM ಗೆ ಆನ್ಲೈನ್ ಅರ್ಜಿಗಳನ್ನು ಸಲ್ಲಿಸಬೇಕು. ಸೆಲೆಕ್ಷನ್ ಆದ ಬಳಿಕ ಶಾಲೆಗಳು ಡಾಕ್ಯುಮೆಂಟೇಷನ್ ಮತ್ತು ಪಬ್ಲಿಕ್ ಫೈನಾನ್ಸ್ ಮ್ಯಾನೇಜ್ಮೆಂಟ್ ಸಿಸ್ಟಮ್ (PFMS) ಅಂಗೀಕಾರ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಮತ್ತು ಈ ಮೂಲಕ AIM ನಿಂದ ಅಗತ್ಯಪಡಿಸಲಾದಂತೆ ಡಾಕ್ಯುಮೆಂಟ್ ಸಬ್ಮಿಷನ್ ಆನ್ಲೈನ್ ಪೋರ್ಟಲ್ ನಲ್ಲಿ ಅವು ಕಡ್ಡಾಯವಾದ ದಾಖಲೆಪತ್ರಗಳನ್ನು ಸಲ್ಲಿಸಬೇಕು. ಈ ಪ್ರಕ್ರಿಯೆಯನ್ನು ತೃಪ್ತಿದಾಯಕವಾಗಿ ಪೂರ್ಣಗೊಳಿಸಿದ ಬಳಿಕ, ಶಾಲೆಗಳಿಗೆ ಸಹಾಯ ಧನವನ್ನು ವಿತರಿಸಲಾಗುತ್ತದೆ ಮತ್ತು ಆ ಶಾಲೆಗಳು AIM ಮಾರ್ಗದರ್ಶನ ಸೂತ್ರಗಳ ಪ್ರಕಾರ ATL ಅನ್ನು ಸ್ಥಾಪಿಸಬೇಕು ಮತ್ತು ತಮ್ಮ ನವೀನತೆ ಅಥವಾ ಆವಿಷ್ಕಾರದ ಪ್ರಯಾಣವನ್ನು ಪ್ರಾರಂಭಿಸಬೇಕು.

## 2.1 ಸೆಲೆಕ್ಷನ್ ಪ್ರೋಸೆಸ್ ಮತ್ತು ಟೈಮ್‌ಲೈನ್ಸ್

ಈ ATL ಗಾಗಿ ಮಾಡಲಾಗುವ ಶಾಲೆಗಳ ಆಯ್ಕೆಯು ಮೂರು ವಿಭಿನ್ನ ಹಂತಗಳನ್ನು ಒಳಗೂಡಿದೆ ಮತ್ತು ಈ ಇಡೀ ಕಾರ್ಯವಿಧಾನವನ್ನು ಪೂರ್ಣಗೊಳಿಸಲು ಸುಮಾರು 6–8 ತಿಂಗಳುಗಳು ಹಿಡಿಯುತ್ತವೆ.

### ಹಂತ 1: ಆನ್ಲೈನ್ ಅಪ್ಲಿಕೇಷನ್ ಪೋರ್ಟಲ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವುದು: 3–4 ತಿಂಗಳು

ATL ಗಾಗಿ ಆನ್ಲೈನ್ ಅರ್ಜಿಗಳನ್ನು ಸಲ್ಲಿಸಲು ಶಾಲೆಗಳನ್ನು ಆಹ್ವಾನಿಸಲಾಗುತ್ತದೆ. ATL ಆನ್ಲೈನ್ ಅಪ್ಲಿಕೇಷನ್ ಪೋರ್ಟಲ್, ತಮ್ಮ ATL ಅರ್ಜಿಗಳನ್ನು ಸಲ್ಲಿಸಲು ಶಾಲೆಗಳಿಗೋಸ್ಕರ ವಿಕಸಿಸಲಾದ ಒಂದು ತಡೆರಹಿತ ವೇದಿಕೆಯಾಗಿದೆ. ಈ ಆನ್ಲೈನ್ ಅಪ್ಲಿಕೇಷನ್ ವಿಸ್ತಾರವಾದ ನಾಲ್ಕು ವಿಭಾಗಗಳನ್ನು ಒಳಗೊಂಡಿದೆ–ಇದರಲ್ಲಿ ಅರ್ಜಿ ಸಲ್ಲಿಸಲಾಗುವ ಶಾಲೆ ಮತ್ತು ಪ್ರಿನ್ಸಿಪಾಲರ ಸಂಪರ್ಕ ಮಾಹಿತಿ, ಶಾಲೆಯ ಗುರುತಿಗೆ ಸಂಬಂಧಿಸಿದ ಮೂಲಭೂತ ಮಾಹಿತಿ, ಅಂಕಗಳ ಲೆಕ್ಕದಲ್ಲಿ ಶಾಲೆಯ ಕಾರ್ಯಕ್ಷಮತೆ ಮತ್ತು ಸ್ಪರ್ಧೆಗಳಲ್ಲಿ ಅದರ ಭಾಗವಹಿಸುವಿಕೆ ಹಾಗೂ ಮೂಲಭೂತ ಸೌಕರ್ಯಗಳ ಅಸ್ತಿತ್ವ ಇನ್ನು ಮುಂತಾದ ಇತರ ATL ಸಂಬಂಧಿತ ಮಾಹಿತಿಯು ಸೇರಿದೆ.

ಅರ್ಜಿದಾರರು ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಲು ಅನುಮತಿಸಲಾಗುವುದಿಲ್ಲ ಮತ್ತು ಅವರು ಭಾಗಶಃ ಅಥವಾ ಪೂರ್ಣವಾಗಿ ಸುಳ್ಳು / ತಪ್ಪಾದ ಮಾಹಿತಿಯನ್ನು ಒದಗಿಸದಂತೆ ನೋಡಿಕೊಳ್ಳಬೇಕು. ಅಷ್ಟುಮಾತ್ರವಲ್ಲ, ಅರ್ಜಿಗಳ ಸಲ್ಲಿಸುವಿಕೆಯು ಯಾವುದೇ ರೀತಿಯಲ್ಲಿ ಆಯ್ಕೆಯ ಗ್ಯಾರಂಟಿಯನ್ನು ನೀಡುವುದಿಲ್ಲ

ATL ಅನ್ನು ಸ್ಥಾಪಿಸುವುದರಲ್ಲಿ ಆಸಕ್ತಿಯಿರುವ ಶಾಲೆಗಳು ಅರ್ಜಿಯನ್ನು ಸಲ್ಲಿಸುವ ಅಗತ್ಯವಿದೆ. ಇದಕ್ಕಾಗಿ ಮಾರ್ಗದರ್ಶನ ಸೂತ್ರವನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/ATL_Application_Guidelines.pdf

ATL ಆನ್ಲೈನ್ ಫಾರ್ಮ್ ನ ಸ್ನ್ಯಾಪ್ಶಾಟ್ ಅನ್ನು ಅದರೊಂದಿಗೆ ಸೂಚನೆಗಳನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/ATL_Online_Application.pdf

### ಹಂತ 2: ಅಪ್ಲಿಕೇಷನ್‌ಗಳ ಸ್ಕ್ರೀನಿಂಗ್: 1-2 ತಿಂಗಳು

ಈ ATLಗಾಗಿ ಮಾಡಲಾಗುವ ಆಯ್ಕೆಯ ಕಾರ್ಯವಿಧಾನವು 2 ಹಂತಗಳಲ್ಲಿ ನಡೆಯುತ್ತದೆ—ಸ್ಕ್ರೀನಿಂಗ್ ಮತ್ತು ಅಂತಿಮ ಮೌಲ್ಯಮಾಪನ. ಸ್ವೀಕರಿಸಿದ ಅರ್ಜಿಗಳನ್ನು ಅರ್ಹತಾ ಮಾನದಂಡಗಳ ಆಧಾರದ ಮೇಲೆ ಪ್ರೋಸೆಸ್ ಮಾಡಲಾಗುತ್ತದೆ. ಈ ಅರ್ಹತಾ ಮಾನದಂಡದಲ್ಲಿ ಏನೆಲ್ಲಾ ಒಳಗೂಡಿದೆ ಎಂದರೆ, 1000 – 1500 ಚದರ ಅಡಿಗಳಷ್ಟು ಬಿಲ್ಟ್ ಅಪ್ ಜಾಗದ ಲಭ್ಯತೆ, ವಿದ್ಯಾರ್ಥಿಗಳ ಕನಿಷ್ಠ ದಾಖಲಾತಿ, ಸಮರ್ಪಿತ ಗಣಿತ ಮತ್ತು ವಿಜ್ಞಾನ ಶಿಕ್ಷಕರು, ಕಂಪ್ಯೂಟರ್‌ಗಳ ಲಭ್ಯತೆ ಹಾಗೂ ಇಂಟರ್ನೆಟ್ ಸಂಪರ್ಕಳಂಥ ಮೂಲಭೂತ ಸೌಕರ್ಯ, ಸ್ಥಿರ ವಿದ್ಯುತ್ ಸಂಪರ್ಕ, ವಿಜ್ಞಾನ ಪ್ರಯೋಗಾಲಯ, ಗ್ರಂಥಾಲಯ ಮತ್ತು ಆಟದ ಮೈದಾನ ಹಾಗೂ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಕ್ರಮವಾದ ಹಾಜರಾತಿ.

### ಹಂತ 3: ಅಂತಿಮ ಮೌಲ್ಯಮಾಪನ: 1-2 ತಿಂಗಳು

ಸ್ಕ್ರೀನಿಂಗ್ ನಂತರ, ಆಯ್ಕೆಮಾಡಿದ ಅರ್ಜಿಗಳನ್ನು ಅಂತಿಮ ಆಯ್ಕೆಗಾಗಿ ಇನ್ನಷ್ಟು ಮೌಲ್ಯಮಾಪನ ಮಾಡಲಾಗುತ್ತದೆ, ತೂಗಿನೋಡಲಾದ ಸರಾಸರಿ (ವೈಟೆಡ್ ಆವರೇಜ್) ಅಂದರೆ ನಿಯತಾಂಕಗಳ ಆಧಾರದ ಮೇಲೆ ಇದನ್ನು ಮಾಡಲಾಗುತ್ತದೆ; ಇದು ಜಿಲ್ಲಾ ವ್ಯಾಪ್ತಿಗೆ ಮಾತ್ರವೇ ಸೀಮಿತವಾಗಿಲ್ಲ, ವಿಜ್ಞಾನ, ತಂತ್ರಜ್ಞಾನ, ಕಲೆ ಮತ್ತು ಸೃಜನಶೀಲ ಉತ್ಸವಗಳಲ್ಲಿ ಶಾಲಾ ಭಾಗವಹಿಸುವಿಕೆಯು ಹೇಗಿದೆ ಮತ್ತು ಎಷ್ಟು ಪ್ರಶಸ್ತಿಗಳನ್ನು ಪಡೆಯಲಾಗಿದೆ, ಎಷ್ಟು ಮಂದಿ ಮಾರ್ಗದರ್ಶಕರಿದ್ದಾರೆ ಮತ್ತು ಹಿಂದಿನ ವಿದ್ಯಾರ್ಥಿಗಳ ವಚನಬದ್ಧತೆಯ ಆಧಾರದ ಮೇಲೆ. ಮೇಲೆ ತಿಳಿಸಲಾದ ಎಲ್ಲ ನಿಯತಾಂಕಗಳ ಡೇಟಾವನ್ನು ಅಪ್ಲಿಕೇಷನ್ ಫಾರ್ಮಿನಲ್ಲಿ ರೆಕಾರ್ಡ್ ಮಾಡಲಾಗಿರುತ್ತದೆ ಮತ್ತು ಇದು ತಮ್ಮ ಶಾಲೆಯನ್ನು ಸ್ಥಳೀಯ ಆವಿಷ್ಕಾರ ಕೇಂದ್ರವಾಗಿ ಮಾರ್ಪಡಿಸಲು ಂಖಿಐ ಅನ್ನು ಒಂದು ವೇದಿಕೆಯಾಗಿ ಬಳಸಿಕೊಳ್ಳಲು ಶಾಲೆಯು ಎಷ್ಟು ಬದ್ಧವಾಗಿದೆ ಎಂಬುದನ್ನು ನಿರ್ಣಯಿಸಲು ನಮಗೆ ಸಹಾಯ ಮಾಡುತ್ತದೆ. ಅಂತಿಮ ಮೌಲ್ಯಮಾಪನದ ಬಳಿಕ, ಆಯ್ಕೆಯಾದ ಶಾಲೆಗಳ ಪಟ್ಟಿಯನ್ನು AIM ವೆಬ್ಸೈಟ್ ಮೂಲಕ ಮತ್ತು ಇ-ಮೇಲ್ ಸಂವಹನದ ಮೂಲಕ ಆಯ್ಕೆಯಾದ ಶಾಲೆಗಳಿಗೆ ತಿಳಿಸಲಾಗುವುದು. ಶಾಲೆಗಳು ಡಾಕ್ಯುಮೆಂಟೇಷನ್ ಸಂಬಂಧಿತ ಅನುಸರಣೆ ಮತ್ತು PFMS ಸಂಬಂಧಿತ ಅನುಸರಣೆಯನ್ನೂ ಸೇರಿಸಿ ಅನುಸರಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಅಗತ್ಯವಿರುತ್ತದೆ. ಈ ಎರಡೂ ಹಂತಗಳನ್ನು ಮುಂದಿನ ಸೆಕ್ಷನ್ನಲ್ಲಿ ವಿವರವಾಗಿ ತಿಳಿಸಲಾಗಿದೆ.

## 2.2 ಅಟಲ್ ಟಿಂಕರಿಂಗ್ ಲ್ಯಾಬ್ ಸಹಾಯ-ಧನ ವಿತರಣೆಗಾಗಿ ಅನುಸರಣೆ ಪ್ರಕ್ರಿಯೆ

ಸರಿಯಾದ ಡಾಕ್ಯುಮೆಂಟೇಷನ್ ವಿಷಯದಲ್ಲಿ NITI ಆಯೋಗ್ ಅಡಿಯಲ್ಲಿ AIM ಆವಶ್ಯಕತೆಗಳಿಗೆ ಅಂಟಿಕೊಳ್ಳುವುದನ್ನು ಅನುಸರಣೆಯು ಸೂಚಿಸುತ್ತದೆ, ಮತ್ತು ಶಾರ್ಟ್-ಲಿಸ್ಟ್ ಮಾಡಲಾದ ATL ಶಾಲೆಗೆ ಸಹಾಯ-ಧನವನ್ನು ಬಿಡುಗಡೆ ಮಾಡಬಹುದಾದ ಮಟ್ಟಕ್ಕೆ ಇದನ್ನು ಪೂರೈಸಬೇಕಾಗಿದೆ. AIM ಕಟ್ಟುನಿಟ್ಟಾದ ಒಂದು ಅನುಸರಣೆ ಪ್ರಕ್ರಿಯೆಯನ್ನು ವಿನ್ಯಾಸಗೊಳಿಸಿದೆ ಮತ್ತು ಗೊತ್ತುಪಡಿಸಿದ ಕಾಲಾವಧಿಯೊಳಗೆ ಅಗತ್ಯವಿರುವ ದಾಖಲೆಪತ್ರಗಳನ್ನು ಸಲ್ಲಿಸುವ ಶಾಲೆಗಳು ಮಾತ್ರವೇ AIM ಸಹಾಯ-ಧನಕ್ಕಾಗಿ ಆಯ್ಕೆಯಾಗುತ್ತವೆ. ಅನುಸರಣೆಯ ವಿಷಯದಲ್ಲಿ ಎರಡು ಘಟಕಗಳಿವೆ—ಡಾಕ್ಯುಮೆಂಟರಿ ಅನುಸರಣೆ ಮತ್ತು PFMS ಅನುಸರಣೆ. ಡಾಕ್ಯುಮೆಂಟರಿ ಅನುಸರಣೆಯು ಮಾರ್ಗದರ್ಶನಗಳಿಗನುಸಾರ ಕಟ್ಟುನಿಟ್ಟಾಗಿ ನಿರ್ದಿಷ್ಟ ದಾಖಲೆಪತ್ರಗಳನ್ನು ಶಾಲೆಗಳು ಸಲ್ಲಿಸುವಂತೆ ಕಡ್ಡಾಯಪಡಿಸುತ್ತದೆ. ತದನಂತರ ಶಾಲೆಗಳು PFMS ಅನುಸರಣೆಯನ್ನು ಪೂರ್ಣಗೊಳಿಸಬೇಕಾಗಿದೆ, ಅದರಲ್ಲಿ ಶಾಲೆಗಳು ATL ನಿರ್ದಿಷ್ಟ ಬ್ಯಾಂಕ್ ಖಾತೆಗಳನ್ನು ತೆರೆಯಬೇಕಾಗುತ್ತದೆ ಮತ್ತು ನಂತರದ ವಿಭಾಗದಲ್ಲಿ ವಿವರಿಸಲಾಗಿರುವಂತೆ ಈ ಬ್ಯಾಂಕ್ ಖಾತೆಗಳನ್ನು ತರುವಾಯ ಕಾಯಂಗೊಳಿಸಲಾಗುತ್ತದೆ ಮತ್ತು ಆನ್ಲೈನ್ ಪೋರ್ಟಲ್‌ನಲ್ಲಿ ಅನುಮೋದಿಸಲಾಗುತ್ತದೆ.

### 2.2.1 ಡಾಕ್ಯುಮೆಂಟರಿ ಅನುಸರಣೆ

ಶಾರ್ಟ್-ಲಿಸ್ಟ್ ಮಾಡಲಾದ ಶಾಲೆಗಳು, ಡಾಕ್ಯುಮೆಂಟರಿ ಅನುಸರಣೆಗಾಗಿ ಆನ್ಲೈನ್ ಡಾಕ್ಯುಮೆಂಟ್ ಸಬ್ಮಿಷನ್ ಪೋರ್ಟಲ್ ನಲ್ಲಿ ಸಂಬಂಧಿಸಿದ ದಾಖಲೆಗಳನ್ನು ಅಪ್ಲೋಡ್ ಮಾಡಬೇಕಾಗುತ್ತದೆ. ಈ ಡಾಕ್ಯುಮೆಂಟ್ಗಳಲ್ಲಿ ಶಾಲೆಯ ಲೆಟರ್ ಹೆಡ್ ನಲ್ಲಿ ಶಾಲೆಯ ಪ್ರಿನ್ಸಿಪಾಲರಿಂದ ಡಿಕ್ಲರೇಷನ್ ಫಾರ್ಮ್, ಮೆಮೊರಾಂಡಮ್ ಆಫ್ ಅಗ್ರಿಮೆಂಟ್ (MoA), ಬಾಂಡ್ (ಇದು ಸರಕಾರೇತರ ಶಾಲೆಗಳಿಗೆ ಮಾತ್ರ ಅನ್ವಯಿಸುತ್ತದೆ), ಬ್ಯಾಂಕ್ ಪಾಸ್-ಬುಕ್ ವಿವರ ಮತ್ತು ATL ಲ್ಯಾಬ್ ಲೇಔಟ್ ಒಳಗೊಂಡಿರುತ್ತದೆ.

### 2.2.2 PFMS ಅನುಸರಣೆ

ಡಾಕ್ಯುಮೆಂಟೇಷನ್ ಅನುಸರಣೆಯ ಜೊತೆಗೆ ಏಕಕಾಲದಲ್ಲಿ ಶಾಲೆಯು PFMS ಅನುಸರಣೆಯನ್ನು ಸಹ ಪೂರ್ಣಗೊಳಿಸುವುದು ಅಗತ್ಯವಾಗಿರುತ್ತದೆ. PFMS ಎಂಬುದು ಸರಕಾರ ಪ್ರಾರಂಭಿಸಿದ ಫೈನಾನ್ಸ್ ಮ್ಯಾನೇಜ್ಮೆಂಟ್ ಮತ್ತು ಡಿಸಿಷನ್ ಸಪೋರ್ಟ್ ಸಿಸ್ಟಮ್ ಆಗಿದ್ದು, ಇದು ಸರಕಾರದ ಯೋಜನೆಗಳಿಗಾಗಿ ನಿಧಿ ವಿತರಣೆ ಮತ್ತು ಬಳಕೆಯನ್ನು ಟ್ರ್ಯಾಕ್ ಮಾಡಲು ಮತ್ತು ಮೇಲ್ವಿಚಾರಣೆ ಮಾಡಲು ಸಹಾಯ ಮಾಡುತ್ತದೆ. ಇದರ ಗುರಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವುದು ಮತ್ತು ಸಾರ್ವಜನಿಕ ನಿಧಿಗಳ ದುರ್ಬಳಕೆಯನ್ನು ತಡೆಗಟ್ಟುವುದೇ ಆಗಿದೆ ಮತ್ತು ಎಲ್ಲಾ ಯೋಜನೆಗಳಿಗಾಗಿ ಭಾರತ ಸರಕಾರವು ಇದನ್ನು ಕಡ್ಡಾಯಗೊಳಿಸಿದೆ.

PFMS ಅನುಸರಣೆಯ ಭಾಗವಾಗಿ, ಶಾಲೆಗಳು ತಮ್ಮ ಸಂಸ್ಥೆಯನ್ನು PFMS ಪೋರ್ಟಲ್ ನಲ್ಲಿ ರೆಜಿಸ್ಟರ್ ಮಾಡಿಕೊಳ್ಳುವಂತೆ ಅಗತ್ಯಪಡಿಸಲಾಗುತ್ತದೆ. ರೆಜಿಸ್ಟ್ರೇಷನ್ ಅನ್ನು ಸುಲಭಗೊಳಿಸಲು, ATL ಸಹಾಯ ಧನವನ್ನು ಪಡೆದುಕೊಳ್ಳುವ ಪ್ರತ್ಯೇಕ ಉದ್ದೇಶಕ್ಕಾಗಿಯೇ ಶಾಲೆಗಳು ಶೆಡ್ಯೂಲ್ ಮಾಡಲಾಗಿರುವಂಥ ಒಂದು ಬ್ಯಾಂಕಿನಲ್ಲಿ ಒಂದು ಹೊಸ ಬ್ಯಾಂಕ್ ಖಾತೆಯನ್ನು ತೆರೆಯುವ ಅಗತ್ಯವಿದೆ. ಬೇರೆ ಮೂಲಗಳಿಂದ ಬರುವ ಹಣವನ್ನು ಈ ಖಾತೆಗಳಲ್ಲಿ ಠೇವಣಿ ಮಾಡಲು ಅನುಮತಿಸಲಾಗುವುದಿಲ್ಲ. ಸ್ಕೀಮ್ ನಂಬರ್ನೊಂದಿಗೆ PFMS ಪೋರ್ಟಲ್ (https:/pfms.nic.in) ನಲ್ಲಿ ರೆಜಿಸ್ಟರ್ ಮಾಡಲು ಮುಂದುವರಿಯುವುದಕ್ಕೆ ಮುಂಚೆ, ಬ್ಯಾಂಕಿನ ಸರ್ವರ್/ಪೋರ್ಟಲ್ನಲ್ಲಿ ಖಾತೆಯನ್ನು ಆಕ್ಟಿವೇಟ್ ಮಾಡಲು ಶಾಲೆಗಳು ಕಡಿಮೆಪಕ್ಷ ಒಂದು ದಿನವಾದರೂ ಕಾಯಬೇಕು.

ಅನುಸರಣೆಯು ತೃಪ್ತಿದಾಯಕವಾಗಿ ಪೂರ್ಣಗೊಂಡ ನಂತರ, ಸಹಾಯ-ಧನವನ್ನು ಶಾಲೆಗಳಿಗೆ ವಿತರಿಸಲಾಗುತ್ತದೆ ಮತ್ತು ಶಾಲೆಗಳು ATL ಅನ್ನು ಸ್ಥಾಪಿಸುವ ಅಗತ್ಯವಿದೆ ಮತ್ತು ಸಂಗ್ರಹಣೆ ಹಾಗೂ ಸಹಾಯ-ಧನ ನಿಧಿ ಬಳಕೆ ಮಾರ್ಗದರ್ಶನಕ್ಕನುಸಾರ ಲ್ಯಾಬ್ ಅನ್ನು ಸೆಟ್ ಅಪ್ ಮಾಡಬೇಕು.

ಅನುಸರಣೆ ಸಂಬಂಧಿತ ಎಲ್ಲ ದಾಖಲೆಗಳನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/ATL_Compliance

## 2.3 ಸಂಗ್ರಹಣೆ ಹಾಗೂ ಸಹಾಯ-ಧನ ನಿಧಿ ಬಳಕೆ ಮಾರ್ಗದರ್ಶನವನ್ನು ಅರ್ಥಮಾಡಿಕೊಳ್ಳುವುದು

ನಮ್ಮ ದೇಶದಲ್ಲಿ ನವೀನತೆ ಅಥವಾ ಆವಿಷ್ಕಾರದ ಪರಿಸರ ವ್ಯವಸ್ಥೆಯನ್ನು ರಚಿಸುವ ಮತ್ತು ನಮ್ಮ ಯುವ ಜನರು ಪರಿವರ್ತಕರಾಗಲು ಮತ್ತು ಪರಿಹಾರ ಒದಗಿಸುವವರಾಗಲು ಅವರಲ್ಲಿ ಸಾಮರ್ಥ್ಯಗಳನ್ನು ಕಟ್ಟುವ ದೊಡ್ಡ ಗುರಿಯತ್ತ ಕಾರ್ಯನಿರ್ವಹಿಸುವಷ್ಟರ ಮಟ್ಟಿಗೆ ಪ್ರತಿಯೊಂದು ATL ಉಪಕರಣಗಳನ್ನು ಸಂಗ್ರಹಿಸಬೇಕಾಗಿದೆ. ಸಹಾಯ ಧನವನ್ನು ಪಡೆದ 3 ತಿಂಗಳುಗಳೊಳಗೆ ಶಾಲೆಗಳು ATL ಅನ್ನು ಸೆಟ್ ಅಪ್ ಮಾಡಬೇಕು, ಉದ್ಘಾಟಿಸಬೇಕು ಮತ್ತು ಅದು ಕಾರ್ಯನಡಿಸುತ್ತಿರುವಂತೆ ನೋಡಿಕೊಳ್ಳಬೇಕು.

ATL ಸಾಧನ ಸಂಗ್ರಹಣೆ ಮಾರ್ಗದರ್ಶನಗಳನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/ATL_Equipment_Procurement_Guideline.pdf

ATLಗಾಗಿ ಉಪಕರಣಗಳು ಮತ್ತು ಸಾಮಗ್ರಿಗಳ ಸಂಗ್ರಹಣೆಯ ಸಮಯದಲ್ಲಿ ಈ ಕೆಳಗಿನ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ತುಂಬ ಪ್ರಾಮುಖ್ಯ:

ಎ. ಟಾಸ್ಕ್-ಸ್ಪೆಸಿಫಿಕ್ ಉಪಕರಣಗಳಿಗಿಂತ ಜನರಲ್ ಉಪಕರಣಗಳು ಮತ್ತು ಸಲಕರಣೆಗಳಿಗೆ ಆದ್ಯತೆ ನೀಡಲಾಗುತ್ತದೆ.

ಬಿ. ದುಬಾರಿ ಸಲಕರಣೆಗಳನ್ನು ಖರೀದಿಸುವ ಮೊದಲು ಕಡಿಮೆಪಕ್ಷ ಒಬ್ಬ ವ್ಯಕ್ತಿಗೆ ಅದನ್ನು ಆಪರೇಟ್ ಮಾಡಲು ಗೊತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಪ್ರಾಮುಖ್ಯವಾಗಿದೆ.

ಸಿ. ದೊಡ್ಡ ಖರೀದಿಯು (ಬಲ್ಕ್ ಬೈಯಿಂಗ್) ಆರ್ಥಿಕವಾಗಿ ಪ್ರಯೋಜನದಾಯಕವಾಗಿರಬಹುದು ಮತ್ತು ದೀರ್ಘಾವಧಿಯಲ್ಲಿ ವೆಚ್ಚಗಳನ್ನು ಕಡಿಮೆ ಮಾಡಬಹುದು.

ಡಿ. ಸಲಕರಣೆಯ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಲು ಶಾಲೆಗಳು ಸಾಕಷ್ಟು ಶ್ರದ್ಧೆಯನ್ನು ವಹಿಸಬೇಕು.

ಇ. ಅನಿರೀಕ್ಷಿತ ಅನಿಶ್ಚಯತೆಗಳನ್ನು ಸರಿದೂಗಿಸಲು ಕಾರ್ಯಾಚರಣೆಗಳ ವೆಚ್ಚದಲ್ಲಿ ಮೈಂಟೆನೆನ್ಸ್ ಮತ್ತು ಬ್ರೇಕೇಜ್ ವೆಚ್ಚಗಳನ್ನು ಲೆಕ್ಕಿಸಬೇಕು.

## 2.4 ಸಂಗ್ರಹಣೆಗಾಗಿ ಸರಕಾರದ ಇ-ಮಾರ್ಕೆಟ್ ಪ್ಲೇಸನ್ನು ಅರ್ಥಮಾಡಿಕೊಳ್ಳುವುದು

ಭಾರತ ಸರಕಾರದ ಇತ್ತೀಚಿನ ಆದೇಶದ ಪ್ರಕಾರ, ಎಲ್ಲ ಸಂಗ್ರಹಣೆಗಳು ಗವರ್ನಮೆಂಟ್ ಇ-ಮಾರ್ಕೆಟ್ಪ್ಲೇಸ್ (GeM) ಮೂಲಕವೇ ನಡೆಯಬೇಕು. GeM ಎಂಬುದು ಸಾಮಾನ್ಯವಾಗಿ ಉಪಯೋಗಿಸಲಾಗುವ ಸರಕುಗಳು ಮತ್ತು ಸೇವೆಗಳನ್ನು ಆನ್ಲೈನ್ ನಲ್ಲಿ ಸಂಗ್ರಹಿಸಲು ಸರಕಾರೀ ಇಲಾಖೆಗಳಿಗೆ ಅವಕಾಶವನ್ನು ಒದಗಿಸುವಂಥ ಒಂದು ವೇದಿಕೆಯಾಗಿದ್ದು, ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ, ದಕ್ಷತೆ ಮತ್ತು ವೇಗವನ್ನೂ ಉತ್ತೇಜಿಸುತ್ತದೆ. GFR 2017 ರಲ್ಲಿ ನಿಯಮ 149 ನ್ನು ಸೇರಿಸುವ ಮೂಲಕ, ಭಾರತ ಸರಕಾರದ ಹಣಕಾಸು ಸಚಿವಾಲಯವು GeM (https://gem.gov.in) ಅನ್ನು ಅಧಿಕೃತಗೊಳಿಸಿದೆ ಮತ್ತು ಇದರ ಮೂಲಕ ಖರೀದಿಗಳನ್ನು ಮಾಡುವುದನ್ನು ಕಡ್ಡಾಯಗೊಳಿಸಿದೆ. ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲಿಕ್ಕಾಗಿ ವಿಶ್ವಾಸಾರ್ಹ ಮಾರಾಟಗಾರರೊಂದಿಗೆ ವ್ಯವಹಾರವನ್ನು ಖಾತ್ರಿಪಡಿಸಿಕೊಳ್ಳಲು ಎಲ್ಲಾ ATL ಶಾಲೆಗಳು GeM ಮೂಲಕವೇ ಸಲಕರಣೆಗಳನ್ನು ಖರೀದಿಸಬೇಕು.

ATL ಅನ್ನು ಸ್ಥಾಪಿಸಲು ಪ್ರತಿಯೊಂದು ಶಾಲೆಗೆ 20 ಲಕ್ಷ ರೂಪಾಯಿಗಳ ಸಹಾಯ ಧನವನ್ನು ಮಂಜೂರು ಮಾಡಲಾಗಿದೆ. ಇದರಲ್ಲಿ 10 ಲಕ್ಷ ರೂಪಾಯಿಗಳನ್ನು ಒಂದು ಬಾರಿಯ ಸ್ಥಾಪನಾ ವೆಚ್ಚವಾಗಿ ಮತ್ತು ಉಳಿದ 10 ಲಕ್ಷ ರೂಪಾಯಿಗಳನ್ನು ಕಾರ್ಯಾಚರಣೆ ಹಾಗೂ ನಿರ್ವಹಣೆಗಾಗಿ, ಐದು ವರ್ಷಗಳ ವರೆಗೆ ಪ್ರತಿ ವರ್ಷ 2.00 ಲಕ್ಷ ರೂಪಾಯಿಗಳನ್ನು ಒಂದೊಂದು ಭಾಗದಲ್ಲಿ ವಿತರಿಸಲಾಗುತ್ತದೆ. ಮೊದನೆಯ ವರ್ಷದಲ್ಲಿ ಶಾಲೆಗಳಿಗೆ ATL ಸಹಾಯ ಧನದ ಕೆಳಗೆ 12 ಲಕ್ಷ ರೂಪಾಯಿಗಳು ದೊರೆಯುತ್ತವೆ, ಇದರಲ್ಲಿ 10 ಲಕ್ಷ ರೂಪಾಯಿಗಳನ್ನು ಬಂಡವಾಳದ ವೆಚ್ಚ ಮತ್ತು 2 ಲಕ್ಷ ರೂಪಾಯಿಗಳನ್ನು ಕಾರ್ಯಾಚರಣೆ ಮತ್ತು ನಿರ್ವಹಣೆಯ ವೆಚ್ಚವು ಒಳಗೂಡಿದೆ.

ಸಹಾಯ ಧನ ನಿಧಿ ಬಳಕೆ ಮಾರ್ಗದರ್ಶನಗಳನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/ATL_Grant_In_Aid_Fund_Utilization_Guideline.pdf

ATL ಸಲಕರಣೆ ಪಟ್ಟಿಯ ಪ್ರಕಾರ ಎಲ್ಲ ATL ಶಾಲೆಗಳು ಸಲಕರೆಗಳನ್ನು ಖರೀದಿಸುವ ಅಗತ್ಯವಿದ್ದು, ಈ ಪಟ್ಟಿಯನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/ATL_Equipment_List




***ಭಾರತ ಸರಕಾರದ ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಕೇಂದ್ರ ಸಚಿವರಾದ ಸನ್ಮಾನ್ಯ ಶ್ರೀ ಪ್ರಕಾಶ್ ಜಾವಡೇಕರ್ ಅವರು ಒಂದು ATL ಉದ್ಘಾಟನೆಯಲ್ಲಿ***

## ಸಾರಾಂಶ

ಈ ಅಧ್ಯಾಯವು ಶಾಲೆಗಳು ತಮ್ಮ ATL ಇನ್ನೋವೇಶನ್ ಪ್ರಯಾಣವನ್ನು ಹೇಗೆ ಪ್ರಾರಂಭಿಸುತ್ತವೆ ಎಂಬುದನ್ನು ವಿವರಿಸಿತು ಮತ್ತು ಆಯ್ಕೆ, ಅನುಸರಣೆ ಹಾಗೂ ತರುವಾಯದ ಸಹಾಯ ಧನ ವಿತರಣೆ ಪ್ರಕ್ರಿಯೆಯನ್ನು ವಿವರವಾಗಿ ತಿಳಿಸಿತು.

ಮುಂದಿನ ಅಧ್ಯಾಯವು ATL ಉದ್ಘಾಟಿಸಲು ಮತ್ತು ನಡೆಸಲು ಕಾರ್ಯತಂತ್ರವನ್ನು ವಿವರಿಸುತ್ತದೆ. ಇದರಲ್ಲಿ ಸ್ಥಾಪನೆಯ ಅಂಶಗಳು ಮತ್ತು ವಿದ್ಯಾರ್ಥಿಗಳೊಂದಿಗಿನ ಒಪ್ಪಂದದ ಕುರಿತಾದ ಅಂಶಗಳೂ ಸೇರಿವೆ.

CHAPTER 3

# ಅಟಲ್ ಟಿಂಕರಿಂಗ್ ಲ್ಯಾಬ್ ಅನ್ನು ಯಶಸ್ವಿಕರವಾಗಿ ನಿರ್ವಹಿಸುವುದು

ಶಾಲೆಯು ಅದರ ATL ನವೀನತೆ ಅಥವಾ ಆವಿಷ್ಕಾರದ ಪ್ರಯಾಣವನ್ನು ಪ್ರಾರಂಭಿಸಿದ ನಂತರ, ಶಾಲೆಯಲ್ಲಿ ATL ಅನ್ನು ಯಶಸ್ವಿಕರವಾಗಿ ಉದ್ಘಾಟಿಸುವ ನಿಟ್ಟಿನಲ್ಲಿ ATL ಜಾಗವನ್ನು ವಿನ್ಯಾಸಿಸುವುದರ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು, ಸರಿಯಾದ ಮಾನವ ಸಂಪನ್ಮೂಲಗಳನ್ನು ಗುರುತಿಸಬೇಕು. ಸೌಕರ್ಯವು ಅದರ ನಿರೀಕ್ಷಿತ ಫಲಿತಾಂಶಗಳನ್ನು ಪೂರೈಸಲು ಸಮರ್ಥವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಈ ಎಲ್ಲ ಅಂಶಗಳು ತುಂಬ ನಿರ್ಣಾಯಕವಾಗಿವೆ.

## 3.1 ಅಟಲ್ ಟಿಂಕರಿಂಗ್ ಲ್ಯಾಬ್ ಜಾಗವನ್ನು ವಿನ್ಯಾಸಿಸುವುದು

ATL ಅಪ್ಲಿಕೇಷನ್ ಮಾರ್ಗದರ್ಶನದ ಪ್ರಕಾರ, ಪ್ರಾದೇಶಿಕ ಸ್ಥಳದ ಮೇಲಾಧಾರಿಸಿ ATL ಅನ್ನು 1000 ದಿಂದ 1500 ಚದರ ಅಡಿಗಳಷ್ಟು ಪ್ರದೇಶದಲ್ಲಿ ಸ್ಥಾಪಿಸಬೇಕು. ATL ಜಾಗವು ಒಂದು ಸಿಂಗಲ್ ಕೋಣೆಯಾಗಿದ್ದು ಅದರಲ್ಲಿ ಗರಿಷ್ಠ ಪ್ರಮಾಣದ ತೆರೆದ ಸ್ಥಳವಿರಬೇಕು, ಅದರಲ್ಲಿ ಒಂದು ವಿಭಾಗವನ್ನು ಉಪನ್ಯಾಸ ಹಾಗೂ ಮಾರ್ಗದರ್ಶನಕ್ಕಾಗಿ ನಿಗದಿಪಡಿಸಬಹುದು ಮತ್ತು ಇನ್ನೊಂದು ವಿಭಾಗವನ್ನು ಏಕಕಾಲದಲ್ಲಿ ಸಹಯೋಗದ ಪ್ರಾಜೆಕ್ಟ್ ವರ್ಕ್–ಗಾಗಿ ಉಪಯೋಗಿಸಬಹುದು. ಅಸಾಧಾರಣ ಸನ್ನಿವೇಶಗಳಲ್ಲಿ, ಒಳಗಿನಿಂದ ಪರಸ್ಪರ ಸಂಪರ್ಕ ಹೊಂದಿರುವಂಥ ಎರಡು ಅಕ್ಕಪಕ್ಕದ ಕೋಣೆಗಳನ್ನು ಸಹ ಉಪಯೋಗಿಸಬಹುದು. ATL ಗಾಗಿ ಸುರಕ್ಷಿತ ಲಾಕಿಂಗ್ ಮತ್ತು ಸೆಕ್ಯುರಿಟಿ ಸಿಸ್ಟಮ್ ಅನ್ನು ಅಳವಡಿಸಬೇಕು. ಶಾಲೆಯ ಮುಖ್ಯ ಕಟ್ಟಡದ ಸಮೀಪದಲ್ಲೇ ATL ನಿವೇಶನವು ಇರಬೇಕು. ವಿದ್ಯಾರ್ಥಿಗಳ ಚಲನೆಗೆ ಸಾಕಷ್ಟು ಸ್ಥಳಾವಕಾಶ ಇರುವಂಥ ರೀತಿಯಲ್ಲಿ ಲ್ಯಾಬನ್ನು ಅರೇಂಜ್ ಮಾಡಬೇಕು. ಟಿಂಕರಿಂಗ್ ಲ್ಯಾಬ್ ನಲ್ಲಿ ಒಂದು ನಿಗದಿತ ಸ್ಥಳದಲ್ಲಿ ಎಲ್ಲ ಸಂಬಂಧಿತ ಮಾರ್ಗದರ್ಶನ ಡಾಕ್ಯುಮೆಂಟುಗಳು ಮತ್ತು ಕೈಪಿಡಿಗಳನ್ನು ಇರಿಸಬೇಕು.

ATL ಒಂದು ಮುಕ್ತ ಪ್ರಯೋಗ ಮತ್ತು ನವೀನತೆ ಅಥವಾ ಆವಿಷ್ಕಾರದ ವೇದಿಕೆಯಾಗಲಿರುವುದರಿಂದ, ಸೂಕ್ತವಾದ ವಿನ್ಯಾಸ ಹಾಗೂ ಲೇಔಟ್ ಮಾರ್ಗದರ್ಶನಗಳನ್ನು ಅನುಸರಿಸುವುದು ತುಂಬ ಅತ್ಯಗತ್ಯವಾಗಿದೆ.

ಲೇಔಟ್ ಮಾರ್ಗದರ್ಶನಗಳನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/ATL_Design_and_Layout_Guideline.pdf

ಇದಕ್ಕೆ ಕೂಡಿಸಿ, ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಸುರಕ್ಷತೆಯು ಅತಿ ಪ್ರಾಮುಖ್ಯವಾಗಿದೆ. ಪ್ರಾಮುಖವಾದ ಸುರಕ್ಷಾ ಮಾರ್ಗದರ್ಶನಗಳನ್ನು ಮತ್ತು ಸಭ್ಯಾಚಾರಗಳನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/ATL_Safety_Guideline.pdf

ATL ತೆರೆದ ಕಾರ್ಯಸ್ಥಳವಾಗಿದ್ದು, ನವೀನತೆಗೆ ಅಥವಾ ಆವಿಷ್ಕಾರಕ್ಕೆ ಅನುಕೂಲಕರವಾಗಿರುವುದರಿಂದ, ಲ್ಯಾಬ್ಗಳಲ್ಲಿ ಸಮಾನರೂಪತೆ ಮತ್ತು ಏಕರೂಪತೆಯನ್ನು ಅನುಮತಿಸಲಿಕ್ಕಾಗಿ ರೋಮಾಂಚಕ ಬ್ರ್ಯಾಂಡಿಂಗ್ ಸ್ಕೀಮ್ ಅನ್ನು ಅನುಸರಿಸಬೇಕು, ಅದೇ ಸಮಯದಲ್ಲಿ ಪ್ರತಿಯೊಂದು ಲ್ಯಾಬಿನ ವಿಶಿಷ್ಟ ತೋರಿಕೆ ಮತ್ತು ಭಾವನೆಯನ್ನು ಸಹ ಕಾಪಾಡಿಕೊಳ್ಳಬೇಕು. ಬ್ರ್ಯಾಂಡಿಂಗ್ ಮಾರ್ಗದರ್ಶಕಗಳನ್ನು ಮೂರು ವಿಶಾಲ ವರ್ಗಗಳಾಗಿ ವರ್ಗೀಕರಿಸಬಹುದು.

ATL ಕ್ರಿಯೆಟೀವ್ ಬ್ರ್ಯಾಂಡಿಂಗ್: ATL ಕ್ರಿಯೆಟೀವ್ ಬ್ರ್ಯಾಂಡಿಂಗ್ ಮಾರ್ಗದರ್ಶನ ಫೈಲುಗಳನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/ATL_Creative_Branding.zip

ATL ವಿನ್ಯಾಸ ಮತ್ತು ಲೇಔಟ್ ಬ್ರ್ಯಾಂಡಿಂಗ್: ATL ವಿನ್ಯಾಸ ಮತ್ತು ಲೇಔಟ್ ಬ್ರ್ಯಾಂಡಿಂಗ್ ಮಾರ್ಗದರ್ಶನಗಳನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/ATL_Design_and_Layout_Branding.pdf






AIM ಬ್ರ್ಯಾಂಡಿಂಗ್ ಉಪಯೋಗಿಸುವುದು: AIM ಬ್ರ್ಯಾಂಡಿಂಗ್ ಅನ್ನು ಉಪಯೋಗಿಸಲಿಕ್ಕಾಗಿರುವ ಮಾರ್ಗದರ್ಶನಗಳನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/Guideline_for_using_AIM_Logo.pdf

ಮಾದರಿ ATL ಲ್ಯಾಬ್ ವಿನ್ಯಾಸ ಮತ್ತು ಲೇಔಟ್ ಗಾಗಿರುವ ವಿಡಿಯೋವನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:
https://www.youtube.com/watch?v=TYKCIPFxGzI&t

***ATL ಲ್ಯಾಬ್ ವ್ಯವಸ್ಥೆ, ಮಾಡ್ಯುಲರ್ ಪೀಠೋಪಕರಣ, ಮತ್ತು ಉಪಕರಣಗಳ ಸೂಕ್ತವಾದ ಪ್ರದರ್ಶನ ಮತ್ತು ಶೇಖರಣೆ ಹಾಗೂ ಬೆಳಕಿನ ವ್ಯವಸ್ಥೆ***

## 3.2 ಸರಿಯಾದ ಮಾನವ ಸಂಪನ್ಮೂಲವನ್ನು ಗುರುತಿಸುವುದು

ATL ನಲ್ಲಿ ಕೆಲಸ ಮಾಡುವಾಗ, ತಮ್ಮ ಐಡಿಯಾಗಳನ್ನು ಕಾರ್ಯಸಾಧಕ ಮೂಲಮಾದರಿಗಳಾಗಿ/ಮಾಡೆಲ್ ಗಳಾಗಿ ಮಾರ್ಪಡಿಸುವ ಅವಕಾಶ ವಿದ್ಯಾರ್ಥಿಗಳಿಗೆ ಸಿಗುತ್ತದೆ. ಆದರೂ, ಅಪೇಕ್ಷಿತ ಫಲಿತಾಂಶಗಳನ್ನು ಸಾಧಿಸಲು, ATL ಇನ್-ಚಾರ್ಜ್ ಪಾತ್ರವನ್ನು ನಿರ್ವಹಿಸಲು ಸರಿಯಾದ ಜ್ಞಾನ, ಕೌಶಲಗಳು ಮತ್ತು ಅನುಭವವಿರುವ ಶಿಕ್ಷಕರನ್ನು ನೇಮಿಸುವುದು/ಆಯ್ಕೆಮಾಡುವುದು ತುಂಬ ಬೇಡಿಕೆಯದ್ದಾಗಿದೆ. ATLನ ನವೀನತೆ ಅಥವಾ ಆವಿಷ್ಕಾರದ ಉತ್ಪಾದಕತೆಯನ್ನು ಖಾತ್ರಿಪಡಿಸಿಕೊಳ್ಳಲು ATL ಇನ್-ಚಾರ್ಜ್ ತುಂಬ ನಿರ್ಣಾಯಕವಾಗಿದೆ ಮತ್ತು ಜಾಗರೂಕತೆಯಿಂದ ಆಯ್ಕೆ ಮಾಡಬೇಕಾಗಿದೆ.

ATL ಇನ್-ಚಾರ್ಜ್ ಆಗಲು ಅಗತ್ಯವಿರುವ ಅರ್ಹತೆಗಳನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/Potential_Qualifications_for_ATL_Incharge.pdf

ಐಡಿಯಗಳ ಉತ್ಪಾದನೆಯನ್ನು ಸುಲಭಗೊಳಿಸಲು ಮತ್ತು ಟಿಂಕರಿಂಗ್ ಕಡೆಗೆ ವಿದ್ಯಾರ್ಥಿಗಳನ್ನು ಪ್ರಚೋದಿಸಲು, ಅವನು ಅಥವಾ ಅವಳು ATL ನವೀನತೆಯ ಪರಿಸರ ವ್ಯವಸ್ಥೆಯನ್ನು ಬೆಳೆಸಲು ಶಕ್ತವಾಗಿರಬೇಕು. ಶಾಲೆಯ ಮ್ಯಾನೇಜ್ಮೆಂಟ್ ಬೆಂಬಲದಿಂದ ATL ಅನ್ನು ಸೆಟ್ ಅಪ್ ಮಾಡುವುದು ATL ಇನ್-ಚಾರ್ಜ್ನ ಜವಾಬ್ದಾರಿಯಾಗಿದೆ. ATL ಇನ್-ಚಾರ್ಜ್, ಶಾಲೆಗಳಲ್ಲಿ ಅರಿವನ್ನು ಮೂಡಿಸಲಿಕ್ಕಾಗಿ ಕ್ಯಾಂಪೈನ್ ಗಳನ್ನು ಆಯೋಜಿಸಬೇಕು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ATL ಸೇರುವಂತೆ ಮಾಡಬೇಕು. ಅವನು/ಅವಳು ATLನಲ್ಲಿ ಸ್ಥಳೀಯ ಸಮುದಾಯದ ಸಮಸ್ಯೆಗಳನ್ನು ಪರಿಹರಿಸುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಬೇಕು. ಅವನು/ಅವಳು ಸಂಬಂಧಿತ ಪಾಲುದಾರರನ್ನು ಅಂದರೆ ಮಾರ್ಗದರ್ಶಕರು, ಉದ್ಯಮ ತಜ್ಞರು ಮತ್ತು ತಯಾರಕರನ್ನು ಗುರುತಿಸಬೇಕು ಮತ್ತು ಅವರೊಂದಿಗೆ ಪಾಲುದಾರಿಕೆಯನ್ನು ಬೆಳೆಸಿಕೊಳ್ಳಬೇಕು ಮತ್ತು ಎಲ್ಲ ಚಟುವಟಿಕೆಗಳನ್ನು ದಾಖಲಿಸಬೇಕು ಮತ್ತು ವರದಿಗಳನ್ನು ಸಿದ್ಧಪಡಿಸಬೇಕು.

### ಕೇಸ್ ಸ್ಟಡಿ: ATL ಲೀಡರ್ಶಿಫ್ ಉತ್ತೇಜಿಸುವ ಬೆಳವಣಿಗೆಯ ಮನೋಭಾವ
### ಶಾಲೆ: ಗವರ್ನಮೆಂಟ್ ಹೈಯರ್ ಮಲ್ಟಿಪರ್ಪಸ್ ಸೀನಿಯರ್ ಸೆಕೆಂಡರಿ ಸ್ಕೂಲ್, ಬಿಲಾಸ್ಪುರ್, ಛತ್ತೀಸ್ಗಢ್
### ATL ಇನ್–ಚಾರ್ಜ್: ಡಾ. ಧನಂಜಯ್ ಪಾಂಡೆ

***"ಜೀವನದಲ್ಲಿ ನಾವು ಹೆಚ್ಚೆಚ್ಚು ಸವಾಲುಗಳನ್ನು ಎದುರಿಸಿದಂತೆ, ಜೀವನದಲ್ಲಿ ನಾವು ಯಶಸ್ಸನ್ನು ಕಾಣುತ್ತೇವೆ ಎಂಬ ನಂಬಿಕೆ ನಮ್ಮಲ್ಲಿ ಇನ್ನಷ್ಟು ಬಲಗೊಳ್ಳುತ್ತದೆ."***

ಡಾ. ಧನಂಜಯ್ ಅವರಿಗೆ ಮೊದಲ ಬಾರಿಗೆ ನವೀನತೆಯ ಅನುಭವವಾದದ್ದು, ರಾಯ್ಪುರದ ಜೆ. ಆರ್ ದಾನಿ ಸರಕಾರಿ ಶಾಲೆಯ ATL ನಲ್ಲಿ ನಡೆದ ಒಂದು ತರಬೇತಿ ಕ್ರಾಯಕ್ರಮದಲ್ಲಾಗಿತ್ತು. ಅವರು ಇತರ ಶಿಕ್ಷಕರೊಂದಿಗೆ ಪ್ರಾಯೋಗಿಕ ತರಬೇತಿ ಕಾರ್ಯಕ್ರಮಗಳನ್ನು ಶ್ರದ್ಧೆಯಿಂದ ಗಮನಿಸಿದರು ಮತ್ತು ಅದರಲ್ಲಿ ಆನಂದಿಸಿದರು ಮತ್ತು ಇಂಟರ್ನೆಟ್ ಆಫ್ ಥಿಂಗ್ಸ್, 3D ಪ್ರಿಂಟಿಂಗ್, ರೊಬೊಟಿಕ್ಸ್ ಕ್ಷೇತ್ರಗಳಲ್ಲಿ ತಮ್ಮನ್ನು ಒಬ್ಬ ಹೊಸ ವಿದ್ಯಾರ್ಥಿಯಾಗಿ ಕಂಡುಕೊಂಡರು. ಅವರು ವಿನ್ಯಾಸ ಚಿಂತನೆ (ಡಿಸೈನ್ ಥಿಂಕಿಂಗ್), ಸಮಸ್ಯೆ ಪರಿಹರಿಸುವಿಕೆಯ ಬಗ್ಗೆ ಎಂದಿಗೂ ಕೇಳಿಸಿಕೊಂಡಿರಲಿಲ್ಲ. ಮತ್ತು ತಮ್ಮ ಜೀವನದ ಈ ಹಂತದಲ್ಲಿ ನವೀನತೆ ಅಥವಾ ಆವಿಷ್ಕಾರವನ್ನು ಕಲಿಯಬಹುದು ಹಾಗೂ ಅನುಭವಿಸಬಹುದು ಎಂದು ಅವರು ಎಂದೂ ನಂಬಿರಲಿಲ್ಲ.

ಆರಂಭದಲ್ಲಿ ಟಿಂಕರಿಂಗ್ ಲ್ಯಾಬ್ಗೆ ಭೇಟಿ ನೀಡುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು ಅವರಿಗೆ ಒಂದು ದೊಡ್ಡ ಸವಾಲಾಗಿತ್ತು. ಸರಕಾರಿ ಶಾಲೆಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಬಡ ಸಾಮಾಜಿಕ–ಆರ್ಥಿಕ ಹಿನ್ನೆಲೆಯಿಂದ ಬಂದವರಾಗಿದ್ದು, ಶಾಲೆಗೆ ಕ್ರಮವಾಗಿ ಹಾಜರಾಗುತ್ತಿರಲಿಲ್ಲ. ತಮ್ಮ ತಮ್ಮ ಕುಟುಂಬಗಳಿಗೋಸ್ಕರ ಜೀವನೋಪಾಯಕ್ಕಾಗಿ ಪಾರ್ಟ್ ಟೈಮ್ ಗುತ್ತಿಗೆಯ ಕೆಲಸಗಳಲ್ಲಿ ತೊಡಗುತ್ತಿದ್ದರು, ಆದುದರಿಂದ ಕೆಲವೊಮ್ಮೆ ಮಾತ್ರ ಶಾಲೆಗೆ ಹಾಜರಾಗುತ್ತಿದ್ದರು. ಬೇರೆ ಶಾಲೆಗಳು, ಕಾಲೇಜುಗಳು ಮತ್ತು ಸಮುದಾಯದ ಅವರ ಜೊತೆ ಶಿಕ್ಷಕರು ಅವರಿಗೆ ತಮ್ಮ ಶಾಲೆಯಲ್ಲಿನ ಟಿಂಕರಿಂಗ್ ಲ್ಯಾಬ್ ಮುನ್ನೆಜ್ಜೆಯನ್ನು ಕೈಬಿಡುವಂತೆ ಸಲಹೆ ನೀಡಿದರು. ಈ ಇನ್ನೋವೇಶನ್ ಕಾರ್ಯಕ್ರಮವು ತಮ್ಮ ಪಾಲಿಗೆ ಸೇರಿದ್ದಲ್ಲ ಮತ್ತು ATL ಅನ್ನು ತಮಗೆ ತಪ್ಪಾಗಿ ನೀಡಲಾಗಿದೆ ಎಂದು ಅವರು ಧನಂಜಯ್ಗೆ ಹೇಳಿದರು. ಆದರೆ ಈ ನಕಾರಾತ್ಮಕ ಮಾತುಗಳೇ ಡಾ. ಧನಂಜಯ್ ಅವರಿಗೆ ಹೆಚ್ಚಿನ ಬಲವನ್ನು ನೀಡುತ್ತವೆ ಎಂದು ಯಾರಿಗೆ ಗೊತ್ತಿತ್ತು. ಬಡ ಸಾಮಾಜಿಕ–ಆರ್ಥಿಕ ಹಿನ್ನೆಲೆಯಿಂದ ಬಂದಿರುವ ಸರಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಒಂದು ಅವಕಾಶವನ್ನು ನೀಡುವಾಗ, ಸರಿಯಾದ ದಿಕ್ಕಿನಲ್ಲಿ ಪ್ರೇರೇಪಿಸಿ ತರಬೇತಿ ನೀಡುವಾಗ, ಅವರು ಸಹ ಭಿನ್ನರಾಗಿ ನಿಲ್ಲಶಕ್ತರು ಎಂದು ತನ್ನ ಸಹೋದ್ಯೋಗಿಗಳಿಗೆ, ಬಿಲಾಸ್ಪುರ್ಗೆ, ಛತ್ತೀಸ್ಗಢ್ಗೆ ಮತ್ತು ಇಡೀ ದೇಶಕ್ಕೆ ಸಾಬೀತುಪಡಿಸಲು ಅವರು ದೃಢ ನಿರ್ಧಾರವನ್ನು ಮಾಡಿದರು.

***"ಟಿಂಕರಿಂಗ್ ಲ್ಯಾಬೇ ನನ್ನ ಜೀವ ಮತ್ತು ಉಸಿರು. ನಾನು ಈ ಲ್ಯಾಬ್ಗೆ ಸೇರಿದವನು ಎಂದು ನನಗನಿಸುತ್ತದೆ, ಮತ್ತು ವಿದ್ಯಾರ್ಥಿಗಳು ಜೀವನದಲ್ಲಿ ಪ್ರವೀಣರಾಗಲು ಅವರನ್ನು ಮಾರ್ಗದರ್ಶಿಸಲಿಕ್ಕಾಗಿಯೇ ನಾನು ಹುಟ್ಟಿದ್ದೇನೆ ಎಂಬುದೇ ನನ್ನ ಅನಿಸಿಕೆ."***

ಇಂದು, 12 ತಿಂಗಳ ಕಾಲಾವಧಿಯಲ್ಲಿ ಅವರು ದೇಶದಲ್ಲೇ ಅತ್ಯಂತ ಆಶಾದಾಯಕ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಡಿಸುವ ATLಳಲ್ಲೇ ಒಂದನ್ನು ಸ್ಥಾಪಿಸಿದ್ದಾರೆ ಮತ್ತು ಇದರ ವಿದ್ಯಾರ್ಥಿಗಳು ಅದ್ಭುತಕರವಾದ ಸಾಮಾಜಿಕ ಆವಿಷ್ಕಾರಗಳನ್ನು ರಚಿಸುತ್ತಿದ್ದಾರೆ ಮತ್ತು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿಷ್ಠಿತ ಪುರಸ್ಕಾರಗಳನ್ನು ಗೆಲ್ಲುತ್ತಿದ್ದಾರೆ.






ಇದರ ಜೊತೆಗೆ ಒಂದು ATL ಅಡ್ವೈಸರಿ ಬಾಡಿ (AAB, ಸಲಹಾ ಮಂಡಳಿ) ಅನ್ನು ರಚಿಸಲಾಗುತ್ತದೆ, ಇದು ATL ಕಾರ್ಯಚಟುವಟಿಕೆಯನ್ನು ಮೇಲ್ವಿಚಾರಣೆ ಮಾಡುತ್ತದೆ ಮತ್ತು AIM-ATL ಮಾರ್ಗದರ್ಶನಗಳೊಂದಿಗೆ ಹೊಂದಿಕೆಯಲ್ಲಿದೆ ಎಂಬುದನ್ನು ಖಚಿತಪಡಿಸುತ್ತದೆ. ಈ ಮಂಡಳಿಗೆ ಶಾಲೆಯ ಪ್ರಿನ್ಸಿಪಾಲರು ಅಧ್ಯಕ್ಷರಾಗಿರುತ್ತಾರೆ ಮತ್ತು ಇದು ಈ ಕೆಳಗಿನ ಹೆಚ್ಚುವರಿ ಸದಸ್ಯರನ್ನು ಸಹ ಒಳಗೊಳ್ಳಬಹುದು: ATL ಇನ್-ಚಾರ್ಜ್ ಮತ್ತು ಇವರು ಸಂಚಾಲಕರಾಗಿರುವರು, ಸ್ಥಳೀಯ ಉದ್ಯಮ/ ಸಮುದಾಯ/ ಯುವ ಪರಿವರ್ತಕರು/ ಪ್ರಖ್ಯಾತ ಶಿಕ್ಷಣ ಸಂಸ್ಥೆ/ ಹಳೆಯ ವಿದ್ಯಾರ್ಥಿಗಳಲ್ಲಿ 2 ಸದಸ್ಯರು ಮತ್ತು ಶಾಲೆಯ ವಿದ್ಯಾರ್ಥಿಗಳ ಪೋಷಕರಿಂದ 2 ಸದಸ್ಯರು. ಶಾಲೆಯಲ್ಲಿ ATLನ ಪ್ರಗತಿಯನ್ನು ಪರಿಶೀಲಿಸಲು, ಅಗತ್ಯವಿರುವಾಗೆಲ್ಲ ಅನುಷ್ಠಾನದ ಯೋಜನೆಯಲ್ಲಿ ಕೋರ್ಸ್ ತಿದ್ದುಪಡಿಯನ್ನು ಮಾಡಲು ಮತ್ತು ಸಂಬಂಧಿತ ಪಾಲುದಾರರನ್ನು ಗುರುತಿಸಲು ಮತ್ತು ಅವರೊಂದಿಗೆ ಪಾಲುದಾರಿಕೆಯನ್ನು ಬೆಳೆಸಲು, ಸಲಹಾ ಮಂಡಳಿಯು ವರ್ಷದಲ್ಲಿ ಮೂರು ಬಾರಿ ಕನಿಷ್ಠ 2–3 ಬಾರಿ ಸಭೆಯಾಗಿ ಕೂಡಬೇಕು ಮತ್ತು ಅಗತ್ಯವಿರುವಾಗೆಲ್ಲ ತಮ್ಮ ಕಾರ್ಯಕ್ಷಮತೆ ವರದಿಯನ್ನು AIMನೊಂದಿಗೆ ಹಂಚಿಕೊಳ್ಳಬೇಕು.

ATL ಇನ್-ಚಾರ್ಜ್ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬುದನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/Dos_and_Donts_for_ATL_incharges.pdf

## 3.3 ಟಿಂಕರಿಂಗ್ನ ನಾಲ್ಕು ಹಂತಗಳ ಮೂಲಕ ಅಟಲ್ ಟಿಂಕರಿಂಗ್ ಲ್ಯಾಬ್ ಅನ್ನು ಶಾಲೆಯ ಪಠ್ಯಕ್ರಮದೊಂದಿಗೆ ಸಂಯೋಜಿಸುವುದು

ATL ಅನ್ನು ಸೆಟ್ ಅಪ್ ಮಾಡಿ ಮಾನವ ಸಂಪನ್ಮೂಲವನ್ನು ಗುರುತಿಸಿದ ನಂತರ, ವಿದ್ಯಾರ್ಥಿಗಳ ಎಂಗೇಜ್ಮೆಂಟಿಗಾಗಿ ಶಾಲೆಯು ವಿಸ್ತಾರವಾದ ಆಕ್ಷನ್ ಪ್ಲಾನ್ ಅನ್ನು ರಚಿಸಬೇಕು. ATL ವೇಳಾಪಟ್ಟಿಯನ್ನು ಮತ್ತು ವಿದ್ಯಾರ್ಥಿಗಳ ದಾಖಲಾತಿ ವಿಧಾನವನ್ನು ರೂಪಿಸುವುದು ಮತ್ತು ವಿದ್ಯಾರ್ಥಿಗಳಿಗೆ ಟಿಂಕರಿಂಗ್ನ ನಾಲ್ಕು ಹಂತಗಳನ್ನು ಅನುಷ್ಠಾನಗೊಳಿಸುವುದು ಇದರಲ್ಲಿ ಒಳಗೂಡಿದೆ.

ATL ನಲ್ಲಿ ಟಿಂಕರ್ ಮಾಡಲು ವಿದ್ಯಾರ್ಥಿಗಳಿಗೆ ಸಾಕಷ್ಟು ಅವಕಾಶ ಸಿಗುತ್ತದೆ ಎಂದು ಖಾತ್ರಿಪಡಿಸಿಕೊಳ್ಳಲು ಶಾಲೆಯ ಪ್ರಿನ್ಸಿಪಾಲ್ ಮತ್ತು ATL ಇನ್-ಚಾರ್ಜ್ ಪೂರ್ವಭಾವಿ ಹೆಜ್ಜೆಗಳನ್ನು ತೆಗೆದುಕೊಳ್ಳಬೇಕು. ಬೇರೆ ಸಬ್ಜೆಕ್ಟ್ ಗಳಿಗೆ ನಿಗದಿಪಡಿಸಲಾದ ಬೋಧನಾ ತಾಸುಗಳನ್ನು ರಾಜಿಮಾಡಿಕೊಳ್ಳದೇ, ನಿಯಮಿತ ಪಠ್ಯಕ್ರಮದಲ್ಲಿ ATL ಸೇರ್ಪಡೆಯ ವ್ಯವಸ್ಥಿತ ಯೋಜನೆಯ ಮೂಲಕ ಇದನ್ನು ಮಾಡಸಾಧ್ಯವಿದೆ. ಒಂದು ATL ವೇಳಾಪಟ್ಟಿಯನ್ನು ತಯಾರಿಸುವುದು ಪ್ರಾಮುಖ್ಯವಾಗಿದೆ, ಇದು 6ನೇ ತರಗತಿಯಿಂದ 12ನೇ ತರಗತಿಯ ವರೆಗಿನ ವಿದ್ಯಾರ್ಥಿಗಳು ಒಂದು ನಿರ್ದಿಷ್ಟ ಟೈಮ್-ಲೈನ್ ಒಳಗೆ ಟಿಂಕರಿಂಗ್ನ ನಾಲ್ಕು ಹಂತಗಳ ಮೂಲಕ ಪ್ರಗತಿಯನ್ನು ಮಾಡಲು ಸಹಾಯ ಮಾಡುತ್ತದೆ. ಟಿಂಕರಿಂಗ್ನ ಈ ನಾಲ್ಕು ಹಂತಗಳನ್ನು AIM ರೂಪಿಸಿದೆ, ಇವು ATLನಲ್ಲಿ ವಿದ್ಯಾರ್ಥಿಗಳ ನವೀನತೆ ಅಥವಾ ಆವಿಷ್ಕಾರದ ಪ್ರಯಾಣದ ಸಮಯದಲ್ಲಿ ಅವರು ಹಾದುಹೋಗಲಿರುವ ವಿಭಿನ್ನ ಮಟ್ಟಗಳು ಅಥವಾ ಹಂತಗಳನ್ನು ವಿವರಿಸುತ್ತವೆ. ಇದು ಒಂದು ಸಮರ್ಥನೀಯ ATL ವಿದ್ಯಾರ್ಥಿ ಎಂಗೇಜ್ಮೆಂಟ್ ಮೆಕಾನಿಸಮ್ ಅನ್ನು ರಚಿಸುತ್ತದೆ ಮಾತ್ರವಲ್ಲ ATL ವಿದ್ಯಾರ್ಥಿಗಳು ತಮ್ಮ ತಂತ್ರಜ್ಞಾನ ಮತ್ತು ನವೀನತೆಯ ಕೌಶಲಗಳ ಸಂಬಂಧದಲ್ಲಿ ಮುನ್ನಡೆಯುವುದನ್ನು ಸಹ ಖಾತ್ರಿಪಡಿಸುತ್ತದೆ.

ಕೆಳಗೆ ಕೊಡಲಾಗಿರುವ ಟೇಬಲ್, ಟಿಂಕರಿಂಗ್ನ ನಾಲ್ಕು ಹಂತಗಳನ್ನು, ಯಾವ ರೀತಿಯ ವಿದ್ಯಾರ್ಥಿಗಳು ದಾಖಲಾಗಬೇಕು ಎಂಬುದನ್ನು ಮತ್ತು ಅವುಗಳ ವೈಯಕ್ತಿಕ ಉದ್ದೇಶಗಳನ್ನು ಮತ್ತು ಟೈಮ್-ಲೈನ್ ಅನ್ನು ವಿವರಿಸುತ್ತದೆ. ಶಾಲೆಯ ಮ್ಯಾನೇಜ್ಮೆಂಟ್ ನೊಂದಿಗೆ ಸಮಾಲೋಚಿಸಿ ಈ ಯೋಜನೆಯನ್ನು ATL ವೇಳಾಪಟ್ಟಿಯ ರೂಪದಲ್ಲಿ ಶಾಲೆಯ ಪಠ್ಯಕ್ರಮದೊಂದಿಗೆ ಸಂಯೋಜಿಸಲಾಗುತ್ತದೆ, ಇದರಿಂದಾಗಿ ವಿದ್ಯಾರ್ಥಿಗಳು ವಿಭಿನ್ನ ಹಂತಗಳ ಮೂಲಕ ಯಶಸ್ವಿಯಾಗಿ ಚಲಿಸಲು ಸಾಕಷ್ಟು ಅವಕಾಶಗಳನ್ನು ಪಡೆದು ವಿದ್ಯಾರ್ಥಿಗಳಿಂದ ಪದವೀಧರರಾಗಿ, ಟಿಂಕರರ್ಸ್ ಆಗಿ, ತಯಾರಕರಾಗಿ ಮತ್ತು ಕಾಲಕ್ರಮೇಣ ಪರಿವರ್ತಕರಾಗಿ ಪರಿಣಮಿಸುತ್ತಾರೆ.

| ಟಿಂಕರಿಂಗ್ ಹಂತ | ದಾಖಲಾಗುವ ವಿದ್ಯಾರ್ಥಿಗಳು | ಉದ್ದೇಶಗಳು | ಸೆಷನ್ ಡಿಸೈನ್ | ಟೈಮ್‌ಲೈನ್ |
|---|---|---|---|---|
| **ಹಂತ 1: ಪ್ರಿ ಟಿಂಕರ್** | 6 ರಿಂದ 12ನೇ ತರಗತಿಯ ಎಲ್ಲ ವಿದ್ಯಾರ್ಥಿಗಳು | ಟಿಂಕರಿಂಗ್, ಪೂರ್ವ–ಕಲ್ಪನೆ, ಐಡಿಯ ಉತ್ಪಾದನೆ ಮತ್ತು ATL ಭೇಟಿಗಳಿಗೆ ಪರಿಚಯ | ಒಂದೊಂದು ತಾಸಿನ ಆರು ಸೆಷನ್ ಗಳು, ಪ್ರತಿ ವಾರ 1–2 ಪೀರಿಯಡ್ ಗಳನ್ನು ನಿಗದಿಪಡಿಸಲಾಗುತ್ತದೆ | ಒಂದು ತಿಂಗಳು |
| **ಹಂತ 2: ಟಿಂಕರ್ ಕ್ಲಬ್** | ಆಸಕ್ತ ವಿದ್ಯಾರ್ಥಿಗಳಿಗೆ ಅವಕಾಶವಿದೆ, ಶಿಕ್ಷಕರು ನಾಮನಿರ್ದೇಶನ ಮಾಡಬಹುದು, ಮಾರ್ಗದರ್ಶಕರ ಬೆಂಬಲವಿರುವ ವಿದ್ಯಾರ್ಥಿಗಳು, ಸಹಕಾರದ ಟೀಮ್ ವರ್ಕ್ | ಡಿಸೈನ್ ಥಿಂಕಿಂಗ್, ಡಿಜಿಟಲ್ ಸಾಕ್ಷರತೆ, ಗಣನಾ ಚಿಂತನೆ ಮತ್ತು ಡು–ಇಟ್–ಯುವರ್ಸೆಲ್ಫ್ ಚಟುವಟಿಕೆಗಳ ಪರಿಚಯ<br>ವಿದ್ಯಾರ್ಥಿಗಳನ್ನು ಟಿಂಕರರ್ಸ್ ಮಾಡಿ | ವಾರಕ್ಕೆ ಒಂದು ಗಂಟೆಯ ಎರಡು ಸೆಷನ್ ಗಳು ಅಥವಾ ವಾರಕ್ಕೆ ಎರಡು ಗಂಟೆಗಳ ಒಂದು ಸೆಷನ್ | ಎರಡು ತಿಂಗಳುಗಳು |
| **ಹಂತ 3: ಟಿಂಕರ್ ಲ್ಯಾಬ್** | ಆಸಕ್ತರಾದ ಮತ್ತು ಆಯ್ಕೆಮಾಡಿದ ವಿದ್ಯಾರ್ಥಿ ಟಿಂಕರರ್ಸ್‌ಗೆ ಅವಕಾಶವಿದೆ, ಶಿಕ್ಷಕರು ನಾಮನಿರ್ದೇಶನ ಮಾಡಬಹುದು, ಮಾರ್ಗದರ್ಶಕರ ಬೆಂಬಲವಿರುವ ವಿದ್ಯಾರ್ಥಿಗಳು, ಸಹಕಾರದ ಟೀಮ್ ವರ್ಕ್ | ಫಿಸಿಕಲ್ ಕಂಪ್ಯೂಟಿಂಗ್ ಮತ್ತು ರಿಯಲ್ ಟೈಮ್ ಪ್ರೋಜೆಕ್ಟ್ ನಿರ್ಮಾಣದ ಪರಿಚಯ, ವಿದ್ಯಾರ್ಥಿಗಳನ್ನು ತಯಾರಕರನ್ನಾಗಿ ಮಾಡುವುದು | ATL ಇನ್–ಚಾರ್ಜ್ ಅವರು ಇದನ್ನು ನಿರ್ಧರಿಸಬಹುದು | ಮೂರು ತಿಂಗಳುಗಳು |
| **ಹಂತ 4: ಪೋಸ್ಟ್ ಟಿಂಕರ್ ಲ್ಯಾಬ್** | ಮಾರ್ಗದರ್ಶಕರ ಮಾರ್ಗದರ್ಶನದಿಂದ ರಿಯಲ್ ಲೈಫ್ ಪ್ರೋಜೆಕ್ಟ್ ಗಳಲ್ಲಿ ಕೆಲಸ ಮಾಡಲು ಆಸಕ್ತರಾಗಿರುವ ಸ್ವಯಂ ಪ್ರೇರಿತ ವಿದ್ಯಾರ್ಥಿಗಳು, ಸಹಕಾರದ ಟೀಮ್ ವರ್ಕ್ | ಪ್ರೇರೇಪಿತ ವಿದ್ಯಾರ್ಥಿಗಳಿಗೆ ನೈಜವಾದ ಜಾಗತಿಕ ಸಮಸ್ಯೆಗಳನ್ನು ಪರಿಹರಿಸುವಂತೆ ಪ್ರೋತ್ಸಾಹಿಸುವುದು, ಎಟಿಎಲ್ ಇನ್–ಚಾರ್ಜ್ ಮತ್ತು ಮಾರ್ಗದರ್ಶಕರು ಗೈಡ್ ಮಾಡಿ, ಪರಿವರ್ತಕರನ್ನಾಗಿ ಮಾಡುತ್ತಾರೆ | ATL ಇನ್–ಚಾರ್ಜ್ ಅವರು ಇದನ್ನು ನಿರ್ಧರಿಸಬಹುದು | ATL ಇನ್–ಚಾರ್ಜ್ ಅವರು ಇದನ್ನು ನಿರ್ಧರಿಸಬಹುದು |

***ಟೇಬಲ್ 1, ATL ಟಿಂಕರಿಂಗ್ ಪ್ಲಾನ್***

### ಕೇಸ್ ಸ್ಟಡಿ: ಶಾಲೆಯ ಪಠ್ಯಕ್ರಮದೊಂದಿಗೆ ATL ಸಂಯೋಜನೆ

### ಶಾಲೆ: BEST ಸ್ಕೂಲ್, ಅಹಮದಾಬಾದ್

### ATL ಇನ್-ಚಾರ್ಜ್: ಶ್ರೀ. ಮಧೀಶ್ ಪಾರಿಖ್

ಹಳೆಯ ವಿದ್ಯಾರ್ಥಿಯಾಗಿದ್ದು ಈಗ ಅಹಮದಾಬಾದಿನ BEST ಸ್ಕೂಲಿನಲ್ಲಿ ಒಬ್ಬ ಶಿಕ್ಷಕನಾಗಿರುವ ಮಧೀಶ್, 2017 ರ ಆರಂಭದಲ್ಲಿ ತನ್ನ ಶಾಲೆಯಲ್ಲಿ ATL ಅನ್ನು ಆರಂಭಿಸಿದಾಗ ಭಾರೀ ಪ್ರಮಾಣದ ಸಾಮರ್ಥ್ಯವನ್ನು ಕಂಡನು. ಆದರೆ ATL ಅನ್ನು ಶಾಲೆಯ ಪಠ್ಯಕ್ರಮ ಮತ್ತು ಕಾರ್ಯಾಚರಣೆಗಳೊಂದಿಗೆ ಸಂಯೋಜಿಸುವುದು ಸವಾಲಾಗಿತ್ತು. ಶಾಲೆಯ ಪಠ್ಯಕ್ರಮದೊಂದಿಗೆ ATL ಒಳ್ಳೇ ರೀತಿಯಲ್ಲಿ ಸಂಯೋಜಿಸಲ್ಪಟ್ಟಿದೆ ಎಂಬುದನ್ನು ಖಾತ್ರಿಪಡಿಸಲು ಮಧೀಶ್ ಶಾಲೆಯ ಮ್ಯಾನೇಜ್ಮೆಂಟ್ಗೆ ಕೆಲವು ಇನ್ನೋವೇಟೀವ್ ಕಾರ್ಯತಂತ್ರಗಳನ್ನು ನೀಡಿ ಬೆಂಬಲಿಸಿದರು ಮತ್ತು ಎಲ್ಲಾ ಶಿಕ್ಷಕರು ಇದನ್ನು ಚೆನ್ನಾಗಿ ಗ್ರಹಿಸಿದರು.

ಮೊದಲನೆಯದಾಗಿ, ನವ ಯುಗದ ಉಪಕರಣಗಳೊಂದಿಗೆ ಶಿಕ್ಷಕರು ಕಂಫರ್ಟಬಲ್ ಆಗಲಿಕ್ಕಾಗಿ ಶಾಲೆಯಲ್ಲಿನ ಶಿಕ್ಷಕರಿಗೆ ATL ಸಂಪನ್ಮೂಲಗಳ ವಿಷಯದಲ್ಲಿ ಮತ್ತು ಅವುಗಳನ್ನು ಗರಿಷ್ಠವಾಗಿ ಸದುಪಯೋಗಿಸುವ ವಿಧಾನಗಳ ಮೂಲಭೂತ ತರಬೇತಿಯನ್ನು ನೀಡಲಾಯಿತು. ಪ್ರತಿಯೊಬ್ಬ ಕ್ಲಾಸ್ ಟೀಚರ್ಗೆ ಝೀರೊ ಪೀರಿಯಡ್ ನಿಂದ ಪ್ರಾರಂಭಿಸಲು ಸಲಹೆ ನೀಡಲಾಯಿತು, ಆಗ ವಿದ್ಯಾರ್ಥಿಗಳನ್ನು ATLಗೆ ಕರೆದುಕೊಂಡು ಹೋಗಿ ಐಡಿಯೇಷನ್ ಚಟುವಟಿಕೆಗಳನ್ನು ನಡೆಸಲಾಯಿತು. ಕ್ರಮೇಣ ಆಸಕ್ತ ವಿದ್ಯಾರ್ಥಿಗಳು ATL ಗಾಗಿ ಸ್ವತಃ ತಾವೇ ನಾಮನಿರ್ದೇಶನವನ್ನು ಪ್ರಾರಂಭಿಸಿದರು.

ಎರಡನೆಯದಾಗಿ, ಶಾಲೆಯ ಟೈಮ್ ಟೇಬಲ್ ನಲ್ಲಿ ATL ಪಿರಿಯಡ್ಗಳನ್ನು ಶೆಡ್ಯೂಲ್ ಮಾಡಲಾಯಿತು ಮತ್ತು ಶಾಲೆಯ ತಾಸುಗಳಿಗೆ ಮುಂಚೆ ಮತ್ತು ನಂತರ ATL ಅನ್ನು ತೆರೆಯಲಾಯಿತು. ಬೆಳಗ್ಗಿನ ಶಿಫ್ಟ್ ವಿದ್ಯಾರ್ಥಿಗಳಿಗಾಗಿ ಟಿಂಕರಿಂಗ್ ಸೆಷನುಗಳನ್ನು ಶಾಲಾ ವೇಳೆಯ ನಂತರ ಶೆಡ್ಯೂಲ್ ಮಾಡುವ ಮೂಲಕ ಹಾಗೂ ನಂತರದ ಶಿಫ್ಟ್ ವಿದ್ಯಾರ್ಥಿಗಳಿಗಾಗಿ ಶಾಲಾ ವೇಳೆಗೆ ಮುಂಚೆ ಶೆಡ್ಯೂಲ್ ಮಾಡುವ ಮೂಲಕ, ATL ಇನ್-ಚಾರ್ಜ್ ಅವರು ಶಾಲೆಯ ಎರಡು ಶಿಫ್ಟ್ ಏರ್ಪಾಡನ್ನು ಸದುಪಯೋಗಪಡಿಸಿಕೊಂಡರು. ಇದು ಒಂದು ಆಶೀರ್ವಾದವಾಗಿ ಪರಿಣಮಿಸಿತು, ಏಕೆಂದರೆ ಈ ಶೆಡ್ಯೂಲ್ ಸಂಪೂರ್ಣ ಶಾಲಾ ಅವಧಿಯ ವರೆಗೆ ATL ತೆರೆದಿರುವಂತೆ ಮತ್ತು ಕಾರ್ಯನಿರ್ವಹಿಸುವಂತೆ ಮಾಡಿತು.

ಮೂರನೆಯದಾಗಿ, ATL ಶೆಡ್ಯೂಲಿಂಗ್, ಕಾರ್ಯಕ್ರಮಗಳು ಮತ್ತು ವರ್ಕ್ ಶಾಪ್ಗಳನ್ನು ನಡೆಸುವುದು, ಶಿಸ್ತನ್ನು ಕಾಪಾಡಿಕೊಳ್ಳುವುದು ಇನ್ನು ಮುಂತಾದ ಜವಾಬ್ದಾರಿಗಳನ್ನು ಒಳಗೊಂಡು ATL ಸಂಬಂಧಿತ ವಿವಿಧ ಜವಾಬ್ದಾರಿಗಳನ್ನು ಬೇರೆ ಬೇರೆ ವಿದ್ಯಾರ್ಥಿ ಹೌಸ್ಗಳು/ಮಂಡಳಿಗಳಿಗೆ ನಿಯೋಜಿಸಲಿಕ್ಕಾಗಿ ATL ಇನ್-ಚಾರ್ಜ್ ಅವರು ಮ್ಯಾನೇಜ್ಮೆಂಟ್ನೊಂದಿಗೆ ಕೆಲಸ ಮಾಡಿದರು.

ಕ್ರಮೇಣ, ATL ವಿದ್ಯಾರ್ಥಿಗಳ ನಡುವೆ "ಇದು ನಿಮ್ಮ ಲ್ಯಾಬ್, ಇದು ನಿಮ್ಮ ಜವಾಬ್ದಾರಿ" ಎಂಬ ಭಾವನೆ ಬೆಳೆದಿದೆ ಮತ್ತು ಈ ಎಲ್ಲ ಸಂಯೋಜಿತ ಪ್ರಯತ್ನಗಳು ನಿಜಕ್ಕೂ ಅದ್ಭುತ ಫಲಿತಾಂಶಗಳನ್ನು ತೋರಿಸಿವೆ.

ಅಟಲ್ ಟಿಂಕರಿಂಗ್ ಮ್ಯಾರಥಾನ್ 2017ರ ಟಾಪ್ 30 ಆವಿಷ್ಕಾರಗಳಿಗೆ ಆಯ್ಕೆಯಾದ ನಂತರ ವಿಮಲ್ ಮತ್ತು ಆದಿತ್ಯ ಎಂಬ ಇಬ್ಬರು ATL ವಿದ್ಯಾರ್ಥಿಗಳು, ಸ್ಮಾರ್ಟ್ ಮೊಬಿಲಿಟಿ ಕುರಿತಾದ ತಮ್ಮ ಐಡಿಯಾಗಳ ಬಗ್ಗೆ ಇನ್ನಷ್ಟು ಕೆಲಸ ಮಾಡಿದ್ದಾರೆ ಮತ್ತು 'ಟಾರ್ಕ್ ಇನ್ನೋವೇಶನ್' ಎಂಬ ತಮ್ಮ ಸ್ವಂತ ಸ್ಟಾರ್ಟ್-ಅಪ್ ಅನ್ನು ಸ್ಥಾಪಿಸಿದ್ದಾರೆ. ಈ ಆವಿಷ್ಕಾರವು ಜಾಗತಿಕ ಗುರುತಿಸುವಿಕೆಯನ್ನು ಆಕರ್ಷಿಸಿತು, ಇದರಿಂದಾಗಿ ಈ ವಿದ್ಯಾರ್ಥಿಗಳನ್ನು ಇಂಡೋ-ಸಿಂಗಾಪುರ್ ಇನ್ನೋವೇಶನ್ ಫೆಸ್ಟಿವಲ್—InSpRENEUR 2018 ಕ್ಕೆ ಆಹ್ವಾನಿಸಲಾಯಿತು. ಅಲ್ಲಿ ಈ ವಿದ್ಯಾರ್ಥಿಗಳು ತಮ್ಮ ಆವಿಷ್ಕಾರವನ್ನು ಸಿಂಗಾಪುರದ ಸನ್ಮಾನ್ಯ ಪ್ರಧಾನ ಮಂತ್ರಿಯವರಾದ ಶ್ರೀ ಲೀ ಹೈನ್ ಲೂಂಗ್ ಮತ್ತು ಭಾರತದ ಸನ್ಮಾನ್ಯ ಪ್ರಧಾನ ಮಂತ್ರಿಯವರಾದ ಶ್ರೀ ನರೇಂದ್ರ ಮೋದಿಯವರಿಗೆ ಪ್ರಸ್ತುತಪಡಿಸಿದರು.





ಮೇಲೆ ತಿಳಿಸಲಾದ ಟಿಂಕರಿಂಗ್ ಹಂತಗಳ ಮೂಲಕ ವಿದ್ಯಾರ್ಥಿಗಳು ಪ್ರಗತಿ ಹೊಂದುತ್ತಾ ಸಾಗಿದಂತೆ, ಬೌದ್ಧಿಕ ಆಸ್ತಿ, ಪ್ರೆಸೆಂಟೇಷನ್ ಕೌಶಲಗಳು ಮತ್ತು ನವೀನತೆ ಅಥವಾ ಆವಿಷ್ಕಾರದ ಮೂಲಕ ಪ್ರಭಾವವನ್ನು ಸೃಷ್ಟಿಸಲು ನಿರ್ಣಾಯಕವಾಗಿರುವ ಇತರ ಸಾಫ್ಟ್ ಸ್ಕಿಲ್ ಪರಿಕಲ್ಪನೆಗಳಿಗೆ ಸಹ ಅವರನ್ನು ಪರಿಚಯಿಸಲಾಗುತ್ತದೆ.

ATL ಗಾಗಿ ಲಭ್ಯವಿರುವ ಎಲ್ಲ ಮಾಡ್ಯೂಲ್ ಗಳ ಒಂದು ವಿವರವಾದ ಪಟ್ಟಿಯನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/ATL_Modules.php

ಒಂದು ಸ್ಯಾಂಪಲ್ ATL ಶೆಡ್ಯೂಲ್ ಅನ್ನು ಕೆಳಗೆ ಕೊಡಲಾಗಿದೆ ಮತ್ತು ATL ಇನ್–ಚಾರ್ಜ್ ಇದನ್ನು ವಿಭಿನ್ನ ತರಗತಿಗಳಿಂದ ಬಂದ ವಿದ್ಯಾರ್ಥಿಗಳನ್ನು ಟಿಂಕರಿಂಗ್ನ ನಾಲ್ಕು ಹಂತಗಳ ಮೂಲಕ ಮಾರ್ಗದರ್ಶಿಸಲು ಉಪಯೋಗಿಸಬಹುದು. ಈ ಶೆಡ್ಯೂಲ್ ನಲ್ಲಿ ಶಿಕ್ಷಕರ ಸೆಷನ್ ಗಳನ್ನು ಸಹ ಒಳಗೂಡಿಸಲಾಗಿದ್ದು, ATLನ ಸಲಕರಣೆಗಳು ಮತ್ತು ಸಮರ್ಥ ನಿರ್ವಹಣೆಯ ವಿಷಯದಲ್ಲಿ ಶಾಲೆಯ ATL ತಂಡಕ್ಕೆ ತರಬೇತಿ ನೀಡಲಿಕ್ಕಾಗಿಯೂ ಇದನ್ನು ಉಪಯೋಗಿಸಬಹುದು. ಸಮುದಾಯದ ಸೆಷನ್–ಗಳು, ATLನ ಉದ್ದೇಶಗಳು ಮತ್ತು ಚಟುವಟಿಕೆಗಳ ಕುರಿತು ಜಾಗೃತಿಯನ್ನು ಮೂಡಿಸಲು ಹೊರಗಿನ ಪಾಲುದಾರರಿಗೆ, ಸಮುದಾಯದ ವಿದ್ಯಾರ್ಥಿಗಳಿಗೆ, ಬೇರೆ ಶಾಲೆಗಳಿಂದ ಬರುವ ಶಿಕ್ಷಕರಿಗೆ ನೀಡಲಾಗುವ ಸೆಷನ್–ಗಳನ್ನು ಸೂಚಿಸುತ್ತವೆ.

| ದಿನ/ಪಿರಿಯಡ್ | 1 | 2 | ವಿರಾಮ | 3 | 4 | 5 |
|---|---|---|---|---|---|---|
| ಸೋಮ | 6ನೇ ತರಗತಿ | | | | 12ನೇ ತರಗತಿ | |
| ಮಂಗ | ಶಿಕ್ಷಕರ ಸೆಷನ್ | | | | 9ನೇ ತರಗತಿ | |
| ಬುಧ | 8ನೇ ತರಗತಿ | | | ಸಮುದಾಯದ ಸೆಷನ್ | | |
| ಗುರು | | | | | 10ನೇ ತರಗತಿ | |
| ಶುಕ್ರ | 7ನೇ ತರಗತಿ | | | | 11ನೇ ತರಗತಿ | |

***ಟೇಬಲ್ 2, ಸ್ಯಾಂಪಲ್ ATL ಶೆಡ್ಯೂಲ್***

ಒಂದು ಸಾಮಾನ್ಯ ಶಾಲಾ ಪಠ್ಯಕ್ರಮದ ಶೆಡ್ಯೂಲ್ ಅನ್ನು ಪರಿಗಣಿಸಿ, ATL ೆಷನ್ ಅನ್ನು ಸೇರಿಸಲು ATL ಇನ್–ಚಾರ್ಜ್ ಅವರು ಈ ಕೆಳಗಿನ ಆಯ್ಕೆಗಳನ್ನು ಅನ್ವೇಷಿಸಬಹುದು.

ಎ. ಶೂನ್ಯ ಪಿರಿಯಡ್ಗಳು: ತಮ್ಮ ಶಾಲೆಯ ATL ನಲ್ಲಿ ಟಿಂಕರಿಂಗಾಗಿ ಮತ್ತು ಇತರ ಪರಿವರ್ತಕರೊಂದಿಗೆ ತೊಡಗಿಸಿಕೊಳ್ಳುವುದಕ್ಕಾಗಿ ತಮ್ಮ ಶೂನ್ಯ ಪಿರಿಯಡ್‌ಗಳನ್ನು ಉಪಯೋಗಿಸುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬಹುದಾಗಿದೆ.

ಬಿ. ಚಟುವಟಿಕೆಯ ಪಿರಿಯಡ್ಗಳು ಅಥವಾ ಎರಡು ಅಡ್ಜೆಸೆಂಟ್ (ಪಕ್ಕದ) ಪಿರಿಯಡ್ಗಳು: ಹೆಚ್ಚಿನ ಶಾಲೆಗಳು ವಿದ್ಯಾರ್ಥಿಗಳಿಗೆ ಚಟುವಟಿಕೆಯ ಪಿರಿಯಡ್ಗಳನ್ನು ಹೊಂದಿರುತ್ತವೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಕೆಲವು ಸಾಮಾಜಿಕ ಅಥವಾ ಗುಂಪು ಆಧಾರಿತ ಚಟುವಟಿಕೆಯಲ್ಲಿ ಒಳಗೂಡುವಂತೆ ನಿರೀಕ್ಷಿಸಲಾಗುತ್ತದೆ. ವಿದ್ಯಾರ್ಥಿಗಳು ಈ ಸಮಯವನ್ನು ಸ್ವತಃ ತಮ್ಮನ್ನು ಗುಂಪುಗಳಾಗಿ ಸಂಘಟಿಸಲು ಮತ್ತು ಸಮಸ್ಯೆಗಳನ್ನು ಗುರುತಿಸಲು ಉಪಯೋಗಿಸಬಹುದು ಮತ್ತು ಕಾಲಕ್ರಮೇಣ ಈ ಸಮಸ್ಯೆಗಳನ್ನು ನವೀನ ಮೂಲರೂಪಗಳ (ಇನ್ನೋವೇಟಿವ್ ಪ್ರೋಟೋಟೈಪ್ಸ್) ಮೂಲಕ ATLನಲ್ಲಿ ಪರಿಹರಿಸಲು ಪ್ರಯತ್ನಿಸಬಹುದು. ATL ಚಟುವಟಿಕೆಗಳು ಹೆಚ್ಚು ಸಮಯವನ್ನು ತೆಗೆದುಕೊಳ್ಳುವ ಸಾಧ್ಯತೆ ಇರುವುದರಿಂದ, ATLಗಾಗಿ ಒಟ್ಟಿಗೆ ಎರಡು ಪಿರಿಯಡ್ಗಳನ್ನು ನಿಯೋಜಿಸುವಂತೆ ಶಾಲೆಯ ಪ್ರಿನ್ಸಿಪಾಲರಿಗೆ ಪ್ರೋತ್ಸಾಹಿಸಲಾಗುತ್ತದೆ. ಇದು ವಿದ್ಯಾರ್ಥಿಗಳಿಗೆ ತಮ್ಮ ಟಿಂಕರಿಂಗ್ ಚಟುವಟಿಕೆಯನ್ನು ಯೋಜಿಸಲು ಸಹ ಸಹಾಯ ಮಾಡಬಹುದು ಮತ್ತು ಒಂದೇ ಸೆಷನ್–ನಲ್ಲಿ ಅದನ್ನು ಪೂರ್ಣಗೊಳಿಸುವಂತೆ ನೋಡಿಕೊಳ್ಳಬಹುದು.

ಸಿ. ಶಾಲೆಯ ತಾಸುಗಳ ನಂತರ ಮತ್ತು ವಾರಾಂತ್ಯಗಳಲ್ಲಿ: ವಿದ್ಯಾರ್ಥಿಗಳು ತಮ್ಮ ಆವಿಷ್ಕಾರಗಳ ಬಗ್ಗೆ ಕಾರ್ಯನಡಿಸಲು ಶಾಲಾ ಅವಧಿಗಳ ನಂತರ ಮತ್ತು ವಾರಾಂತ್ಯಗಳಲ್ಲಿ ಸಹ ATL ನಲ್ಲಿ ಅವರಿಗೆ ಪ್ರವೇಶ ಸಾಧ್ಯತೆ ಇರಬೇಕು. ಅಷ್ಟುಮಾತ್ರವಲ್ಲ, ಸಮುದಾಯದ ಇತರ ವಿದ್ಯಾರ್ಥಿಗಳು ATL ಬಗ್ಗೆ ತಿಳಿದುಕೊಳ್ಳಲು ಇದು ಅವರಿಗೆ ಅವಕಾಶವನ್ನು ನೀಡುತ್ತದೆ.

ATL ಅನ್ನು ಶಾಲೆಯ ಪಠ್ಯಕ್ರಮದೊಂದಿಗೆ ಸಂಯೋಜಿಸುವುದರ ಕುರಿತಾದ ಒಂದು ವಿಡಿಯೋ ಅನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

https://www.youtube.com/watch?v=S4LPWrH1dHA&t

### ಕೇಸ್ ಸ್ಟಡಿ: ATL ವಿದ್ಯಾರ್ಥಿಗಳನ್ನು ಎನ್ರೋಲ್ ಮಾಡುವುದು ಮತ್ತು ಎಂಗೇಜ್ ಮಾಡುವುದು

**ಶಾಲೆ: DPS ಶ್ರೀನಗರ, ಶ್ರೀನಗರ, ಜಮ್ಮು ಮತ್ತು ಕಾಶ್ಮೀರ**

**ATL ಇನ್-ಚಾರ್ಜ್: ಶ್ರೀ. ಎಹ್ಸಾನ್ ಕುಡುಸ್ಸಿ**

ದೆಹಲಿ ಪಬ್ಲಿಕ್ ಸ್ಕೂಲ್ ಶ್ರೀನಗರ್ ನಲ್ಲಿರುವ ATL, ತನ್ನ ಪ್ರತಿಕೂಲ ಸ್ಥಳದ ಕಾರಣದಿಂದಾಗಿ ತನ್ನ ಪಾಲಿನ ತೊಂದರೆಗಳನ್ನು ಕಂಡಿದೆ. ಶಾಲೆಯ ಕಟ್ಟಡದ ಮರುನಿರ್ಮಾಣ ಮತ್ತು ATL ಜಾಗವನ್ನು ನಿರ್ಮಿಸುವುದರೊಂದಿಗೆ ಇದರ ATL ಪ್ರಯಾಣವು ಆರಂಭಗೊಂಡಿತು. ವಾಸ್ತವದಲ್ಲಿ, AIM ಮಾರ್ಗದರ್ಶನಗಳಿಗನುಸಾರ ATL ಸಲಕರಣೆಗಳನ್ನು ಖರೀದಿಸಲು ಸೂಕ್ತವಾದ ಮಾರಾಟಗಾರ/ಸರ್ವಿಸ್ ಪ್ರೊವೈಡರ್ ಅನ್ನು ಶಾಲೆಯು ಕಂಡುಕೊಳ್ಳಲು ಸಾಧ್ಯವಾಗಲಿಲ್ಲ.

ಆವಶ್ಯಕತೆಯು ಹೊಸ ಶೋಧನೆಗೆ ತಾಯಿಯಾಗಿದೆ. ಶಾಲೆಯ ಮೂವರು ವಿದ್ಯಾರ್ಥಿಗಳಾದ ಮುವಾಝುಮ್, ಹೈದರ್ ಮತ್ತು ಅಬ್ರಾರ್ ವಿಷಯಗಳನ್ನು ತಮ್ಮ ಕೈಗೇ ತೆಗೆದುಕೊಳ್ಳಲು ನಿರ್ಧರಿಸಿದರು. ಅವರು ATL ಸಂಪನ್ಮೂಲಗಳನ್ನು ಶ್ರೀ ಎಹ್ಸಾನ್ ರೊಂದಿಗೆ ಅಧ್ಯಯನ ಮಾಡಿದರು ಮತ್ತು ATL ಗೆ ಅಗತ್ಯವಾದ ಎಲ್ಲ ಸಾಮಗ್ರಿಗಳನ್ನು ಸಂಗ್ರಹಿಸಿದರು. ATL ಇನ್-ಚಾರ್ಜ್ ಅವರ ಸಹಾಯದಿಂದ ತಮ್ಮ ಶಾಲೆಯ ATLನಲ್ಲಿ ಎರಡು-ದಿನದ ರಾಜ್ಯ ಮಟ್ಟದ ಆವಿಷ್ಕಾರದ ವರ್ಕ್-ಶಾಪ್ ಅನ್ನು ಅವರು ಪರಿಕಲ್ಪಿಸಿದಾಗ, ಈ ಗಹನವಾದ ವಿಶ್ಲೇಷಣೆಯು ಕ್ರಮೇಣ ಅವರು ಜಮ್ಮು ಮತ್ತು ಕಾಶ್ಮೀರದ ' ATL ತಜ್ಞರು' ಆಗಿ ರೂಪಾಂತರಗೊಳ್ಳಲು ನೆರವಾಯಿತು. ಈ ವಿ ದ್ಯಾರ್ಥಿಗಳು ತಮ್ಮ ಶಾಲೆಗಾಗಿ ಹಲವಾರು ವೆಬ್ಸೈಟ್ಗಳನ್ನು ಸಹ ವಿಕಸಿಸಿದರು ಮತ್ತು ಇವುಗಳಲ್ಲಿ ಒಂದು ' Techknow' ಗೋಸ್ಕರವಾಗಿದ್ದು, ಇದು 2018 ರಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿನ ಶಾಲೆಗಳಿಗಾಗಿ ಆಯೋಜಿಸಲಾದ ಅತಿ ದೊಡ್ಡ ತಾಂತ್ರಿಕ ಕಾರ್ಯಕ್ರಮವಾಗಿತ್ತು. (ಲಿಂಕ್: http://techknow.dpssrinagar.com/ ) ATL ವಿದ್ಯಾರ್ಥಿಗಳಿಂದ ಪ್ರದರ್ಶಿಸಲ್ಪಟ್ಟ ಈ ಮನೋಭಾವವು ನಮ್ಮೆಲ್ಲರಿಗೂ ಸ್ಫೂರ್ತಿಯಾಗಿದೆ ಮತ್ತು ಕಟ್ಟಾಸಕ್ತಿ ಹಾಗೂ ವಚನ ಬದ್ಧತೆಯು ಎಲ್ಲ ಅಡೆತಡೆಗಳನ್ನು ಜಯಿಸಬಲ್ಲದು ಎಂಬುದನ್ನು ಅವರು ಸಾಬೀತುಪಡಿಸಿದರು.





## 3.4 ಹತ್ತಿರದ ಸಮುದಾಯ ಮತ್ತು ಅಟಲ್ ಟಿಂಕರಿಂಗ್ ಲ್ಯಾಬ್ ಭಾಗವಲ್ಲದ ಶಾಲೆಗಳನ್ನು ಒಳಗೂಡಿಸುವುದು

ಆವಿಷ್ಕಾರದ ಸ್ಥಳೀಯ ಕೇಂದ್ರವಾಗಿ ATL ಅನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದರಲ್ಲಿ ಸಮುದಾಯವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ATL ಆವಿಷ್ಕಾರದ ಚಟುವಟಿಕೆಗಳ ಬಗ್ಗೆ ಬೆಂಬಲ ನೀಡುವ ಹಾಗೂ ಜಾಗೃತಿಯನ್ನು ಮೂಡಿಸುವ ಕೆಲಸದಲ್ಲಿ ಸಮುದಾಯದ ಪೋಷಕರು, ವಿದ್ಯಾರ್ಥಿಗಳು, ಸರಕಾರೇತರ ಸಂಸ್ಥೆಗಳು (NGOs), ಸ್ವಯಂಸೇವಕರು ಮತ್ತು ಸರಕಾರಿ ಸಂಸ್ಥೆಗಳು ಗಮನಾರ್ಹ ಕೊಡುಗೆಯನ್ನು ನೀಡಬಹುದು. ಸಂಯೋಜಿತ ಪ್ರಯತ್ನಗಳು ATL ತನ್ನ ನೈಜ ಸಾಮರ್ಥ್ಯವನ್ನು ಹೇಗೆ ತಲಪಬಲ್ಲದು ಎಂಬುದನ್ನು ನಿರ್ಧರಿಸುತ್ತವೆ ಮತ್ತು ಕೆಲವೊಂದು ಸಲಹೆಗಳಲ್ಲಿ ಈ ಕೆಳಗಿನವುಗಳು ಸೇರಿವೆ:

ಎ. **ATL ಶಾಲೆಯ ಹೊರಗಿನ ಪೋಷಕರು ಮತ್ತು ವಿದ್ಯಾರ್ಥಿಗಳಿಗಾಗಿ ಓರಿಯಂಟೇಷನ್ ಸೆಷನ್ಗಳು:** ಓರಿಯಂಟೇಷನ್ ಸೆಷನ್ಗಳನ್ನು ಪೋಷಕರಿಗೂ ವಿಸ್ತರಿಸಬಹುದು, ಏಕೆಂದರೆ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಬೆಂಬಲವನ್ನು ನೀಡುವ ಮೂಲಕ ಅವರ ನವೀನತೆ ಅಥವಾ ಆವಿಷ್ಕಾರ ಮನೋಭಾವವನ್ನು ಬೆಳೆಸುವುದರಲ್ಲಿ ಪೋಷಕರು ಪ್ರಮುಖ ಪಾಲುದಾರರಾಗಿದ್ದಾರೆ. ಅಷ್ಟುಮಾತ್ರವಲ್ಲ, ಸಮುದಾಯದ ವಿದ್ಯಾರ್ಥಿಗಳನ್ನು ಸಹ ಈ ಸೆಷನ್ಗಳಲ್ಲಿ ಒಳಗೂಡಿಸಬಹುದು, ಇದು ಅವರಿಗೆ ಟಿಂಕರಿಂಗ್ ಬಗ್ಗೆ ಜ್ಞಾನವನ್ನು ಮೂಡಿಸುತ್ತದೆ ಮತ್ತು ವಿದ್ಯಾರ್ಥಿ ಸಮುದಾಯದಲ್ಲಿ ATL ವ್ಯಾಪ್ತಿಯನ್ನು ಸಹ ಹೆಚ್ಚಿಸುತ್ತದೆ.

### ಕೇಸ್ ಸ್ಟಡಿ: ATL ಕಮ್ಯೂನಿಟಿ ಎಂಗೇಜ್ಮೆಂಟ್

### ಶಾಲೆ: ಹೊಂಗಿರಣ ಸ್ಕೂಲ್ ಆಫ್ ಎಕ್ಸಲೆನ್ಸ್, ಶಿಮೊಗ, ಶಿವಮೊಗ್ಗ, ಕರ್ನಾಟಕ

### ATL ಇನ್–ಚಾರ್ಜ್: ರೋಹಿತ್ ವಿ.

***"ಪ್ರತಿ ಶಾಲೆಗೂ ಅದರದ್ದೇ ಆದ ಸವಾಲುಗಳಿವೆ ಮತ್ತು ಗರಿಷ್ಠ ಪರಿಣಾಮವನ್ನು ಉಂಟುಮಾಡಲು ನಾವು ಅವುಗಳೊಂದಿಗೆ ಯಶಸ್ವಿಕರವಾಗಿ ವ್ಯವಹರಿಸಬೇಕು" ಎಂದು ATL ಇನ್–ಚಾರ್ಜ್ ಆಗಿರುವ ರೋಹಿತ್ ವಿ. ಹೇಳುತ್ತಾರೆ.***

ATL ಅನ್ನು ಸ್ಥಾಪಿಸಲು ಆಯ್ಕೆಯಾದ ಮೊದಲ ಶಾಲೆಗಳಲ್ಲಿ ಒಂದಾದ ಹೊಂಗಿರಣ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯು, ಕರ್ನಾಟಕದ ಶಿವಮೊಗ್ಗದಲ್ಲಿ ಮತ್ತು ಹತ್ತಿರದ ಜಿಲ್ಲೆಗಳಲ್ಲಿ ಅಗಾಧ ಪ್ರಭಾವವನ್ನು ಉಂಟುಮಾಡಿದೆ.

ಶಾಲೆಯಿಂದ ಆರಂಭಿಸಲಾದ 'ಟಿಂಕರ್ ಟೂರ್' ಎಂಬ ವಿಶಿಷ್ಟ ಕಾನ್ಸೆಪ್ಟ್, ಟಿಂಕರಿಂಗ್ ಅನ್ನು ಪ್ರತಿಯೊಂದು ಶಾಲೆಗೂ ತಲಪಿಸಲು ವಿದ್ಯಾರ್ಥಿಗಳು ಮಾಡಿದ ಮೂಲಭೂತ ಪ್ರಯತ್ನವಾಗಿದೆ. 'ಪ್ರತಿ ವಿದ್ಯಾರ್ಥಿಯನ್ನು ಟಿಂಕರ್ ಹಾಗೂ ಇನ್ನೋವೇಟ್ ಮಾಡಲು ಶಕ್ತರನ್ನಾಗಿಸುವ' ಪ್ರಯತ್ನದಲ್ಲಿ, ATL ಶಿಕ್ಷಕರು ಮತ್ತು 11 ಹಾಗೂ 12ನೇ ತರಗತಿಯ ವಿದ್ಯಾರ್ಥಿ–ತಜ್ಞರು ಸೇರಿ ಎರಡು ದಿನಗಳ ಟೂರ್ ಅನ್ನು ನಡೆಸಲಾಯಿತು. ಇದಕ್ಕಾಗಿ ಬಳಸಲಾದ 'ಟಿಂಕರ್ ಟೂರ್' ಬಸ್ಸಿನಲ್ಲಿ ವಿದ್ಯಾರ್ಥಿಗಳಿಗಾಗಿ ಐಡಿಯೇಷನ್ ಮತ್ತು ಟಿಂಕರಿಂಗ್ ವರ್ಕ್–ಶಾಪ್ ಸಾಮಗ್ರಿಗಳನ್ನು ಸಜ್ಜುಗೊಳಿಸಲಾಗಿತ್ತು, ಇದು ಪ್ರಯಾಣದಲ್ಲಿದ್ದಾಗ ವಿದ್ಯಾರ್ಥಿಗಳು ತಮ್ಮ ಪ್ರೋಟೋಟೈಪ್ಸ್ (ಮೂಲಮಾದರಿಗಳು) ಗಳಲ್ಲಿ ಕೆಲಸ ಮಾಡಲಿಕ್ಕಾಗಿತ್ತು. ಆ ಪ್ರಾಂತದ ಐದು ಗ್ರಾಮೀಣ ಸರಕಾರಿ ಶಾಲೆಗಳಲ್ಲಿ ಎರಡು ತಾಸುಗಳ ಸೆಷನ್ನಲ್ಲಿ ಟೂರನ್ನು ನಡೆಸಲಾಯಿತು, ಈ ಸಮಯದಲ್ಲಿ ಶಾಲೆಗಳ ವಿದ್ಯಾರ್ಥಿಗಳನ್ನು ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಟಿಂಕರಿಂಗ್ ಹಾಗೂ ಆವಿಷ್ಕಾರದ ಪರಿಕಲ್ಪನೆಗೆ ಪರಿಚಯಿಸಲಾಯಿತು.

ಶಾಲೆಯ ATL 'ವಿಜಯೋತ್ಸವ 2018' ಅನ್ನು ಸಹ ಏರ್ಪಡಿಸಿತು–ಇದು ಬೃಹತ್ ಟಿಂಕರ್ ಸಮಾರಂಭವಾಗಿದ್ದು, 2018ರ ಡಿಸೆಂಬರ್ 1 ರಂದು ATL ನಲ್ಲಿ ಏಕಕಾಲದಲ್ಲೇ ಹತ್ತು ವಿಭಿನ್ನ ವರ್ಕ್–ಶಾಪ್ಗಳು ಮತ್ತು ಕಾರ್ಯಕ್ರಮಗಳನ್ನು ನಡೆಸಲಾಯಿತು. ಬೇರೆ ಬೇರೆ ಸಮುದಾಯಗಳ 25 ವಿವಿಧ ಶಾಲೆಗಳಿಂದ ಐವತ್ತೈದು ಮಂದಿ ಶಿಕ್ಷಕರು ಒಟ್ಟುಗೂಡಿ ಈ ಕಾರ್ಯಕ್ರಮವನ್ನು ಭಾರೀ ಯಶಸ್ವಿದಾಯಕವಾಗಿ ಮಾಡಿದರು. ಪ್ರತಿಯೊಂದು ವರ್ಕ್–ಶಾಪ್ನಲ್ಲಿ, 3D ಪ್ರಿಂಟಿಂಗ್, ರೋಬೋಟಿಕ್ಸ್, ಡ್ರೋನ್ಸ್ ಇನ್ನು ಮುಂತಾದ ವಿಷಯಗಳ ಬಗ್ಗೆ ಸೆಷನ್ಗಳನ್ನು ನಡೆಸಲು ತಜ್ಞರನ್ನು ಆಹ್ವಾನಿಸಲಾಗಿತ್ತು. ಸ್ಫೂರ್ತಿದಾಯಕ ಕಥೆಗಳನ್ನು ಹಂಚಿಕೊಳ್ಳಲು, ಪ್ರಾರಂಭಿಕ ಉದ್ಯಮಿಗಳನ್ನು ಹಾಗೂ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳ ವಿಜ್ಞಾನಿಗಳನ್ನು ಸಹ ಆಮಂತ್ರಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಒಟ್ಟು 1300 ಕ್ಕಿಂತ ಹೆಚ್ಚು ಮಂದಿ ಹಾಜರಾಗಿದ್ದರು.

ಹೊಂಗಿರಣ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯಲ್ಲಿರುವ ATL, ಸತತವಾಗಿ ಮುಂದುವರಿಯುತ್ತಿರುವ ಸವಾಲುಗಳ ಮಧ್ಯೆಯೂ ಸಮುದಾಯದಲ್ಲಿ ನವೀನತೆಯ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸುವ ತನ್ನ ಪ್ರಯತ್ನಗಳಲ್ಲಿ ಗಮನಾರ್ಹ ಪ್ರಖ್ಯಾತಿಯನ್ನು ಪಡೆದಿದೆ ಮತ್ತು ATL ಇನ್–ಚಾರ್ಜ್ ಅವರು ಈ ಸವಾಲುಗಳನ್ನು ಜಯಿಸುವ ದೃಢನಿರ್ಧಾರವನ್ನು ಮಾಡಿರುವಂತೆ ತೋರುತ್ತದೆ.





ಬಿ. ಸ್ಥಳೀಯ NGOಗಳು, ಸಮುದಾಯ ಕೇಂದ್ರಗಳು, ಸ್ವಯಂಸೇವಕರ ಸಹಯೋಗದಿಂದ ವಿಸ್ತೃತ ಸಮುದಾಯವನ್ನು ತಲಪುವ ಪ್ರಯತ್ನ: ATL ಇನ್–ಚಾರ್ಜ್ ಅವರು ಸ್ಥಳೀಯ NGOಗಳು ಮತ್ತು ಇತರ ಬೆಂಬಲದಾಯಕ ಗುಂಪುಗಳ ಸಹಯೋಗದಿಂದ ATL ಸಂದೇಶವನ್ನು ಸಮುದಾಯದಲ್ಲಿ ಇನ್ನಷ್ಟು ವಿಸ್ತಾರವಾಗಿ ಹಬ್ಬಿಸಲು ಪ್ರಯತ್ನಿಸಬಹುದು. ಇದು ಜಾಗೃತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಮಾತ್ರವಲ್ಲ ಸಮುದಾಯದಿಂದ ಹೆಚ್ಚಿನ ವಿದ್ಯಾರ್ಥಿಗಳನ್ನು ATL ಚಟುವಟಿಕೆಗಳಲ್ಲಿ ಒಳಗೂಡುವಂತೆ ಸಹ ಮಾಡುತ್ತದೆ.

### ಕೇಸ್ ಸ್ಟಡಿ: ATL ವಿದ್ಯಾರ್ಥಿಗಳನ್ನು ಎನ್ರೋಲ್ ಮಾಡುವುದು ಮತ್ತು ಎಂಗೇಜ್ ಮಾಡುವುದು

### ಶಾಲೆ: ಆಂಧ್ರ ಪ್ರದೇಶ್ ರೂರಲ್ ವೆಲ್ಫೇರ್ ಸೊಸೈಟಿ ಗರ್ಲ್ಸ್ ಸ್ಕೂಲ್, ವಿಜಯವಾಡ ಜಿಲ್ಲೆ, ಆಂಧ್ರ ಪ್ರದೇಶ

### ATL ಇನ್–ಚಾರ್ಜ್: ಯು. ವಿನಯ್ ಬಾಬು ಉಲ್ಲಿ

ಆಂಧ್ರ ಪ್ರದೇಶದ ಅತಿ ಸಮೀಪದ ಪಟ್ಟಣದಿಂದ 60 ಕಿಲೋಮೀಟರ್ ದೂರದಲ್ಲಿರುವ ಒಂದು ಗ್ರಾಮೀಣ ಶಾಲೆಯಲ್ಲಿ 2017 ನೇ ಇಸವಿಯಲ್ಲಿ ATL ಅನ್ನು ಸ್ಥಾಪಿಸಲು ಆಯ್ಕೆಯಾದಾಗ ಅದರ ಸಂತೋಷಕ್ಕೆ ಮಿತಿಯೇ ಇರಲಿಲ್ಲ.

ಆಂಧ್ರ ಪ್ರದೇಶ್ ರೂರಲ್ ವೆಲ್ಫೇರ್ ಸೊಸೈಟಿ ಗರ್ಲ್ಸ್ ಸ್ಕೂಲಿನ ವಿದ್ಯಾರ್ಥಿಗಳು ATL ಸ್ಥಾಪನೆಗೆ ಮೊದಲು ಒಂದು ಕಂಪ್ಯೂಟರನ್ನು ನೋಡಿರಲಿಲ್ಲ. ವಿದ್ಯಾರ್ಥಿಗಳು ಹೊರಗಿನ ಪ್ರಪಂಚದೊಂದಿಗೆ ತಮ್ಮ ಆಲೋಚನೆಗಳನ್ನು ಸಂವಾದಿಸಲು ತುಂಬ ಹಿಂಜರಿಯುತ್ತಿದ್ದರು. ಈ ವಿದ್ಯಾರ್ಥಿಗಳು ತಮ್ಮ ಐಡಿಯಾಗಳನ್ನು ಧೈರ್ಯವಾಗಿ ವ್ಯಕ್ತಪಡಿಸಲು ಮತ್ತು ಹಂಚಿಕೊಳ್ಳಲು ಶಕ್ತರಾಗುವಂತೆ ಪ್ರಚೋದಿಸಲು ಶಾಲೆಯು 'ಐಡಿಯಾಬಾಕ್ಸ್' ಅನ್ನು ರಚಿಸಿತು.

ಈ 'ಐಡಿಯಾಬಾಕ್ಸ್'ನಲ್ಲಿ ವಿದ್ಯಾರ್ಥಿಗಳು ಯಾವುದೇ ಭಯ ಅಥವಾ ಹಿಂಜರಿಕೆಯಿಲ್ಲದೆ ತಮ್ಮ ಐಡಿಯಾಗಳನ್ನು ನೀಡಬಹುದಿತ್ತು ಮತ್ತು ಅದೇ ಸಮಯದಲ್ಲಿ ವಿದ್ಯಾರ್ಥಿಗಳಿಗೆ 'ಅನಾಮಧೇಯತೆಯ' ಅವಕಾಶವನ್ನೂ ಒದಗಿಸುತ್ತಾ, ಅವರು ಐಡಿಯಾಗಳನ್ನು ಬರೆಯುವ ಮತ್ತು ಹಂಚಿಕೊಳ್ಳುವ ಸ್ವಾತಂತ್ರ್ಯವನ್ನು ನೀಡಿತು. ಚಿಟ್ಟೆ ಪರಿಣಾಮದಂತೆಯೇ, ಐಡಿಯಾಬಾಕ್ಸಿನ ಬಳಕೆಯು ಅಗಾಧವಾದ ರೀತಿಯಲ್ಲಿ ಬೆಳೆಯಿತು. ಐಡಿಯಾಬಾಕ್ಸ್ ಅನ್ನು ಒಂದು ತಿಂಗಳ ಬಳಿಕ ತೆರೆದು, ಟಾಪ್ 10 ಐಡಿಯಾಗಳನ್ನು ಬೆಳಗ್ಗಿನ ಅಸೆಂಬ್ಲಿಯಲ್ಲಿ ಘೋಷಿಸಲಾಯಿತು. ಕೈಗಳ ಪ್ರದರ್ಶನದ ಮೂಲಕ ಈ ಐಡಿಯಾಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಂತೆ ವಿದ್ಯಾರ್ಥಿಗಳಿಗೆ ಹೇಳಲಾಯಿತು ಮತ್ತು ಪ್ರತಿಯೊಂದು ಕೈ ಮೇಲೆತ್ತಿದಾಗೆಲ್ಲ ಆ ಹತ್ತು ವಿದ್ಯಾರ್ಥಿಗಳ ಆತ್ಮವಿಶ್ವಾಸವು ಇನ್ನಷ್ಟು ಬಲಗೊಳ್ಳುತ್ತಾ ಹೋಯಿತು. ತದನಂತರ ಅವರ ಹೆಸರುಗಳನ್ನು ಪ್ರಕಟಿಸಲಾಯಿತು ಮತ್ತು ಇದು ಅವರ ಸ್ವ-ನಂಬಿಕೆಗೆ ಮಹತ್ತರ ಉತ್ತೇಜನವನ್ನು ನೀಡಿತು.

ಆಯ್ಕೆಯಾದ ಟಾಪ್ 10 ಐಡಿಯಾಗಳು ಅಥವಾ ವಿಚಾರಗಳಲ್ಲಿ ಸ್ಥಳೀಯ ಸಮುದಾಯ ಸಮಸ್ಯೆಗಳನ್ನು ಆರಿಸಿಕೊಂಡು, ಮೂಲಮಾದರಿಗಳನ್ನು ರಚಿಸುವ ಮೂಲಕ ಹಾಗೂ ಆನ್–ಗ್ರೌಂಡ್ ಟೆಸ್ಟಿಂಗ್ ಮೂಲಕ ಒಂದೊಂದಾಗಿ ಪರಿಹರಿಸಲಾಯಿತು. ಇಸವಿ 2018ರ ಆರಂಭದಲ್ಲಿ ಹೈದರಾಬಾದಿನಲ್ಲಿ ಮೇಕರ್ ಫೇರ್ ನಲ್ಲಿ ತಮ್ಮ ಐಡಿಯಾಗಳನ್ನು ಪ್ರಸ್ತುತಪಡಿಸುವ ಅವಕಾಶ ಈ ವಿದ್ಯಾರ್ಥಿಗಳಿಗೆ ಸಿಕ್ಕಿತು ಮತ್ತು ಇದು 2018ರಲ್ಲಿ ಅಮೇರಿಕದ ಕ್ಯಾಲಿಫೋರ್ನಿಯಾದ ಬೇ ಏರಿಯಾದಲ್ಲಿನ ವರ್ಲ್ಡ್ ಮೇಕರ್ ಫೇರ್‌ಗೆ ವಿಶೇಷ ಆಮಂತ್ರಣಕ್ಕೆ ರೂಪಾಂತರಗೊಂಡಿತು— ಅಮೇರಿಕವನ್ನು ಒಬ್ಬ ನಿರ್ಮಾತನಿಗೆ 'ಮೆಕ್ಕಾ' ಆಗಿ (ಮೆಕ್ಕಾ ಫಾರ್ ಎ ಮೇಕರ್) ಪರಿಗಣಿಸಲ್ಪಡುತ್ತದೆ!

***"ಭಾರತದ ಗ್ರಾಮೀಣ ಶಾಲೆಯ 10 ಮಂದಿ ವಿದ್ಯಾರ್ಥಿಗಳು ಮೇಕಿಂಗ್ ಮತ್ತು ಟಿಂಕರಿಂಗ್ ಸಂಸ್ಕೃತಿಯನ್ನು ಆಚರಿಸಲಿಕ್ಕಾಗಿ ಅತಿ ದೊಡ್ಡ ಅಂತರರಾಷ್ಟ್ರೀಯ ಸಮಾರಂಭಕ್ಕೆ ಆಮಂತ್ರಿಸಲ್ಪಟ್ಟರು" ಇದು ಸ್ಫೂರ್ತಿದಾಯಕ ಕಥೆಯಾಗಿದೆ ಅಲ್ಲವೆ?***

☺






ಸಿ. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಲು ಸ್ಥಳೀಯ ಸರಕಾರಿ ಸಂಸ್ಥೆಗಳಿಂದ ನೆರವನ್ನು ಪಡೆಯುವುದು: ಸಮುದಾಯದಲ್ಲಿ ಸಾಬೀತಾದ ಆವಿಷ್ಕಾರದ ಸಾಮರ್ಥವಿರುವ ಮತ್ತು ATL ಚಟುವಟಿಕೆಗಳಲ್ಲಿ ಒಳಗೂಡಸಾಧ್ಯವಿರುವಂಥ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಲು ಸ್ಥಳೀಯ ಸರಕಾರಿ ಸಂಸ್ಥೆಗಳು ATL ಶಾಲೆಗೆ ಸಹಾಯ ಮಾಡಬಲ್ಲವು. ಸಮುದಾಯದಿಂದ ಬಂದ ಇಂಥ ವಿದ್ಯಾರ್ಥಿಗಳಿಗೆ ಹಾಗೂ ಇತರ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಒಂದು ವಿಶೇಷ ವೇಳಾಪಟ್ಟಿಯನ್ನು ಸಹ ವಿನ್ಯಾಸಗೊಳಿಸಬಹುದು.

## 3.5 AIM, NITI ಆಯೋಗ್ ವೆಬ್ಸೈಟ್‌ನಿಂದ ವಿಷಯ ಮತ್ತು ಸಂಪನ್ಮೂಲಗಳನ್ನು ಸದುಪಯೋಗಿಸಿಕೊಳ್ಳುವುದು

NITI ಆಯೋಗ್ ಅಡಿಯಲ್ಲಿ AIM ತನ್ನ ವೆಬ್ಸೈಟ್ ನಲ್ಲಿ ವಿಷಯ ಮತ್ತು ಸಂಪನ್ಮೂಲಗಳ ಸಮೃದ್ಧ ಭಂಡಾರವನ್ನೇ ಒದಗಿಸುತ್ತದೆ, ಇದರಿಂದ ATL ಶಾಲೆಗಳು ಸಾಕಷ್ಟನ್ನು ಕಲಿಯಸಾಧ್ಯವಿದೆ ಮತ್ತು ಈ ಮುನ್ನೆಚ್ಚೆಯನ್ನು ಯಶಸ್ವಿಕರವಾಗಿ ಕಾರ್ಯಗತಗೊಳಿಸಸಾಧ್ಯವಿದೆ. ಇದರಲ್ಲಿ AIM ಮಾರ್ಗದರ್ಶನಗಳ ಪ್ರಕಾರ ATL ಇನ್-ಚಾರ್ಜ್ ATL ಚಟುವಟಿಕೆಗಳನ್ನು ನಡೆಸಲು ಗಮನಾರ್ಹವಾಗಿರುವ ವಿಡಿಯೋಗಳು, ಡಾಕ್ಯುಮೆಂಟುಗಳು ಹಾಗೂ ಇತರ ಕೈಯಾಸರೆ (ಹ್ಯಾಂಡ್ ಹೋಲ್ಡಿಂಗ್) ವಿಷಯಗಳು ಒಳಗೊಂಡಿವೆ. ಆನ್ಲೈನ್ ಸಂಪನ್ಮೂಲಗಳು ಮಾಹಿತಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ATLಗೆ ಸಂಬಂಧಿಸಿದ ಮಾಹಿತಿಯನ್ನು ಸಂಕ್ಷಿಪ್ತ ರೀತಿಯಲ್ಲಿ ಒದಗಿಸುತ್ತವೆ ಮಾತ್ರವಲ್ಲ, ಇವುಗಳನ್ನು ಅರ್ಥಮಾಡಿಕೊಳ್ಳುವುದು ಸುಲಭವಾಗಿದೆ ಮತ್ತು ಲ್ಯಾಬ್ಗಳ ಸ್ಥಾಪನೆಗೆ ಸಂಬಂಧಿಸಿದ ಅಧಿಕಾಂಶ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯಲು ATLಗೆ ಸಹಾಯ ಮಾಡುವ ಉದ್ದೇಶದಿಂದ ಇವುಗಳನ್ನು ವಿನ್ಯಾಸಗೊಳಿಸಲಾಗಿದೆ. ಈ ATL ಶಾಲೆಗಳು ಭಾರತದ ಉದ್ದಗಲಕ್ಕೂ ಹರಡಿಕೊಂಡಿರುವುದರಿಂದ, ಎಲ್ಲ ATL ಸಂಬಂಧಿತ ವಿಷಯಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಮತ್ತು ಇತರ ಅಧಿಕೃತ/ಸ್ಥಳೀಯ ಭಾಷೆಗಳಲ್ಲಿ ಅತ್ಯಧಿಕ ವ್ಯಾಪ್ತಿಗಾಗಿ ಮತ್ತು ಹೆಚ್ಚಿನ ಜಾಗೃತಿಗಾಗಿ ಪ್ರಕಟಿಸಬೇಕಾಗಿದೆ.

## 3.6 ಅಟಲ್ ಟಿಂಕರಿಂಗ್ ಲ್ಯಾಬ್ ಅನ್ನು ವ್ಯವಸ್ಥಾಪಿಸುವುದು

ATL ಸುಗಮವಾಗಿ ಕಾರ್ಯನಿರ್ವಹಿಸಬೇಕಾದರೆ ಸರಿಯಾದ ಆಡಳಿತ ಮತ್ತು ಮ್ಯಾನೇಜ್ಮೆಂಟ್ ಅತ್ಯಗತ್ಯವಾಗಿದೆ. ಇನ್ವೆಂಟರಿ ಹಾಗೂ ಮಾಹಿತಿ ನಿರ್ವಹಣೆಯ ಸಂಬಂಧದಲ್ಲಿ ಶಾಲೆಗಳಿಗಾಗಿ AIM ಮಾರ್ಗದರ್ಶನಗಳನ್ನು ಸ್ಥಾಪಿಸಿದ್ದು, ಅವುಗಳನ್ನು ಈ ಕೆಳಗೆ ಇನ್ನಷ್ಟು ವಿವರವಾಗಿ ತಿಳಿಸಲಾಗಿದೆ.

### 3.6.1 ಇನ್ವೆಂಟರಿ ಮ್ಯಾನೇಜ್ಮೆಂಟ್

ATLನ ತಡೆರಹಿತ ಕಾರ್ಯಾಚರಣೆಯನ್ನು ಖಾತ್ರಿಪಡಿಸುವ ಒಂದು ಗಮನಾರ್ಹ ಅಂಶವು, ಉಪಕರಣಗಳು ಮತ್ತು ಸಾಮಗ್ರಿಗಳು, ಕಂಟೆಂಟ್, ಪೀಠೋಪಕರಣಗಳು ಇನ್ನು ಮುಂತಾದ ವಸ್ತುಗಳ ಲೆಕ್ಕಾಚಾರ ಇಡುವುದು ಅಥವಾ ಅವುಗಳ ಮೇಲೆ ನಿಗಾ ಇಟ್ಟಿರುವುದೇ ಆಗಿದೆ. ಸಲಕರಣೆಗಳು/ ಉಪಭೋಗ್ಯ ವಸ್ತುಗಳ ಜನರಲ್ ಇನ್ವೆಂಟರಿ ಮತ್ತು ಸೆಕ್ಯುರಿಟಿಯ ಜವಾಬ್ದಾರಿ ATL ಇನ್-ಚಾರ್ಜ್ ಅವರದ್ದಾಗಿರುತ್ತದೆ. ಹಾನಿಯ ಸಾಧ್ಯತೆಗಳನ್ನು ಕಡಿಮೆಗೊಳಿಸಲು ಸಲಕರಣೆಗಳನ್ನು ಎಚ್ಚರಿಕೆಯಿಂದ ನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಲು ವಿದ್ಯಾರ್ಥಿಗಳ ಮೇಲ್ವಿಚಾರಣೆ ಮಾಡುವ ಕೆಲಸವೂ ಇವರಿಗೆ ನಿರ್ವಹಿಸಲಾಗಿರುತ್ತದೆ.

ATLನ ವ್ಯವಸ್ಥಿತವಾದ ಇನ್ವೆಂಟರಿ ಮ್ಯಾನೇಜ್ಮೆಂಟ್ ಖಚಿತಪಡಿಸಿಕೊಳ್ಳಲು ಈ ಕೆಳಗಿನ ಚಟುವಟಿಕೆಗಳನ್ನು ಪ್ರಸ್ತಾಪಿಸಲಾಗಿದೆ:

ಎ. **ಒಂದು ಇನ್ವೆಂಟರಿ ಡಾಕ್ಯುಮೆಂಟನ್ನು ನಿರ್ವಹಿಸುವುದು** – ಲ್ಯಾಬ್ ನಲ್ಲಿರುವ ಎಲ್ಲ ಸಲಕರಣೆಗಳ ಒಂದು ಪಟ್ಟಿಯನ್ನು ಪೇಪರ್ ನಲ್ಲಿ ಮತ್ತು ಆನ್ಲೈನ್ ಮೋಡ್ನಲ್ಲಿ ನಿರ್ವಹಿಸಬೇಕಾಗಿದೆ.

ಬಿ. **ಸಲಕರಣೆಗಳ ಎಲ್ಲ ಸರಬರಾಜು ಮತ್ತು ಬಳಕೆಯ ದಾಖಲೆಗಳನ್ನು ನಿರ್ವಹಿಸುವುದು** – ಬಳಕೆಯಾದ ಸಾಮಗ್ರಿಗಳು, ಸರಬರಾಜು ಮತ್ತು ಬಳಕೆಯಲ್ಲಿಲ್ಲದ ಸ್ಟಾಕಿನ ಸವಿವರವಾದ ದಾಖಲೆಗಳನ್ನು ನಿರ್ವಹಿಸಬೇಕು ಮತ್ತು ಕ್ರಮವಾಗಿ ATL ಇನ್-ಚಾರ್ಜ್ ಅವರ ಸಹಿಯೊಂದಿಗೆ ಪ್ರಿನ್ಸಿಪಾಲ್/ ವೈಸ್-ಪ್ರಿನ್ಸಿಪಾಲ್ ಅವರ ಸಮ್ಮತಿಯ ಸಹಿಯೂ ಅದರಲ್ಲಿರಬೇಕು. ಸುರಕ್ಷತೆ. ಮರುಭರ್ತಿ ಮತ್ತು ಹೆಚ್ಚುವರಿ ಹಳೆಯ ಸ್ಟಾಕ್-ಗಾಗಿ ಮೀಸಲಾಗಿರುವ ಫಾರ್ಮುಗಳು/ ಟೆಂಪ್ಲೇಟುಗಳನ್ನು ಸಹ ನಿರ್ವಹಿಸಬೇಕು.

ಸಿ. **ಆರ್ಡರ್ ಮಾಡಬೇಕಾದ ಸ್ಟಾಕ್‌ಗಳ ಆವರ್ತನವನ್ನು ನಿರ್ಧರಿಸುವುದು** – ಕನಿಷ್ಠ ಸ್ಟಾಕ್ ಮಟ್ಟವನ್ನು ಇರಿಸುವಂತೆ ಶಿಫಾರಸ್ಸು ಮಾಡಲಾಗಿದೆ, ಇದರಿಂದಾಗಿ ಸಪ್ಲೈಗಳನ್ನು ಸಾಕಷ್ಟು ಮುಂಚಿತವಾಗಿಯೇ ಆರ್ಡರ್ ಮಾಡಲು ಸಾಧ್ಯವಾಗುತ್ತದೆ.

ಡಿ. **ಖರೀದಿಸುವ ಫಾರ್ಮಾಲಿಟಿಗಳು** – ಸ್ಟಾಕ್ ಸಂಪೂರ್ಣವಾಗಿ ಖಾಲಿಯಾಗುವ ಮುಂಚೆ, ATL ಇನ್-ಚಾರ್ಜ್ ಅವರು ಖರೀದಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು ಮತ್ತು AABಗೆ ಅನುಮೋದನೆಯ ವಿನಂತಿಯನ್ನು ಸಲ್ಲಿಸಬೇಕು.

ಇ. **ಬಿಲ್ಲುಗಳು/ ವೆಚ್ಚಗಳ ದಾಖಲೆಯನ್ನು ನಿರ್ವಹಿಸುವುದು** – ATL ಆಡಿಟ್ ನಡೆಸಲ್ಪಡುವಾಗ, ಆಡಿಟ್ ಅನ್ನು ಸುಲಭಗೊಳಿಸಲಿಕ್ಕಾಗಿ ಬಿಲ್ಲುಗಳ ಪೂರ್ಣ ದಾಖಲೆಯೊಂದಿಗೆ, ಫಿಕ್ಸ್ಡ್ ಹಾಗೂ ವೇರಿಯಬಲ್ (ಸ್ಥಿರ ಮತ್ತು ಅಸ್ಥಿರ) ಖರ್ಚುವೆಚ್ಚಗಳನ್ನು ಪರಿಗಣಿಸಿ ATL ಬಜೆಟ್ ಅನ್ನು ನಿರ್ವಹಿಸಬೇಕು.

ಎಫ್. **ಲ್ಯಾಬಿನ ಸುರಕ್ಷತೆ ಮತ್ತು ಭದ್ರತೆಯನ್ನು ಕಾಪಾಡಿಕೊಳ್ಳುವುದು** – ATL ನಲ್ಲಿ ಕೆಲಸ ನಿರ್ವಹಿಸುತ್ತಿರುವಾಗ ಸುರಕ್ಷತೆ ಮತ್ತು ಭದ್ರತೆ ಬಹಳ ಪ್ರಾಮುಖ್ಯ, ಮತ್ತು ಸುರಕ್ಷಿತ ಕೆಲಸದ ಸ್ಥಿತಿಗತಿಗಳನ್ನು ಖಚಿತಪಡಿಸಿಕೊಳ್ಳಲು ಶಾಲಾ ಮ್ಯಾನೇಜ್ಮೆಂಟ್ ಎಲ್ಲ ಸೂಕ್ತ ಮಾರ್ಗದರ್ಶನಗಳನ್ನು ಅಳವಡಿಸಿಕೊಳ್ಳಬೇಕು.

### 3.6.2 ಮಾಹಿತಿ ನಿರ್ವಹಣೆ

ಲ್ಯಾಬ್ ನಲ್ಲಿ ನಡೆಯುವ ಎಲ್ಲ ಚಟುವಟಿಕೆಗಳನ್ನು ಸರಿಯಾಗಿ ರೆಕಾರ್ಡ್ ಮಾಡಬೇಕು, ಡಾಕ್ಯುಮೆಂಟ್ ಮಾಡಬೇಕು ಮತ್ತು ಈ ಮುನ್ನೆಜ್ಜೆಯ ಯಶಸ್ಸನ್ನು ಖಚಿತಪಡಿಸಿಕೊಳ್ಳಲು ಸಂಬಂಧಿತ ಪಾಲುದಾರರೊಂದಿಗೆ ಸಂಬಂಧಿತ ಮಾಹಿತಿಯನ್ನು ಹಂಚಿಕೊಳ್ಳಬೇಕು.

**ಎ. ಆಂತರಿಕ ಉದ್ದೇಶಗಳು / ಪ್ರೇಕ್ಷಕರೊಂದಿಗೆ ಮಾಹಿತಿ ಹಂಚಿಕೆ**

ATL ಆಂತರಿಕ ಪ್ರೇಕ್ಷಕರಲ್ಲಿ ವಿದ್ಯಾರ್ಥಿಗಳು, ಹೆತ್ತವರು/ ಪೋಷಕರು, ಶಿಕ್ಷಕರು, ಬೋರ್ಡ್ ಆಫ್ ಟ್ರಸ್ಟಿಗಳು ಮತ್ತು ಶಾಲೆಯ ಮ್ಯಾನೇಜ್ಮೆಂಟ್ ಒಳಗೂಡಿದೆ. ಅಗತ್ಯವಿರುವ ಎಲ್ಲ ಮಾಹಿತಿಯನ್ನು ಅವರಿಗೆ ತಿಳಿಯಪಡಿಸುವುದು ಅತ್ಯಾವಶ್ಯಕವಾಗಿದೆ, ಏಕೆಂದರೆ ಅವರು ನಿರ್ಣಯ ಮಾಡುವ ಸ್ಥಾನಗಳನ್ನು ಹೊಂದಿರಬಹುದು ಮತ್ತು ಲ್ಯಾಬುಗಳ ಸುಗಮ ಕಾರ್ಯಾಚರಣೆಗೆ ಅಗತ್ಯವಾದ ಬೆಂಬಲವನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿರಬಹುದು.

**ಬಿ. ಬಾಹ್ಯ ಉದ್ದೇಶಗಳು / ಪ್ರೇಕ್ಷಕರೊಂದಿಗೆ ಮಾಹಿತಿ ಹಂಚಿಕೆ**

ATL ಬಾಹ್ಯ ಪ್ರೇಕ್ಷಕರಲ್ಲಿ AIM ತಂಡ, ATL ಮ್ಯಾನೇಜ್ಮೆಂಟ್, ATL ಸೌಕರ್ಯಗಳನ್ನು ಬಳಸುತ್ತಿರುವ ಸಮುದಾಯ ಶಾಲೆಗಳು, ಇತರ ATL ಶಾಲೆಗಳು, ತಯಾರಕ ಸಮುದಾಯ ಮತ್ತು ಸಂಭವನೀಯ ಸಹಭಾಗಗಳು / ಪಾಲುದಾರರು ಇನ್ನು ಮುಂತಾದವರು ಒಳಗೂಡಿದ್ದಾರೆ. ಈ ಪ್ರೇಕ್ಷಕರ ಬೆಂಬಲಕ್ಕಾಗಿ ಅಗತ್ಯವಿರುವಾಗೆಲ್ಲ ಮಾಹಿತಿಯನ್ನು ಇವರಿಗೆ ಪ್ರಸಾರಮಾಡಬೇಕು.

ATL ಅನ್ನು ನಿರ್ವಹಿಸುವುದರ ಕುರಿತಾದ ಒಂದು ವಿಡಿಯೋ ಅನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

https://www.youtube.com/watch?v=K4qkCe6TAjo

## ಸಾರಾಂಶ

ಈ ಅಧ್ಯಾಯವು ಶಾಲೆಯ ಮ್ಯಾನೇಜ್ಮೆಂಟ್ ನೊಂದಿಗೆ ಸೇರಿಕೊಂಡು ATL–ಇನ್–ಚಾರ್ಜ್ ಅವರು ATL ನಲ್ಲಿ ಟಿಂಕರಿಂಗ್ ಮುನ್ನೆಜ್ಜೆಯನ್ನು ಹೇಗೆ ನಡೆಸಿಕೊಂಡು ಹೋಗುತ್ತಾರೆ ಮತ್ತು ಅದೇ ಸಮಯದಲ್ಲಿ ATLನ ವ್ಯವಸ್ಥಿತ ನಿರ್ವಹಣೆಯ ವಿವಿಧ ಅಂಶಗಳ ಮೇಲೆ ಹೇಗೆ ಗಮನವನ್ನು ಕೇಂದ್ರೀಕರಿಸುತ್ತಾರೆ ಎಂಬುದನ್ನು ಎತ್ತಿತೋರಿಸಿತು.

ನಾಲ್ಕನೇ ಅಧ್ಯಯವು ವಿದ್ಯಾರ್ಥಿಗಳ ನಡುವೆ ನವೀನತೆ ಅಥವಾ ಆವಿಷ್ಕಾರವನ್ನು ಬೆಳೆಸಲು ATL ಆಯೋಜಿಸಬಹುದಾದ ವಿವಿಧ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ವಿವರಿಸುತ್ತದೆ.

CHAPTER 4

# ಹುರುಪಿನ ಅಟಲ್ ಟಿಂಕರಿಂಗ್ ಲ್ಯಾಬ್ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವುದು

ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ATL ಟಿಂಕರಿಂಗ್ ಚಟುವಟಿಕೆಗಳನ್ನು ಸಂಘಟಿಸುವುದು ಮತ್ತು ಅವುಗಳಲ್ಲಿ ಭಾಗವಹಿಸುವುದು ತುಂಬ ಪ್ರಾಮುಖ್ಯವಾಗಿದೆ. ಈ ಚಟುವಟಿಕೆಗಳು ATL ವಿದ್ಯಾರ್ಥಿಗಳಿಗೆ ತಮ್ಮ ಆವಿಷ್ಕಾರಗಳನ್ನು ಟಿಂಕರ್ ಮಾಡಲು ಮತ್ತು ಪ್ರದರ್ಶಿಸಲು ಅವಕಾಶ ಮಾಡಿಕೊಡುತ್ತವೆ ಮಾತ್ರವಲ್ಲ ಸಮುದಾಯದಲ್ಲಿ ಜಾಗೃತಿ ಮೂಡಿಸಲು ಸಹ ಸಹಾಯ ಮಾಡುತ್ತವೆ, ಅದೇ ಸಮಯದಲ್ಲಿ ATL ಅಲ್ಲದ ಶಾಲೆಗಳಿಂದ ಬರುವ ಹೆತ್ತವರು ಮತ್ತು ಇತರ ವಿದ್ಯಾರ್ಥಿಗಳೊಂದಿಗೆ ಇದರಲ್ಲಿ ಒಳಗೂಡುವಾಗ, ಇದು ATL ಅನ್ನು ಆವಿಷ್ಕಾರದ ಒಂದು ಸಮುದಾಯ ಕೇಂದ್ರವಾಗಿ ಮಾಡುತ್ತದೆ[8]. ಇಂಥ ಶಾಲೆಯೊಳಗಿನ ಟಿಂಕರಿಂಗ್ ಮತ್ತು ಆವಿಷ್ಕಾರದ ಚಟುವಟಿಕೆಗಳಿಂದ ಸೃಷ್ಟಿಯಾದ ಅನುಕೂಲಕರ ವಾತಾವರಣವು, ವಿದ್ಯಾರ್ಥಿಗಳು ಹೊರಗೆ ಹೋಗಿ ಬಾಹ್ಯ ವೇದಿಕೆಗಳಲ್ಲಿ ತಮ್ಮ ಆವಿಷ್ಕಾರಗಳನ್ನು ಪ್ರತಿಪಾದಿಸಲು ಸಹ ಅವರನ್ನು ಸಿದ್ಧಪಡಿಸುತ್ತದೆ. ಇದು ಅವರ ಕೆಲಸಕ್ಕೆ ಅರ್ಹವಾಗಿರುವ ಮಾನ್ಯತೆಯನ್ನು ಸಹ ಅವರಿಗೆ ತಂದುಕೊಡುತ್ತದೆ. ಈ ಅಧ್ಯಾಯದಲ್ಲಿ, AIM ನಿಂದ ಪರಿಕಲ್ಪನೆ ಮಾಡಲಾದ ಮತ್ತು ATL ಶಾಲೆಗಳಿಂದ ಏರ್ಪಡಿಸಲ್ಪಟ್ಟ ಕೆಲವೊಂದು ರಾಷ್ಟ್ರವ್ಯಾಪಿ ಘಟನೆಗಳು ಮತ್ತು ATL ಶಾಲೆಗಳೊಂದಿಗೆ ನಿರಂತರವಾಗಿ ಸಂವಾದ ಮಾಡುವ ಕಾರ್ಯತಂತ್ರದ ಕುರಿತು ಚರ್ಚಿಸಲಾಗಿದೆ. ಆದರೆ ಈ ಪರಿಕಲ್ಪನೆಗಳು ಕೇವಲ ಸೂಚಕ ರೂಪದವುಗಳಾಗಿವೆ ಮತ್ತು ಕಾರ್ಯಕ್ರಮದ ಯಶಸ್ವಿಕರ ಅನುಷ್ಠಾನಕ್ಕಾಗಿ ಶಾಲೆಗಳು ಇಂಥ ಅನೇಕ ಮುನ್ನೆಜ್ಜೆಗಳನ್ನು ಪರಿಕಲ್ಪಿಸಿ ಅವುಗಳನ್ನು ಅಳವಡಿಸಿಕೊಳ್ಳಬಹುದು. ಅಷ್ಟುಮಾತ್ರವಲ್ಲ, ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಸಾರ್ವಜನಿಕ ಪ್ರಚಾರಕ್ಕಾಗಿ ಸಾಕಷ್ಟು ಪ್ರಯತ್ನಗಳನ್ನು ಮಾಡುವಾಗ, ಶಾಲೆಗಳು ವಿಭಿನ್ನ ಪರಿಕಲ್ಪನೆಗಳನ್ನು ವ್ಯಕ್ತಿಗತವಾಗಿ ಮಾರ್ಪಡಿಸಲು ಮತ್ತು ಚಟುವಟಿಕೆಗಳನ್ನು ಸಂಘಟಿಸಲು ಸ್ವಾತಂತ್ರ್ಯವನ್ನು ಹೊಂದಿರಬೇಕು.

## 4.1 ಅಟಲ್ ಟಿಂಕರಿಂಗ್ ಲ್ಯಾಬ್ ಕಮ್ಯುನಿಟಿ ಡೇ

ATL ಕಮ್ಯುನಿಟಿ ಡೇ ಎಂಬುದು ವಿಶೇಷ ಸಮಾರಂಭವಾಗಿದ್ದು, ಸಮುದಾಯದಿಂದ ಬಂದ ಯುವ ಮನಸ್ಸುಗಳು ಒಟ್ಟುಗೂಡಿ ಟಿಂಕರಿಂಗ್, ಕಲಿಕೆ ಮತ್ತು ನವೀನತೆ ಅಥವಾ ಆವಿಷ್ಕಾರವನ್ನು ಆಚರಿಸುತ್ತಾರೆ. ನವೀನತೆಯ ಮೂಲಕ ಸಮುದಾಯದಲ್ಲಿ ಅಂತರ್ಗತತೆಯನ್ನು ಆಚರಿಸುವಂಥ ಒಂದು ದಿನ ಇದಾಗಿದ್ದು, ಪ್ರತಿಯೊಬ್ಬರೂ ಒಟ್ಟುಗೂಡಿ ATL ಮೂಲಸೌಕರ್ಯವನ್ನು ಉಪಯೋಗಿಸಿ ಸಮಸ್ಯೆಗಳನ್ನು ಬಗೆಹರಿಸುವ ಅವಕಾಶವಿರುತ್ತದೆ.

ದೇಶದಾದ್ಯಂತ ಏಪ್ರಿಲ್ 14 ರಂದು ಅಂಬೇಡ್ಕರ್ ಜಯಂತಿಯ ಸಂದರ್ಭದಲ್ಲಿ ಇದನ್ನು ಆಚರಿಸಲಾಗುತ್ತದೆ. ATL-ಅಲ್ಲದ ಮತ್ತು ಸಮುದಾಯದ ಮಕ್ಕಳಿಗಾಗಿ—ವಿಶೇಷವಾಗಿ ATL ಬಗ್ಗೆ ಅರಿವು ಮೂಡಿಸದಿರುವಂಥ ಮತ್ತು / ಅಥವಾ ಈ ಲ್ಯಾಬ್ಗಳಲ್ಲಿ ಟಿಂಕರ್ ಮಾಡಲು ಇಷ್ಟರ ತನಕ ಅವಕಾಶ ಸಿಕ್ಕಿಲ್ಲದಿರುವಂಥ ಮಕ್ಕಳಿಗಾಗಿ—ATL ಶಾಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಇಡೀ ದಿನದ ಟಿಂಕರಿಂಗ್ ಚಟುವಟಿಕೆಗಳನ್ನು ಏರ್ಪಡಿಸುತ್ತಾರೆ.

**380 ಕ್ಕಿಂತ ಹೆಚ್ಚು ಂಖಿಐ ಶಾಲೆಗಳು, 45,000 ATL ವಿದ್ಯಾರ್ಥಿಗಳು ಮತ್ತು 3600 ಕ್ಕಿಂತಲೂ ಹೆಚ್ಚು ಸಮುದಾಯ ಮಕ್ಕಳನ್ನು ಒಳಗೂಡಿಸುವ ಮೂಲಕ ಮತ್ತು ಅವರು ತಮ್ಮ ಸೃಜನಾತ್ಮಕ / ನವೀನ ಐಡಿಯಾಗಳನ್ನು ತಮ್ಮ ಶಿಕ್ಷಕರು, ಮಾರ್ಗದರ್ಶಕರು ಮತ್ತು ಜೊತೆಗಾರರೊಂದಿಗೆ ಸಹ ಹಂಚಿಕೊಳ್ಳುವಂತೆ ಪ್ರೋತ್ಸಾಹಿಸುವ ಮೂಲಕ, NITI ಆಯೋಗ್ ಅಡಿಯಲ್ಲಿ AIM ಬಾಬಾಸಾಹೆಬ್ ಅವರ ಪರಂಪರೆಯನ್ನು ಉನ್ನತಿಗೇರಿಸಿದಾಗ ಇಸವಿ 2018ರ ಕಮ್ಯುನಿಟಿ ಡೇ ಭಾರೀ ಯಶಸ್ಸನ್ನು ಕಂಡಿತು. ATL–ಅಲ್ಲದ ವಿದ್ಯಾರ್ಥಿಗಳನ್ನು/ ಸಮುದಾಯದ ಮಕ್ಕಳನ್ನು ಒಟ್ಟುಗೂಡಿಸಲು NGO ಗಳ ಸಹಾಯವನ್ನು ಪಡೆಯಲಾಗಿತ್ತು. ಈ ಮಕ್ಕಳಿಗೆ ಟಿಂಕರಿಂಗ್ ಮತ್ತು ನವೀನತೆ ಅಥವಾ ಆವಿಷ್ಕಾರದ ಜಗತ್ತನ್ನು ಪರಿಚಯಿಸಲು, ATL ಇನ್–ಚಾರ್ಜ್/ ತರಬೇತಿ ಪಡೆದ ಶಿಕ್ಷಕರು / ATL ಮಾರ್ಗದರ್ಶಕರು ಮತ್ತು ವಿದ್ಯಾರ್ಥಿಗಳಿಂದ ದಿನವಿಡೀ ಅನೇಕ ಸೆಷನ್ಗಳನ್ನು ನಡೆಸಿದರು. ಭಾಗವಹಿಸುತ್ತಿದ್ದ ವಿದ್ಯಾರ್ಥಿಗಳಿಗೆ ಉತ್ಸಾಹ ತುಂಬಿದಂಥ ಕೆಲವು ಚಟುವಟಿಕೆಗಳು ಯಾವುವೆಂದರೆ, ಪೇಪರ್ ಸರ್ಕ್ಯೂಟ್–ಗಳು, ಅಪ್ಸೈಕ್ಲಿಂಗ್ ಚಟುವಟಿಕೆ, ನ್ಯೂಸ್–ಪೇಪರ್ ಬ್ರಿಡ್ಜ್ ಚಟುವಟಿಕೆ ಇನ್ನು ಮುಂತಾದವುಗಳು. ಈ ಸಮಾರಂಭವನ್ನು ಏರ್ಪಡಿಸಲು ATL ಸಹಾಯ ಧನದಿಂದ 5,000 ರೂಪಾಯಿಗಳನ್ನು ಬಳಸಿಕೊಳ್ಳುವಂತೆ ಶಾಲೆಗಳಿಗೆ ಅನುಮತಿ ನೀಡಲಾಗಿತ್ತು.**

[8] ಅಟಲ್ ಟಿಂಕರಿಂಗ್ ಲ್ಯಾಬ್ (ATL): ಶಾಲೆಯಲ್ಲಿ ಆವಿಷ್ಕಾರವನ್ನು ಅನುಭವಿಸುವ ಒಂದು ಅವಕಾಶ. NITI ಆಯೋಗ್. 2018

## 4.2 ಅಟಲ್ ಟಿಂಕರಿಂಗ್ ಲ್ಯಾಬ್ ಸ್ಕೂಲ್ ಆಫ್ ದ ಮಂತ್ ಚಾಲೆಂಜ್

AIM ಆಯೋಜಿಸಿದ ಇತ್ತೀಚಿನ ಸ್ಕೂಲ್ ಆಫ್ ದ ಮಂತ್ (SOM) ಚಾಲೆಂಜಿನ ಮುಖ್ಯ ವಿಷಯವು 3D ಪ್ರಿಂಟಿಂಗ್ ಆಗಿತ್ತು ಮತ್ತು ವಿದ್ಯಾರ್ಥಿಗಳು ತಮ್ಮ ಶಾಲೆಯ ATLನಲ್ಲಿರುವ 3D ಪ್ರಿಂಟಿಂಗ್ ಸೌಕರ್ಯವನ್ನು ಚೆನ್ನಾಗಿ ಸದುಪಯೋಗಿಸಿಕೊಂಡು, AIM ನಿಂದ ಪ್ರಸ್ತಾಪಿಸಲಾದ ಕೇಂದ್ರಿತ ಪ್ರದೇಶಗಳಲ್ಲೊಂದರಲ್ಲಿ ಆವಿಷ್ಕಾರವನ್ನು ಮಾಡುವಂತೆ ಅಗತ್ಯಪಡಿಸಿತು. ವಿಜೇತ ಶಾಲೆಗಳು ತಮ್ಮ ಅತ್ಯುತ್ತಮ ಆವಿಷ್ಕಾರಗಳಿಗಾಗಿ ಮನ್ನಣೆಯನ್ನು ಪಡೆದವು ಮತ್ತು ವಿದ್ಯಾರ್ಥಿಗಳಿಗೆ AIM ಪಾಲುದಾರರು—Stratasys ಮತ್ತು KPIT–ಪ್ರಾಯೋಜಿಸಿದ ಬಹುಮಾನಗಳನ್ನು ನೀಡಿ ಸನ್ಮಾನಿಸಲಾಯಿತು. AIMನಿಂದ ಒದಗಿಸಲಾದ ವಿವಿಧ ಸಂಪನ್ಮೂಲಗಳು ಮತ್ತು ಮಾಡ್ಯೂಲ್ ಗಳನ್ನು ಉಪಯೋಗಿಸಿ, ಮುಖ್ಯ ವಿಷಯ ಆಧಾರಿತ ಸಮಸ್ಯೆ ಹೇಳಿಕೆಗಳಿಗೆ ನವೀನ ಪರಿಹಾರಗಳನ್ನು ಪ್ರಸ್ತಾಪಿಸಲು ATL ಶಾಲೆಗಳಿಗೆ ATL SOM ಚಾಲೆಂಜ್ ಒಂದು ಅವಕಾಶವಾಗಿದೆ. ಈ ಚಾಲೆಂಜ್ 'ಮಾಡುವ ಮೂಲಕ ಕಲಿಯುವ' ಫಿಲಾಸಫಿಯನ್ನು ಅನುಸರಿಸುತ್ತದೆ ಮತ್ತು ಸ್ಪರ್ಧಾತ್ಮಕ ಮನೋಭಾವವು ಅವುಗಳಲ್ಲಿ ಪ್ರತಿಯೊಂದರಿಂದಲೂ ಅತ್ಯುತ್ತಮವಾದುದನ್ನು ಹೊರಸೆಳೆಯಲು ಸಹಾಯ ಮಾಡುತ್ತದೆ. ಇದು ATL ಶಾಲೆಗಳು ಪರಸ್ಪರ ನೇರವಾಗಿ ಸ್ಪರ್ಧಿಗಿಳಿಯುವಂಥ ಒಂದು ಸ್ಪರ್ಧೆಯಾಗಿದ್ದು, ಚಾಲೆಂಜಿನ ಮುಖ್ಯ ವಿಷಯವನ್ನು ಬಳಸಿಕೊಂಡು ಅತ್ಯುತ್ತಮ ಆವಿಷ್ಕಾರದ ಮೂಲಮಾದರಿಯನ್ನು ರಚಿಸುವುದೇ ಇದರ ಗುರಿಯಾಗಿದೆ. ಈ ಚಾಲೆಂಜನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಶಾಲೆಗಳನ್ನು ಅಧಿಕೃತ AIM ವೆಬ್ಸೈಟಿನಲ್ಲಿ ಮತ್ತು ಸೋಷಿಯಲ್ ಮೀಡಿಯಾ ಹ್ಯಾಂಡಲ್ಸ್–ನಲ್ಲಿ ಸನ್ಮಾನಿಸಲಾಗುತ್ತದೆ ಮತ್ತು ಪ್ರದರ್ಶಿಸಲಾಗುತ್ತದೆ. SOM ವಿಜೇತರು AIMನ ಪಾಲುದಾರ ಸಂಸ್ಥೆಗಳಿಂದಲೂ ಉತ್ತೇಜಕ ಬಹುಮಾನಗಳಿಗೆ ಅರ್ಹರಾಗುತ್ತಾರೆ.

**AIMನಿಂದ ಆಯೋಜಿಸಲಾದ ಇತ್ತೀಚಿನ SOM ಚಾಲೆಂಜಿನ ಮುಖ್ಯ ವಿಷಯವು 3D ಪ್ರಿಂಟಿಂಗ್ ಆಗಿತ್ತು ಮತ್ತು ವಿದ್ಯಾರ್ಥಿಗಳು ತಮ್ಮ ಶಾಲೆಯ ATLನಲ್ಲಿರುವ 3D ಪ್ರಿಂಟಿಂಗ್ ಸೌಕರ್ಯವನ್ನು ಚೆನ್ನಾಗಿ ಸದುಪಯೋಗಿಸಿಕೊಂಡು, AIM ನಿಂದ ಪ್ರಸ್ತಾಪಿಸಲಾದ ಕೇಂದ್ರಿತ ಪ್ರದೇಶಗಳಲ್ಲೊಂದರಲ್ಲಿ ಆವಿಷ್ಕಾರವನ್ನು ಮಾಡುವಂತೆ ಅಗತ್ಯಪಡಿಸಿತು. ವಿಜೇತ ಶಾಲೆಗಳು ತಮ್ಮ ಅತ್ಯುತ್ತಮ ಆವಿಷ್ಕಾರಗಳಿಗಾಗಿ ಮನ್ನಣೆಯನ್ನು ಪಡೆದವು ಮತ್ತು ವಿದ್ಯಾರ್ಥಿಗಳಿಗೆ AIM ಪಾಲುದಾರರು—Stratasys ಮತ್ತು KPIT—ಪ್ರಾಯೋಜಿಸಿದ ಬಹುಮಾನಗಳನ್ನು ನೀಡಿ ಸನ್ಮಾನಿಸಲಾಯಿತು.**

## 4.3 ಅಟಲ್ ಟಿಂಕರಿಂಗ್ ಲ್ಯಾಬ್ ಟಿಂಕರಿಂಗ್ ಫೆಸ್ಟಿವಲ್

ಶಾಲೆಗಳಲ್ಲಿ ಟಿಂಕರಿಂಗ್ ಇದೀಗ ರಾಷ್ಟ್ರಾದ್ಯಂತ ನಡೆಯುವ ಚಳುವಳಿಯಾಗುತ್ತಿದೆ ಮತ್ತು ಅಟಲ್ ಟಿಂಕರಿಂಗ್ ಫೆಸ್ಟಿವಲ್ (ಉತ್ಸವ) ಮಕ್ಕಳು ತಮ್ಮ ಬೇಸಿಗೆ ರಜೆಯ ಸಮಯದಲ್ಲಿ ತಮ್ಮೊಳಗಿರುವ ಉದ್ಯಮ ಕೌಶಲಗಳನ್ನು ಹೊರತರಲು ಅವಕಾಶ ನೀಡುತ್ತದೆ. ಈ ಬೇಸಿಗೆ ರಜೆಯಲ್ಲಿ ತಮ್ಮ ಬೇಸರವನ್ನು ಬದಿಗೊತ್ತಿ, ಮನೆಯಲ್ಲಿರುವಾಗಲೂ ತಾವು ಒಬ್ಬ ವಿದ್ಯಾರ್ಥಿ–ಉದ್ಯಮಿ ಅಥವಾ ಒಬ್ಬ ವಿದ್ಯಾರ್ಥಿ–ನಿರ್ಮಾತ ಆಗಸಾಧ್ಯವಿದೆ ಎಂಬುದನ್ನು ತಮ್ಮ ಕುಟುಂಬಕ್ಕೆ ಮತ್ತು ಪ್ರಪಂಚಕ್ಕೆ ಸಾಬೀತು ಪಡಿಸುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಗಿದೆ. ಈ ಫೆಸ್ಟಿವಲ್ ಸಮಯದಲ್ಲಿ ಉದ್ಯಮಶೀಲತೆ, ಸೃಜನಶೀಲತೆ ಮತ್ತು ಆವಿಷ್ಕಾರವನ್ನು ಬೆಳೆಸುವಂಥ ವಿವಿಧ ರೀತಿಯ ವ್ಯಾಪಕ ಕೌಶಲಗಳನ್ನು ಬೋಧಿಸಲಾಗುತ್ತದೆ ಮತ್ತು ಇದು ATL ವಿದ್ಯಾರ್ಥಿಗಳಿಗೆ ಶ್ರೇಷ್ಠತೆಗಾಗಿರುವ ಅವರ ಅನ್ವೇಷಣೆಯಲ್ಲಿ ಪ್ರಯೋಜನ ತರುತ್ತದೆ.

ATL ಟಿಂಕರಿಂಗ್ ಫೆಸ್ಟಿವಲ್ ಅನ್ನು ಆಯೋಜಿಸಲಿಕ್ಕಾಗಿರುವ ವಿವರಗಳನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/ATL_Tinkering_Festival.pdf

**NITI ಆಯೋಗ್ ಅಡಿಯಲ್ಲಿ AIMನಿಂದ ಆಯೋಜಿಸಲಾದ ATL ಟಿಂಕರಿಂಗ್ ಫೆಸ್ಟಿವಲ್, ದೇಶದಾದ್ಯಂತ ಇರುವ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾಗುವ ಚಟುವಟಿಕೆಗಳ ಒಂದು ಸರಣಿಯಾಗಿದ್ದು, 48 ತಾಸುಗಳ ಟಿಂಕರ್ ಫೆಸ್ಟ್ ನಲ್ಲಿ ಅಂತಿಮ ಪ್ರದರ್ಶನದ ಸಮಯದಲ್ಲಿ ತಮ್ಮ ಸೃಜನಶೀಲತೆಯನ್ನು ಅವರು ಪ್ರದರ್ಶಿಸಬಹುದು. ಈ ಟಿಂಕರಿಂಗ್ ಫೆಸ್ಟಿವಲ್ ಅನ್ನು 2 ಹಂತಗಳಲ್ಲಿ ನಡೆಸಲಾಗುತ್ತದೆ. ಹಂತ 1– ಮನೆಯಲ್ಲಿ ಅಥವಾ ATLನ ಹೊರಗೆ ವಿದ್ಯಾರ್ಥಿ ಪರಿಶೋಧನೆ ಮತ್ತು ಹಂತ 2– ATLನಲ್ಲಿ 48 ತಾಸುಗಳ ಟಿಂಕರ್ ಫೆಸ್ಟ್. ಭಾರತದಾದ್ಯಂತ ಆಯ್ಕೆ ಮಾಡಲಾದ ಎಲ್ಲ ATL ಶಾಲೆಗಳು ಟಿಂಕರ್ ಫೆಸ್ಟ್ ನಡೆಸುವಂತೆ ಅಗತ್ಯಪಡಿಸಲಾಗುತ್ತದೆ.**

## 4.4 ಅಟಲ್ ಟಿಂಕರಿಂಗ್ ಲ್ಯಾಬ್ ಟಿಂಕರಿಂಗ್ ಮತ್ತು ಇನ್ನೋವೇಶನ್ ಮ್ಯಾರಥಾನ್

ATL ಮ್ಯಾರಥಾನ್ ಎಂಬುದು ರಾಷ್ಟವ್ಯಾಪಿ ಚಾಲೆಂಜ್ ಆಗಿದ್ದು, ರಾಷ್ಟ್ರೀಯ ಪ್ರಾಮುಖ್ಯತೆಯ ಕ್ಷೇತ್ರಗಳು ಅಂದರೆ ಶುದ್ಧ ಶಕ್ತಿ, ನೀರಿನ ಸಂಪನ್ಮೂಲಗಳು, ತ್ಯಾಜ್ಯ ನಿರ್ವಹಣೆ, ಆರೋಗ್ಯಾರೈಕೆ, ಸ್ಮಾರ್ಟ್ ಮೊಬಿಲಿಟಿ ಮತ್ತು ಕೃಷಿ–ತಂತ್ರಜ್ಞಾನದ ಸುತ್ತಲೂ ಕೇಂದ್ರೀಕೃತವಾಗಿದೆ. ಈ ಮ್ಯಾರಥಾನ್ ಯುವ ಪರಿವರ್ತಕರಿಗೆ ತಮ್ಮ ಐಡಿಯಾವನ್ನು ಪ್ರದರ್ಶಿಸಲು ಮಾತ್ರವಲ್ಲ, ಮ್ಯಾರಥಾನ್ ವಿಜೇತರಿಗೆ ನೀಡಲಾಗುವ ಅವಕಾಶಗಳ ಮೂಲಕ ತಮ್ಮ ಐಡಿಯಾವನ್ನು ಮೂಲಮಾದರಿಯಾಗಿ ಮತ್ತು ಕನಿಷ್ಠ ಕಾರ್ಯಸಾಧ್ಯ ಉತ್ಪನ್ನವಾಗಿ ಮೇಲ್ಮಟ್ಟಕ್ಕೇರಿಸುವ ಸದವಕಾಶವಾಗಿದೆ. ಶಾಲೆಗಳು ತಮ್ಮ ಅಂತಿಮ ಸಲ್ಲಿಕೆಯ ಭಾಗವಾಗಿ, ಒಂದು ಸಮಸ್ಯೆ ಹೇಳಿಕೆಯನ್ನು ಪರಿಹರಿಸುವ ನವೀನತೆ ಅಥವಾ ಆವಿಷ್ಕಾರದ ಪರಿಕಲ್ಪನೆ ಅಥವಾ ಮೂಲಮಾದರಿಗಳ ಕಾರ್ಯಸಾಧ್ಯ ಪುರಾವೆಯನ್ನು ಸಲ್ಲಿಸುವಂತೆ ನಿರೀಕ್ಷಿಸಲಾಗುತ್ತದೆ. ಆಯ್ದ ಆವಿಷ್ಕಾರಗಳನ್ನು ATL ಲ್ಯಾಬ್ನಲ್ಲಿ ಶಾಲೆಗಳಿಂದ ಸುಲಭಗೊಳಿಸಲಾದ ಪ್ರೋಟೋಟೈಪಿಂಗ್ ಸಪೋರ್ಟ್‌ನಿಂದ ಇನ್ನಷ್ಟು ಪರಿಷ್ಕರಿಸಲಾಗುತ್ತದೆ.

ಇಸವಿ 2017 ರಲ್ಲಿ, ಮ್ಯಾರಥಾನ್–ನಲ್ಲಿ 650 ಕ್ಕಿಂತ ಹೆಚ್ಚು ಆವಿಷ್ಕಾರ ನಮೂದುಗಳನ್ನು ಸ್ವೀಕರಿಸಲಾಯಿತು. ಟಾಪ್ 30 ವಿಜೇತ ಆವಿಷ್ಕಾರಗಳು ಭಾರತದ 20 ಬೇರೆ ಬೇರೆ ರಾಜ್ಯಗಳು ಮತ್ತು ಯೂನಿಯನ್ ಟೆರಿಟೋರಿಗಳನ್ನು ಪ್ರತಿನಿಧಿಸಿದವು. ಈ 30 ಆವಿಷ್ಕಾರಗಳು, NITI ಆಯೋಗ್ ಉಪಾಧ್ಯಕ್ಷರಾದ ಡಾ. ರಾಜೀವ್ ಕುಮಾರ್ ಅವರು ಪ್ರಾರಂಭಿಸಿದ ಒಂದು ಸಂಕಲನದಲ್ಲಿ ಸ್ಥಾನವನ್ನು ಪಡೆದಿವೆ. (ಬುಕ್ಲೆಟ್ ಲಿಂಕ್: http://aim.gov.in/pdf/top30final-low.pdf).

ವಿಜೇತರ ನೈತಿಕತೆಯನ್ನು ಇನ್ನಷ್ಟು ಹೆಚ್ಚಿಸಲು ಮತ್ತು ಅವರನ್ನು ಅಗ್ರಸ್ಥಾನಕ್ಕೆ ತರಲಿಕ್ಕಾಗಿ, ಅವರಲ್ಲಿ ಕೆಲವರನ್ನು 2018ರ ಜೂನ್ 4 ರಂದು ಸನ್ಮಾನ್ಯ ಪ್ರಧಾನ ಮಂತ್ರಿಯವರೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಪರಸ್ಪರ ಸಂಭಾಷಣೆ ಮಾಡುವಂತೆ ಏರ್ಪಡಿಸಲಾಯಿತು. ಟಾಪ್ 30 ತಂಡಗಳಿಗೆ ಬಹುಮಾನಗಳನ್ನು ಮತ್ತು ಪುರಸ್ಕಾರಗಳನ್ನು ನೀಡಿ ಸನ್ಮಾನಿಸಲಾಯಿತು. ಇದರ ಗುರಿಯು ಯಶಸ್ವಿಕರವಾಗಿ ಅವರ ಆವಿಷ್ಕಾರಗಳನ್ನು ಉತ್ಪನ್ನಗಳಾಗಿ ಪರಿವರ್ತಿಸುವುದೇ ಆಗಿತ್ತು, ಇದರಿಂದಾಗಿ ವಿಜೇತರನ್ನು ಸ್ಟೂಡೆಂಟ್ ಇನ್ನೋವೇಟರ್ ಪ್ರೋಗ್ರಾಮ್ನಲ್ಲಿ—ಈ ಪ್ರೋಗ್ರಾಮ್ನಲ್ಲಿ ಪರಿವರ್ತಕರು AIM ಇನ್ಕ್ಯುಬೇಟರ್ಗಳ ಮಾರ್ಗದರ್ಶನದಲ್ಲಿ ಕೆಲಸಮಾಡುತ್ತಾರೆ—ಸೇರಿಸಲಾಯಿತು ಮತ್ತು ಅಂತಿಮವಾಗಿ ಅವರು ಮಾರುಕಟ್ಟೆ–ಸಿದ್ಧ ಉತ್ಪನ್ನವನ್ನು ರಚಿಸಿದರು. ATL ಟಿಂಕರಿಂಗ್ ಮ್ಯಾರಥಾನ್ ಒಟ್ಟು 11 ತಿಂಗಳುಗಳ ಕಾಲಾವಧಿಯನ್ನು ಹೊಂದಿದ್ದು, ಅಪ್ಲಿಕೇಷನ್ ಹಂತ, ಮೌಲ್ಯಮಾಪನ, ಟಾಪ್ ಆವಿಷ್ಕಾರಗಳ ಪ್ರಕಟಣೆ ಮತ್ತು ಮುಕ್ತಾಯದ ವಿದ್ಯಾರ್ಥಿ ಪರಿವರ್ತಕ ಕಾರ್ಯಕ್ರಮವನ್ನು ಒಳಗೊಂಡಿದೆ.

### ಕೇಸ್ ಸ್ಟಡಿ: ರಾಷ್ಟ್ರೀಯ ಆವಿಷ್ಕಾರ ಚಾಲೆಂಜುಗಳಲ್ಲಿ ಭಾಗವಹಿಸುವುದು

### ಶಾಲೆ: ಪಾಲ್ಜೊರ್ ನಾಂಗ್ಯಾಲ್ ಗರ್ಲ್ಸ್ ಸೀನಿಯರ್ ಸೆಕೆಂಡರಿ ಸ್ಕೂಲ್, ಸಿಕ್ಕಿಂ

### ATL ಇನ್–ಚಾರ್ಜ್: ಶ್ರೀ ಐವಾನ್ ಲೆಪ್ಚಾ

ದೇಶದ ದೂರದ ಕೇಂದ್ರಗಳಲ್ಲಿ ಒಂದಾದ PNG ಸಿಕ್ಕಿಂನಲ್ಲಿನ ATL, ಆವಿಷ್ಕಾರದ ನೇತೃತ್ವದ ಮುನ್ನೆಚ್ಚೆಯಲ್ಲಿ ಇದೇ ಮೊದಲನೆಯದಾಗಿತ್ತು ಮತ್ತು ಅದರ ಆರಂಭದಿಂದಲೂ ಯಶಸ್ವಿಕರವಾಗಿ ರೋಮಾಂಚಕ ಅವಕಾಶಗಳ ಸಂಕೇತವಾಗಿ ರೂಪಾಂತರಗೊಂಡಿದೆ.

ಶಾಲೆಯ ಮ್ಯಾನೇಜ್ಮೆಂಟ್ ATL ವಿದ್ಯಾರ್ಥಿಗಳಿಗೆ ವಿವಿಧ AIM ಹಾಗೂ ಇತರ ಬಾಹ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುತ್ತದೆ. ಇದು ಹುರುಪಿನ ಪರಿಸರ ವ್ಯವಸ್ಥೆಯನ್ನು ನಿರ್ಮಿಸಿದ್ದು, ತಮ್ಮ ವಚನ ಬದ್ಧತೆ ಹಾಗೂ ಉತ್ಕಟ ಬಯಕೆಯ ಮೂಲಕ ಪ್ರಭಾವವನ್ನು ಸೃಷ್ಟಿಸಲು ದೃಢ ನಿರ್ಧಾರವನ್ನು ಮಾಡಿರುವ ಒಂದು ಐಕ್ಯ ತಂಡವಾಗಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಒಟ್ಟುಗೂಡಿ ಕಾರ್ಯನಡಿಸುತ್ತಾರೆ.

ಶಾಲೆಯ ಪ್ರಿನ್ಸಿಪಾಲರಿಂದ ಹಾಗೂ ಮ್ಯಾನೇಜ್ಮೆಂಟ್‌ನಿಂದ ಪಡೆದ ಬೆಂಬಲದಿಂದ ಪ್ರಚೋದಿತರಾದ ವಿದ್ಯಾರ್ಥಿಗಳು, ನೋಬಲ್ ಪ್ರೈಸ್ ಸೀರೀಸ್ 2018, ಗೋವಾ, ಬೆಂಗಳೂರು ಟೆಕ್ ಸಮ್ಮಿಟ್ 2018, ಬೆಂಗಳೂರು, ಮಿನಿ ಮೇಕರ್ ಫೈರ್ 2018, ಬೆಂಗಳೂರು ಅನ್ನೂ ಸೇರಿಸಿ ಇನ್ನೂ ಅನೇಕ ಬಾಹ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಮತ್ತು ವೈಬ್ರಂಟ್ ಗುಜರಾತ್ ಸ್ಟಾರ್ಟ್–ಅಪ್ ಆಂಡ್ ಟೆಕ್ನಾಲಜಿ ಸಮ್ಮಿಟ್, 2018 ಇವರಿಂದ ಆಯೋಜಿಸಲಾದ ಇಂಡಿಯಾ ಇಂಟರ್ನ್ಯಾಷನಲ್ ಸೈಯನ್ಸ್ ಫೇರ್ (IISF) 2018, ಲಕ್ನೋದಲ್ಲಿ ಇವರ ಮೂಲಮಾದರಿಯು ಮಹತ್ತರ ಶ್ಲಾಘನೆಯನ್ನು ಪಡೆಯಿತು. ನವೀನತೆ ಅಥವಾ ಆವಿಷ್ಕಾರದ ಮೂಲಕ ಮೌಲ್ಯವನ್ನು ರಚಿಸುವ ತಮ್ಮ ಕಟ್ಟಾಸೆಯೊಂದಿಗೆ ಶಾಲೆಯ ATL ಇನ್ನೋವೇಟರ್ಸ್, ATL ಟಿಂಕರಿಂಗ್ ಮ್ಯಾರಥಾನ್ 2017ರ ಟಾಪ್ 100 ತಂಡಗಳ ನಡುವೆ ಮತ್ತು IISF 2018ರ ಟಾಪ್ 5 ATL ತಂಡಗಳ ನಡುವೆ ಕಾಣಿಸಿಕೊಂಡರು.






## ಕೇಸ್ ಸ್ಟಡಿ: ಒಂದು ಅಂತರರಾಷ್ಟ್ರೀಯ ಆವಿಷ್ಕಾರದ ಚಾಲೆಂಜಿನಲ್ಲಿ ಭಾರತವನ್ನು ಪ್ರತಿನಿಧಿಸಿದ್ದು

### ಶಾಲೆ: ಚಾಯ್ಸ್ ಸ್ಕೂಲ್, ಕೊಚ್ಚಿ, ಕೇರಳ

### ATL ಇನ್–ಚಾರ್ಜ್: ಶ್ರೀ ಸುನಿಲ್ ಪೌಲ್

ಚಾಯ್ಸ್ ಸ್ಕೂಲ್ ಸತತವಾಗಿ ಕೇರಳದಲ್ಲೇ ಅತ್ಯುತ್ತಮ ಶಾಲೆಗಳಲ್ಲಿ ಒಂದಾಗಿ ಸ್ಥಾನ ಪಡೆದಿದೆ. ಈ ಶಾಲೆಯು ರಾಷ್ಟ್ರೀಯ ಮಟ್ಟದಲ್ಲಿ ಅಧರ ಕ್ರೀಡಾ ಮತ್ತು ಸಾಂಸ್ಕೃತಿಕ ಸಾಧನೆಗಳಿಗೆ ಹೆಸರುವಾಸಿಯಾಗಿದೆ. ಶಾಲೆಯಲ್ಲಿ ಸ್ಥಾಪಿಸಲಾಗಿರುವ ATL, ವಿ**ಜ್ಞಾ**ನ ಮತ್ತು ತಂತ್ರ**ಜ್ಞಾ**ನದಲ್ಲಿ ಶಾಲೆಯ ಒಟ್ಟಾರೆ ಕಾರ್ಯಕ್ಷಮತೆಗೆ ಮಹತ್ತರ ಸಹಾಯವನ್ನು ನೀಡಿದೆ ಎದು ATL ಇನ್–ಚಾರ್ಜ್ ಅವರು ಬಲವಾಗಿ ನಂಬುತ್ತಾರೆ. ಕೇವಲ 6 ರಿಂದ 12ನೇ ತರಗತಿಯ ಆಸಕ್ತ ವಿದ್ಯಾರ್ಥಿಗಳು ಮಾತ್ರವಲ್ಲ, 3 ರಿಂದ 5ನೇ ತರಗತಿಯ ವಿದ್ಯಾರ್ಥಿಗಳು ಸಹ ಪ್ರತಿ ವಾರ ATL ಚಟುವಟಿಕೆಗಾಗಿ ಒಂದು ಪಿರಿಯಡ್ ಅನ್ನು ಹೊಂದಿದ್ದಾರೆ. ಲ್ಯಾಬ್ಗಳಲ್ಲಿ ಹೆಚ್ಚಿನ ಸಮಯವನ್ನು ಕಳೆಯಲು ಬಯಸುವಂಥ ವಿದ್ಯಾರ್ಥಿಗಳಿಗೆ ಸ್ವಾಗತವಿದೆ ಮತ್ತು ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ಸಾಮಾನ್ಯವಾಗಿ ಶಾಲೆಯ ಸಮಯದ ನಂತರ ಹಿಂದೆ ಉಳಿಯುತ್ತಾರೆ.

ATL ವಿದ್ಯಾರ್ಥಿಗಳು ಕೊಚ್ಚಿಯ ಕಾಲೇಜುಗಳು ಆಯೋಜಿಸಿದ ಸ್ಪರ್ಧೆಗಳಲ್ಲಿ ಭಾಗವಹಿಸಲು ಆರಂಭಿಸಿದರು ಮತ್ತು ಸಮಯಾನಂತರ ಕ್ರಮೇಣ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸತೊಡಗಿದರು. ಈ ಶಾಲೆಯ ATLನಿಂದ ಹದಿನಾಲ್ಕು ಮಂದಿ ವಿದ್ಯಾರ್ಥಿಗಳು RoboRAVE ಇಂಡಿಯಾ, 2017ರ ಉದ್ಯಮಶೀಲತಾ ಚಾಲೆಂಜಿನಲ್ಲಿ ಭಾಗವಹಿಸಿ ಮೂರನೇ ಬಹುಮಾನವನ್ನು ಪಡೆದರು. ಚೀನಾದ ಬೀಜಿಂಗ್‌ನಲ್ಲಿ RoboRAVE ಏಷಿಯಾದಲ್ಲಿ ಭಾಗವಹಿಸಲು ಶಾಲೆಯ ತಂಡಗಳಲ್ಲಿ ಒಂದು ಸೋನಿ ಗ್ಲೋಬಲ್ ಎಜುಕೇಷನ್ ನಿಂದ ಪ್ರಾಯೋಜಕತ್ವವನ್ನು ಪಡೆಯಿತು. ಜೋರ್ಡನ್ ಜೋಬಿ ಎರಾಲಿಲ್ ಮತ್ತು ಬಾಸಿಲ್ ಅಲಿಯಾಸ್ ಎಂಬ 6ನೇ ತರಗತಿಯ ATL ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಸೋನಿ " KOOV ರೋಬೋಟ್" ಚಾಲೆಂಜಿನಲ್ಲಿ ಭಾರತವನ್ನು ಪ್ರತಿನಿಧಿಸಿದರು ಮತ್ತು ವೈಯಕ್ತಿಕ ಹಾಗೂ ಗುಂಪಿನ ರೋಬೋಟ್ ನಿರ್ಮಾಣ ಸ್ಪರ್ಧೆಯಲ್ಲಿ ಕಂಚಿನ ಪದಕವನ್ನು ಗೆದ್ದರು.

*ನ್ಯೂ ಮೆಕ್ಸಿಕೋದ ಆಲ್ಬುಕರ್ಕ್‌ನಲ್ಲಿ RoboRAVE ಇಂಟರ್ನ್ಯಾಷನಲ್ 2018 ರಲ್ಲಿ ಸ್ಪರ್ಧಿಸಲು ನಮ್ಮನ್ನು ಆಹ್ವಾನಿಸಿದಾಗ ನಾವು ತುಂಬ ರೋಮಾಂಚನಗೊಂಡೆವು. ಅಂತರರಾಷ್ಟ್ರೀಯ ರೋಬೋಟಿಕ್ಸ್ ಸ್ಪರ್ಧೆಗೆ ಹೋಗುವುದು ಅತ್ಯಮೂಲ್ಯವಾದ ಒಂದು ಅಪರೂಪದ ಅವಕಾಶವಾಗಿತ್ತು. ನಾವು ಅಲ್ಲಿ ಗೆಲ್ಲದೇ ಹೋದರೂ ಮತ್ತೊಮ್ಮೆ ಪ್ರಯತ್ನಿಸುವಂತೆ ನಮ್ಮನ್ನು ಪ್ರೇರೇಪಿಸಲು ಸರಿಯಾದ ರೀತಿಯ ಮಾನ್ಯತೆ ಪಡೆಯುತ್ತೇವೆ ಎಂದು ನಾವು ನಿರೀಕ್ಷಿಸಿದ್ದೆವು. ಈ ಪ್ರೋಜೆಕ್ಟ್ ಅನ್ನು ವಿನ್ಯಾಸಿಸಲು ಮತ್ತು ನಿರ್ಮಿಸಲು ನಾವು ನಮ್ಮ ಇಡೀ ರಜಾದಿನಗಳನ್ನು ಶಾಲೆಯ ATLನಲ್ಲೇ ಕಳೆದೆವು. RoboRAVE ಇಂಡರ್ನ್ಯಾಷನಲ್ ಉದ್ಘಾಟನಾ ಸಮಾರಂಭದಲ್ಲಿ ನಮ್ಮ ರಾಷ್ಟ್ರ ಧ್ವಜದೊಂದಿಗೆ ಭಾರತವನ್ನು ಪ್ರತಿನಿಧಿಸುವ ಅವಕಾಶ ನನಗೆ ಸಿಕ್ಕಿದ್ದಕ್ಕಾಗಿ ನನಗೆ ತುಂಬ ಸಂತೋಷವಾಗಿದೆ"* ಎಂದು ಒಂಬತ್ತು ಸದಸ್ಯರ ತಂಡದ ಒಬ್ಬ ಸದಸ್ಯರಾದ ನೈನಾ ಹೇಳಿದ್ದಾರೆ.

*"ನಾನು 5ನೇ ತರಗತಿಯಲ್ಲಿದ್ದಾಗ ನಮ್ಮ ಶಾಲೆಯಲ್ಲಿ ನಡೆಸಲಾದ ಮೊದಲ RoboRAVE ಇಂಡಿಯಾ ಸ್ಪರ್ಧೆಯ ಭಾಗವಾಗಿದ್ದೆ ಮತ್ತು ಅಗ್ನಿಶಾಮಕ ಸ್ಪರ್ಧೆಯಲ್ಲಿ ನನ್ನ ತಂಡವು ಮೊದಲ ಬಹುಮಾನವನ್ನು ಗಳಿಸಿತು. ಅಂದಿನಿಂದ ನಾನು ಅದರ ಕಡೆಗೆ ಒಲವನ್ನು ಬೆಳೆಸಿಕೊಂಡೆ ಮತ್ತು ನಮ್ಮ ATL ಟೀಚರ್ ನನ್ನನ್ನು ಬಹಳವಾಗಿ ಪ್ರೋತ್ಸಾಹಿಸಿದರು. ನ್ಯೂ ಮೆಕ್ಸಿಕೋದಲ್ಲಿ ನಡೆದ RoboRAVE ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಆಯ್ಕೆಯಾಗಲು ನಾನು ಅದೃಷ್ಟಶಾಲಿಯಾಗಿದ್ದೆ. ಅದು ಕೇವಲ ಕೆಲವರು ಮಾತ್ರವೇ ಕನಸು ಕಾಣಬಹುದಾದ ಒಂದು ಅಪೂರ್ವ ಅನುಭವವಾಗಿತ್ತು, ಎಕ್ಸ್‌ಪೋಷರ್ ಆಗಿತ್ತು ಮತ್ತು ಮಜಾ ನೀಡಿತು. ನನ್ನ ಶಾಲೆಯ ATL ಕಾರಣದಿಂದಾಗಿಯೇ ನನಗೆ ಈ ಸದವಕಾಶ ಸಿಕ್ಕಿತು ಮತ್ತು ಟಿಂಕರಿಂಗ್‌ಗಾಗಿ ನನ್ನ ಅಧಿಕಾಂಶ ಬ್ರೇಕ್ ಟೈಮನ್ನು ನಾನು ಲ್ಯಾಬಿನಲ್ಲಿಯೇ ಕಳೆಯುತ್ತೇನೆ" ಎಂದು, ಸೋಲಾರ್ ಪವರ್ಡ್ ಸ್ಯೂಎಜ್ ಕ್ಲೀನರ್ ಕಾರ್ಯಕ್ರಮದ ಭಾಗವನ್ನು ನಿರ್ವಹಿಸಿದ ಗ್ರೇಡ್ ಏಳರ ವಿದ್ಯಾರ್ಥಿಯಾದ ಸೈಫ್ ಹೇಳುತ್ತಾರೆ.*

ಇದಲ್ಲದೆ, ಈ ಶಾಲೆಯ 22 ಮಂದಿ ವಿದ್ಯಾರ್ಥಿಗಳು IIT ಮದ್ರಾಸಿನ ವಾರ್ಷಿಕ ತಾಂತ್ರಿಕ ಉತ್ಸವವಾದ ಶಾಸ್ತ್ರಾ 2018 ರಲ್ಲಿ ಸಹ ಭಾಗವಹಿಸಿದರು ಮತ್ತು ಈ ಕಾರ್ಯಕ್ರಮದಲ್ಲಿ ನಡೆದ ಪ್ರಮುಖ ರೋಬೋಟಿಕ್ಸ್ ಸ್ಪರ್ಧೆಗಳಲ್ಲಿ ಒಂದಾದ ರೋಬೋ–ಓಸಿಯಾನಾದಲ್ಲಿ ಮೊದಲ ಮತ್ತು ಎರಡನೆಯ ಬಹುಮಾನವನ್ನು ಗೆದ್ದರು.





## 4.5 ಅನ್ಬಾಕ್ಸ್ ಟಿಂಕರಿಂಗ್ – ಶಿಕ್ಷಕರ ತರಬೇತಿ ಕಾರ್ಯಕ್ರಮ

ATLಗೆ ಸಂಬಂಧಿಸಿದ ಸಂಪನ್ಮೂಲಗಳ ಸಾಮರ್ಥ್ಯವನ್ನು ನಿರ್ಮಿಸಲಿಕ್ಕಾಗಿ, NITI ಆಯೋಗ್ ಅಡಿಯಲ್ಲಿ AIM ಹಾಗೂ ಅದರ ಪಾಲುದಾರರೊಂದಿಗೆ ದೇಶದಾದ್ಯಂತ ಶಿಕ್ಷಕರ ತರಬೇತಿ ಕಾರ್ಯಕ್ರಮವನ್ನು ನಡೆಸಿತು. ATL ಸ್ಥಾಪನೆ, ಕಾರ್ಯಾಚರಣೆ ಮತ್ತು ಯಶಸ್ವಿಕರವಾಗಿ ಮೇಲ್ವಿಚಾರಣೆ ಮಾಡುವ ವಿವಿಧ ಅಂಶಗಳ ಬಗ್ಗೆ ಶಿಕ್ಷಕರಿಗೆ ತರಬೇತಿಯನ್ನು ನೀಡಲಾಯಿತು.

ಇಷ್ಟರ ತನಕ 1500 ಕ್ಕಿಂತಲೂ ಹೆಚ್ಚು ಶಿಕ್ಷಕರು ಇಂಟೆಲ್, IBM, KPIT, ಲರ್ನಿಂಗ್ ಲಿಂಕ್ಸ್ ಫೌಂಡೇಷನ್ ಮತ್ತು ಇತರ ಪಾಲುದಾರರನ್ನೂ ಸೇರಿಸಿ ವಿವಿಧ ಪಾಲುದಾರರಿಂದ ತರಬೇತಿ ಪಡೆದಿದ್ದಾರೆ.

## 4.6 ಅಟಲ್ ಟಿಂಕರಿಂಗ್ ಲ್ಯಾಬ್ನೊಂದಿಗೆ ನಿರಂತರ ಸಂವಾದ

ಒಂದು ಕಾರ್ಯಕ್ರಮವನ್ನು ಯಶಸ್ವಿಯಾಗಿ, ಪ್ರಭಾವಶಾಲಿಯಾಗಿ ಮತ್ತು ಪರಿಣಾಮಕಾರಿಯಾಗಿ ಮಾಡುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸುವಂಥ ಅನೇಕ ನಿರ್ಣಾಯಕ ಮಾನದಂಡಗಳಲ್ಲಿ ಒಂದು, ಅದರ ಆಂತರಿಕ ಮತ್ತು ಬಾಹ್ಯ ಪಾಲುದಾರರ ನಡುವಿನ ಸಂವಾದವೇ ಆಗಿದೆ. ಮಾಹಿತಿಯ ಈ ಸರಾಗವಾದ ಹರಿವು ಅಸ್ಪಷ್ಟತೆಯನ್ನು ನಿವಾರಿಸುತ್ತದೆ ಮಾತ್ರವಲ್ಲ, ಕಾರ್ಯಕ್ರಮದ ಬೆಳವಣಿಗೆಗಳಲ್ಲಿ ಪಾಲುದಾರರು ಒಳಗೂಡುವಂತೆ ಮತ್ತು ಅದರ ಕುರಿತಾದ ಮಾಹಿತಿಯನ್ನು ಸರಿಯಾಗಿ ತಿಳಿದಿರುವಂತೆ ಮಾಡುತ್ತದೆ. ATLನೊಂದಿಗೆ ಸಂವಾದ ಮಾಡಲು ಈ ಕೆಳಗಿನಂಥ ಹಲವಾರು ಸಂಪರ್ಕ ಮಾಧ್ಯಮಗಳನ್ನು ಸ್ಥಾಪಿಸಬೇಕು:

**ಎ. ಹೆಲ್ಪ್-ಡೆಸ್ಕ್ ಇಮೇಲ್**

ಮಾಹಿತಿಯನ್ನು ಹಂಚಿಕೊಳ್ಳಲು ಮತ್ತು ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಸ್ಪಷ್ಟೀಕರಣವನ್ನು ನೀಡಲು ಒಂದು ಅಧಿಕೃತ ಇಮೇಲ್ ಐಡಿಯನ್ನು ಸ್ಥಾಪಿಸಬೇಕು.

**ಬಿ. ಸೋಶಿಯಲ್ ಮೀಡಿಯಾ**

ಸೋಶಿಯಲ್ ಮೀಡಿಯಾವು ಅಸ್ತಿತ್ವದಲ್ಲಿರುವ ಮತ್ತು ಸಂಭವನೀಯ ಪಾಲುದಾರರನ್ನು ತಲಪಲು ಉತ್ತಮ ವೇದಿಕೆಯಾಗಿದೆ, ಕೇವಲ ಸಾಧನೆಗಳನ್ನು ಪ್ರದರ್ಶಿಸಲಿಕ್ಕಾಗಿ ಅಲ್ಲ, ಹೆಚ್ಚು ವ್ಯಾಪಕವಾದ ಗುಂಪಿನಲ್ಲಿ ನವೀನತೆ ಅಥವಾ ಆವಿಷ್ಕಾರದ ಚೈತನ್ಯವನ್ನು ಹೊತ್ತಿಸಲಿಕ್ಕಾಗಿಯೂ ಇದು ಉಪಯುಕ್ತವಾಗಿದೆ. ಸೋಶಿಯಲ್ ಮೀಡಿಯಾ ಚ್ಯಾನಲ್ಗಳಲ್ಲಿ ಕಥೆಗಳನ್ನು ಹಂಚಿಕೊಳ್ಳುವಂತೆ, ಆವಿಷ್ಕಾರದ ಚಟುವಟಿಕೆಗಳ ಕುರಿತು ಜಾಗೃತಿಯನ್ನು ಮೂಡಿಸುವಂತೆ ಹಾಗೂ ಸಮುದಾಯದ ಭಾಗವಹಿಸುವಿಕೆಯನ್ನು ಆಹ್ವಾನಿಸುವಂತೆ ಶಾಲೆಗಳಿಗೆ ಪ್ರೋತ್ಸಾಹಿಸಲಾಗಿದೆ.

ನವೀನತೆ ಅಥವಾ ಆವಿಷ್ಕಾರವನ್ನು ಉತ್ತೇಜಿಸಲು ಮತ್ತು ಪೋಷಿಸಲು ಫೇಸ್ಬುಕ್ ಮತ್ತು ಟ್ವಿಟರ್ನಂಥ ಸೋಶಿಯಲ್ ಮೀಡಿಯಾ ವೇದಿಕೆಗಳ ಸಹಕಾರಿ ಶಕ್ತಿ ಮತ್ತು ವ್ಯಾಪಕತೆಯನ್ನು AIM ಗರಿಷ್ಠ ಮಟ್ಟದಲ್ಲಿ ಸದುಪಯೋಗಿಸಿಕೊಂಡಿದೆ.

**AIMನ FB ಪೇಜ್:** www.facebook.com/AIMtoInnovate

AIM ಎಲ್ಲಾ ATL ಶಾಲೆಗಳಿಗೆ ತಮ್ಮ ATL ಗಾಗಿ ಒಂದು ಫೇಸ್ಬುಕ್ ಪೇಜನ್ನು ರಚಿಸುವಂತೆ ಮತ್ತು ಫೋರಂ ನಲ್ಲಿ ವಿವಿಧ ATL ಚಟುವಟಿಕೆಗಳನ್ನು ಹಂಚಿಕೊಳ್ಳುವಂತೆ ಪ್ರೋತ್ಸಾಹಿಸುತ್ತದೆ. ಶಾಲೆಗಳಿಗೆ 'ಅಟಲ್ ಇನ್ನೋವೇಶನ್ ಮಿಷನ್' ಮತ್ತು ' NITI ಆಯೋಗ್' ಅನ್ನು ತಮ್ಮ ಎಲ್ಲಾ ಪೋಸ್ಟ್‌ಗಳಲ್ಲಿ ಟ್ಯಾಗ್ ಮಾಡುವಂತೆ ಮತ್ತು ಹ್ಯಾಶ್ಟ್ಯಾಗ್ – #AIMtoInnovate ಉಪಯೋಗಿಸುವಂತೆ ಸಲಹೆ ನೀಡಲಾಗಿದೆ.

**AIM ನ ಟ್ವಿಟರ್ ಹ್ಯಾಂಡಲ್:** @AIMtoInnovate

**ಸಿ. ಮೆಸ್ಸೆಂಜರ್ ಗ್ರೂಪ್ಸ್**

Whatsapp, ಫೇಸ್ಬುಕ್ ಗಳಂಥ ಮೆಸ್ಸೆಂಜರ್ ಗ್ರೂಪ್ಸ್ ಮತ್ತು ಇತರ ಸೋಶಿಯಲ್ ಮೀಡಿಯಾ ವೇದಿಕೆಗಳು, ಸಮಸ್ಯೆಗಳಿಗೆ ತ್ವರಿತಗತಿಯ ಪರಿಹಾರಗಳನ್ನು, ಮಾಹಿತಿ ಹಂಚಿಕೆಯನ್ನು, ಸ್ಟೇಟಸ್ ಅಪ್ಡೇಟ್, ಸಾಧನೆಗಳು/ ಪುರಸ್ಕಾರಗಳ ಹಂಚಿಕೊಳ್ಳುವಿಕೆ ಮತ್ತು ಇತರ ಬೆಂಬಲವನ್ನು ಸುಲಭಗೊಳಿಸುತ್ತವೆ.

ಫೇಸ್ಬುಕ್ ಪೇಜನ್ನು ಕ್ರಿಯೇಟ್ ಮಾಡಲು ಟ್ಯುಟೋರಿಯಲ್ ವಿಡಿಯೋವನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

https://www.youtube.com/watch?v=LDnSbsCpkNE

**ಪ್ರಾದೇಶಿಕ ಮತ್ತು ರಾಜ್ಯ–ಕ್ಕನುಸಾರವಾದ Whatsapp ಗುಂಪುಗಳು AIMನಿಂದ ರಚಿಸಲ್ಪಟ್ಟಿವೆ ಮತ್ತು ಇವು ಬಹಳ ಉಪಯುಕ್ತಕರವಾಗಿ ಕಂಡುಬಂದಿವೆ.**



*ಭಾರತ ಸರಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರಾದ ಪ್ರೊಫೆಸರ್ ಕೆ. ವಿಜಯರಾಘವನ್ ಅವರು ಆವಿಷ್ಕಾರದಿಂದ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸಂಪರ್ಕಿಸುವಂತೆ ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡುತ್ತಿರುವುದು*

## ಸಾರಾಂಶ

ಈ ಅಧ್ಯಾಯದಲ್ಲಿ AIM ನಿಂದ ಆಯೋಜಿಸಲಾದ ವಿವರಣಾತ್ಮಕ ಕಾರ್ಯಕ್ರಮಗಳ ಜೊತೆಗೆ ATLನಿಂದ ನಡೆಸಬಹುದಾದ ವಿವಿಧ ಟಿಂಕರಿಂಗ್ ಮತ್ತು ಆವಿಷ್ಕಾರಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ಚರ್ಚಿಸಲಾಯಿತು.

ಮುಂದಿನ ಅಧ್ಯಾಯವು ATL ಮುನ್ನೆಜ್ಜೆಯ ಯಶಸ್ಸನ್ನು ಉತ್ತೇಜಿಸುವುದರಲ್ಲಿ ಮಾರ್ಗದರ್ಶನದ ಪ್ರಾಮುಖ್ಯತೆಯನ್ನು ಮತ್ತು ವೃತ್ತಿಪರರು, ಹಳೆಯ ವಿದ್ಯಾರ್ಥಿಗಳು ಮತ್ತು ಕಾರ್ಪೊರೇಟ್ಗಳು ಸೇರಿದಂತೆ ವಿವಿಧ ಪಾಲುದಾರರು ಇದಕ್ಕಾಗಿ ಹೇಗೆ ನೆರವು ನೀಡಬಲ್ಲರು ಎಂಬುದನ್ನು ಚರ್ಚಿಸುತ್ತದೆ.

CHAPTER 5

# ಅಟಲ್ ಟಿಂಕರಿಂಗ್ ಲ್ಯಾಬ್ನ ಯಶಸ್ಸಿಗಾಗಿ ಮಾರ್ಗದರ್ಶನ

ATLನ ಯಶಸ್ವಿ ಅನುಷ್ಠಾನದ ಒಂದು ಪ್ರಮುಖ ಅಂಶವು, ವಿವಿಧ ಅನ್ವೇಷಣೆಗೆ ಸಂಬಂಧಿಸಿದ ಕೌಶಲಗಳ ವಿಷಯದಲ್ಲಿ ವಿದ್ಯಾರ್ಥಿಗಳನ್ನು ಮಾರ್ಗದರ್ಶಿಸಲು ಅವರ ಪರಿಣತಿಯನ್ನು ಸದುಪಯೋಗಿಸಿಕೊಳ್ಳಲಿಕ್ಕಾಗಿ, ಮಾರ್ಗದರ್ಶಕರು (ಮೆಂಟರ್ಸ್), ಉದ್ಯಮ ವೃತ್ತಿಪರರು ಮತ್ತು ಹಳೆಯ ವಿದ್ಯಾರ್ಥಿಗಳು ಸೇರಿದಂತೆ ವಿಭಿನ್ನ ಪಾಲುದಾರರೊಂದಿಗೆ ಬೆಸೆಯಲಾಗುವ ದೃಢವಾದ ಪಾಲುದಾರಿಕೆಯೇ ಆಗಿದೆ. ಬೇರೆ ಬೇರೆ ಪಾಲುದಾರರ ಸಾಮರ್ಥ್ಯ, ಸಂಪನ್ಮೂಲಗಳು, ತಾಂತ್ರಿಕ **ಜ್ಞಾ**ನದ ಮೇಲೆ ಅವಲಂಬಿತವಾಗಿರುವ ಸಮರ್ಥನೀಯ ಸಾಂಸ್ಥಿಕ ಚೌಕಟ್ಟುಗಳು, ಕಾರ್ಯಕ್ರಮದ ಯಶಸ್ಸನ್ನು ಖಚಿತಪಡಿಸಿಕೊಳ್ಳಲು ತುಂಬ ಪ್ರಾಮುಖ್ಯವಾಗಿವೆ. ಅಷ್ಟುಮಾತ್ರವಲ್ಲ, ಟಿಂಕರಿಂಗ್ ಪರಿಕಲ್ಪನೆಯು ನಮ್ಮ ದೇಶದಲ್ಲಿ ಇನ್ನೂ ಹೊಸದಾಗಿರುವುದರಿಂದ, ಈ ಐಡಿಯಾವನ್ನು ಮುನ್ನಡೆಸಲು ಕಾರ್ಪೊರೇಟ್ ಜಗತ್ತಿನ ಮಾರ್ಗದರ್ಶಕರು, ಶಿಕ್ಷಣ ಸಂಸ್ಥೆ, ಉನ್ನತ ಶಿಕ್ಷಣ ಸಂಸ್ಥೆಗಳು, ಸರಕಾರ ಇತ್ಯಾದಿಗಳಿಂದ ನಿರಂತರವಾದ ಬೆಂಬಲ ಅಥವಾ ಜಾಗರೂಕ ಮಾರ್ಗದರ್ಶನದ ಅಗತ್ಯವಿರುತ್ತದೆ. ATL ಸ್ವಭಾವತಃ ಅವಿಧಾಯಕವಾಗಿದೆ; ಮಾರ್ಗದರ್ಶಕರು ಕೇವಲ ಬೋಧಕರಲ್ಲ ಬದಲಿಗೆ ಸಮರ್ಥರನ್ನಾಗಿ ಮಾಡುವವರಾಗಿರುವಂತೆ ನಿರೀಕ್ಷಿಸಲಾಗುತ್ತದೆ[9]. ತಾಂತ್ರಿಕ **ಜ್ಞಾ**ನ, ಆವಿಷ್ಕಾರ ಮತ್ತು ವಿನ್ಯಾಸ, ವ್ಯವಹಾರ ಮತ್ತು ಉದ್ಯಮಶೀಲತೆಗಳಂಥ ಕೆಲವು ಕ್ಷೇತ್ರಗಳಲ್ಲಿ ಮಾರ್ಗದರ್ಶಕರು ವಿದ್ಯಾರ್ಥಿಗಳಿಗೆ ನೆರವು ನೀಡಬಲ್ಲರು. ಇಂಟರ್ನ್‌ಶಿಪ್ ಅವಕಾಶಗಳನ್ನು ಒದಗಿಸುವ ಮೂಲಕ ಮತ್ತು ATL ವಿದ್ಯಾರ್ಥಿಗಳಿಗೆ ವಿಶೇಷವಾಗಿ ಸಿದ್ಧಪಡಿಸಲಾದ ಇತರ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ವಿದ್ಯಾರ್ಥಿಗಳ ತಾಂತ್ರಿಕ ಸರಹದ್ದನ್ನು ವಿಸ್ತರಿಸಲು ಪಾಲುದಾರರು ಸಹಾಯ ಮಾಡಬಹುದು.

[9] ಟಿಂಕರಿಂಗ್ ಮತ್ತು ಆವಿಷ್ಕಾರದೊಂದಿಗೆ ಶಾಲಾ ಶಿಕ್ಷಣವನ್ನು ಮರುವ್ಯಾಖ್ಯಾನಿಸುವುದು, ಬಿಸ್ನೆಸ್ ವರ್ಲ್ಡ್, 2018

ATLನ ಪ್ರಭಾವವನ್ನು ಹೆಚ್ಚಿಸಲು AIM, NITI ಆಯೋಗ್ MoC ಪ್ರೋಗ್ರಾಂ ಅನ್ನು ಪ್ರಾರಂಭಿಸಿತು. ಭಾರತದಲ್ಲೇ ಅತಿ ದೊಡ್ಡ ಔಪಚಾರಿಕ ಸ್ವಯಂಸೇವಕ ಮೆಂಟರ್ ನೆಟ್ವರ್ಕ್ ಎಂದು ಊಹಿಸಲಾಗಿರುವ MoCಯ ಗುರಿಯು, ಈ ಲ್ಯಾಬ್ಗಳಲ್ಲಿ ವಿದ್ಯಾರ್ಥಿಗಳನ್ನು ಗೈಡ್ ಮಾಡುವ ಹಾಗೂ ಮಾರ್ಗದರ್ಶಿಸುವ ನಾಯಕರನ್ನು ತೊಡಗಿಸಿಕೊಳ್ಳುವುದೇ ಆಗಿದೆ. ಈ ಪರಿಕಲ್ಪನೆಯು ಒಂದು ಸ್ವಯಂ ಸೇವಕ ರಾಷ್ಟ್ರವಾಗಿ ಭಾರತವು ಸ್ಥಾಪಿಸಿರುವ ಸಾಧನೆ ದಾಖಲೆಯಿಂದ ಸ್ಫೂರ್ತಿ ಪಡೆಯುತ್ತದೆ, ಇದರಿಂದಾಗಿ ಟೆಕ್ ಫಾರ್ ಇಂಡಿಯಾದಂಥ ರಾಷ್ಟ್ರೀಯ ಮಟ್ಟದ ಸ್ವಯಂ ಸೇವಕ ಪ್ರೋಗ್ರಾಂಗಳು ಭಾರೀ ಯಶಸ್ಸನ್ನು ಗಳಿಸಿವೆ. ಇದರ ಪ್ರಾರಂಭದಿಂದಲೂ ಈ ತಂತ್ರಕುಶಲ ರಾಷ್ಟ್ರ ನಿರ್ಮಾಣ ಮುನ್ನೆಜ್ಜೆಯು ಬಲವಾದ ಬೆಂಬಲವನ್ನು ಗಳಿಸಿದ್ದು, ಭಾರತದಾದ್ಯಂತದ ಕಾರ್ಪೊರೇಟ್ಸ್ ಹಾಗೂ ಸಂಸ್ಥೆಗಳು ವಿಶಾಲವಾದ ಮಾರ್ಗದರ್ಶಕ ಬೆಂಬಲಕ್ಕಾಗಿ ಈಗಾಗಲೇ ಅನೇಕ ATL ಶಾಲೆಗಳನ್ನು ದತ್ತುಸ್ವೀಕರಿಸಿವೆ. ಕಾರ್ಪೊರೇಟ್ ಸಂಸ್ಥೆಗಳು ಸಣ್ಣ ನಗರಗಳಲ್ಲಿ ಮತ್ತು ಪಟ್ಟಣದಲ್ಲಿ ಟಿಂಕರಿಂಗ್ ಪ್ರಯತ್ನಗಳನ್ನು ಬೆಂಬಲಿಸುತ್ತಿರುವುದು ನಿಜಕ್ಕೂ ಉತ್ತೇಜನದಾಯಕವಾಗಿದೆ. ಉದಾಹರಣೆಗೆ, ಒಂದು ಬೃಹತ್ ಟೆಕ್ ಕಂಪೆನಿಯು ಭುವನೇಶ್ವರ್, ಭಾಗಲ್ಪುರ್, ಗಯಾ, ಜೋಗಿಂದರ್ನಗರ್, ಗೋಲಾಘಾಟ್ ಮತ್ತು ಶ್ರೇಣಿ 3 ಮತ್ತು ಶ್ರೇಣಿ 4ರಂಥ ಇನ್ನೂ ಅನೇಕ ಪಟ್ಟಣಗಳಲ್ಲಿರುವ ಎಲ್ಲ ATL ಶಾಲೆಗಳಿಗೆ ಬೆಂಬಲ ನೀಡಲು ಒಪ್ಪಿಕೊಂಡಿದೆ.

ಇದಲ್ಲದೆ, ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತು ತನ್ನ ಸ್ವಂತ ನೆಟ್ವರ್ಕ್ ಮೂಲಕ ATL ಶಾಲೆಗಳು ಮಾರ್ಗದರ್ಶಕರನ್ನು (ಮೆಂಟರ್ಸ್) ಆಕ್ಸೆಸ್ ಮಾಡುವುದನ್ನು ಸುಲಭಗೊಳಿಸುತ್ತದೆ. ನಮ್ಮ ಮುಂದಿನ ಪೀಳಿಗೆಯನ್ನು ನಿರಂತರ ಆವಿಷ್ಕಾರದ ಜಗತ್ತಿಗಾಗಿ ಸಿದ್ಧಪಡಿಸುವುದರಲ್ಲಿ ಮತ್ತು ಐಡಿಯೇಷನ್, ಡಿಸೈನ್–ಥಿಂಕಿಂಗ್, ತಯಾರಿಕೆ ಇನ್ನು ಮುಂತಾದ ವಿವಿಧ ಕೌಶಲಗಳಲ್ಲಿ ಅವರನ್ನು ತರಬೇತುಗೊಳಿಸಲಿಕ್ಕಾಗಿ, ಕಾರ್ಪೊರೇಟ್ಸ್ ಜೊತೆಗೆ ವೃತ್ತಿಪರರು, ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳಿಗೂ ತಮ್ಮ ವೈಯಕ್ತಿಕ ಸಾಮರ್ಥ್ಯದಲ್ಲಿ NITI ಆಯೋಗ್ AIM ಅನ್ನು ಸೇರಿಕೊಳ್ಳಲು MoC ಒಂದು ಕರೆಯಾಗಿದೆ. ಮಾರ್ಗದರ್ಶಕರಿಂದ ಮಿತವಾದ ಆದರೆ ಪ್ರಾಮುಖ್ಯವಾದ ನಿರಂತರ ವಚನ ಬದ್ಧತೆಯನ್ನು ಅಂದರೆ ವಾರಕ್ಕೊಮ್ಮೆ 1–2 ತಾಸುಗಳನ್ನು ಬದಿಗಿರಿಸುವಂತೆ ನಿರೀಕ್ಷಿಸಲಾಗುತ್ತದೆ. ಈ ಮುನ್ನೆಜ್ಜೆಗಾಗಿ—ಮಾರ್ಗದರ್ಶಕರಿಗೆ ಮಾರ್ಗದರ್ಶನ ನೀಡುವ ಮತ್ತು ಬ್ರಾಂಡ್ ಅಂಬಾಸಿಡರ್ಗಳಾಗಿ ಸೇವೆ ಸಲ್ಲಿಸುವಷ್ಟು ಪರಿಣಾಮಕಾರಿಯಾಗುವ ನಿರೀಕ್ಷೆಯಿಂದ—ಸೂಪರ್ ಮೆಂಟರ್ಗಳಾಗಿ ಭಾರತದ ಪ್ರಮುಖ ನಾಯಕರಲ್ಲಿ 40 ಕ್ಕಿಂತ ಹೆಚ್ಚು ಮಂದಿ ಸಹಿ ಹಾಕಿದ್ದಾರೆ ಮತ್ತು ಈ ಪಟ್ಟಿಯು ಪ್ರತಿ ದಿನವೂ ಬೆಳೆಯುತ್ತಿದೆ.






***NASSCOM ಅಧ್ಯಕ್ಷರಾದ ಮಿಸ್ ದೇಬ್ಜಾನಿ ಘೋಷ್ ಅವರೊಂದಿಗೆ ಸೂಪರ್ ಮೆಂಟರ್ ಸೆಷನ್***

ಕಟ್ಟುನಿಟ್ಟಾದ ಅಪ್ಲಿಕೇಷನ್ ಮತ್ತು ಸೆಲೆಕ್ಷನ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ಬಳಿಕ ಒಬ್ಬ ಮಾರ್ಗದರ್ಶಕನನ್ನು ಒಂದು ಶಾಲೆಗೆ ನೇಮಿಸಲಾಗುತ್ತದೆ ಮತ್ತು ಎಳೆಯ ಅಥವಾ ಯುವ ವಿದ್ಯಾರ್ಥಿ ಅನ್ವೇಷಕರನ್ನು ಆವಿಷ್ಕಾರದ ಕಡೆಗೆ ಪ್ರಚೋದಿಸುತ್ತಾ ಮತ್ತು ಉದ್ಯಮಶೀಲತೆಯನ್ನು ಬೆನ್ನಟ್ಟುವಂತೆ ಅವರನ್ನು ಇನ್ನಷ್ಟು ಹುರಿದುಂಬಿಸುತ್ತಾ ವಾರದಲ್ಲಿ/ ತಿಂಗಳಿನಲ್ಲಿ ಕೆಲವಾರು ತಾಸುಗಳನ್ನು ವ್ಯಯಿಸುವಂತೆ ಅವನಿಂದ ನಿರೀಕ್ಷಿಸಲಾಗುತ್ತದೆ. ಆದರೆ, ಮಾರ್ಗದರ್ಶಕರಲ್ಲಿ ಹೆಚ್ಚಿನವರು ಮಹಾನಗರ ಕೇಂದ್ರಗಳಲ್ಲಿ ಕೇಂದ್ರೀಕೃತವಾಗಿದ್ದು ದೇಶದಾದ್ಯಂತ ಇರುವ ATL ಶಾಲೆಗಳಿಗೆ ಪ್ರಯಾಣಿಸುವುದು ಒಂದು ಅಡಚಣೆಯಾಗಿತ್ತು ಎಂದು ಗಮನಿಸಲಾಯಿತು, ಆದರೆ MoC ಪ್ರೋಗ್ರಾಂ ಇತ್ತೀಚೆಗೆ ಆನ್ಲೈನ್ ಮೆಂಟರಿಂಗ್–ಗಾಗಿ ಅವಕಾಶವನ್ನು ತೆರೆಯಿತು. ಇಷ್ಟರ ತನಕ 2,500 ಕ್ಕಿಂತಲೂ ಹೆಚ್ಚು ಮಾರ್ಗದರ್ಶಕರು, ಅಪಾರ ಸ್ವಯಂಪ್ರೇರಣೆಯಿಂದ, ಅತ್ಯುತ್ಸಾಹದಿಂದ ಮತ್ತು ವಚನ ಬದ್ಧತೆಯಿಂದ ಯುವ ಅನ್ವೇಷಕರನ್ನು ಮಾರ್ಗದರ್ಶಿಸುವ ನಿಟ್ಟಿನಲ್ಲಿ ತಮ್ಮ ಸೇವೆಗಳನ್ನು ವಿನಿಯೋಗಿಸುತ್ತಿದ್ದಾರೆ. ಅಷ್ಟುಮಾತ್ರವಲ್ಲ, ಇತ್ತೀಚಿನ ದಾಖಲೆಗಳ ಪ್ರಕಾರ, ಕಳೆದ ಕೆಲವು ತಿಂಗಳುಗಳಲ್ಲಿ MoCಗಳು 6,000 ಕ್ಕಿಂತ ಹೆಚ್ಚು ತಾಸುಗಳನ್ನು ಮೆಂಟರಿಂಗ್ ಮಾಡುವುದರಲ್ಲಿ ಕಳೆದಿದ್ದಾರೆ ಮತ್ತು 1,800 ಕ್ಕಿಂತ ಹೆಚ್ಚು ಸೆಷನ್ಗಳನ್ನು ನಡೆಸಿದ್ದಾರೆ.

MoC ನೆಟ್ವರ್ಕ್–ನೊಂದಿಗೆ ಒಳಗೂಡುವ ಮತ್ತು ಅದನ್ನು ಪ್ರೋತ್ಸಾಹಿಸುವ ಅಗತ್ಯವನ್ನು ಮನಗಂಡಿದ್ದು, ಮಾರ್ಗದರ್ಶಕ ಕಥೆಗಳನ್ನು

ಹಂಚಿಕೊಳ್ಳಲು, ಆವಿಷ್ಕಾರ-ಆಧಾರಿತ ಸಹಯೋಗವನ್ನು ಉತ್ತೇಜಿಸಲು ಮತ್ತು ಕ್ವೆರಿ ರೆಸಲ್ಯೂಷನ್-ಗಾಗಿ ಒಂದು ಹುರುಪಿನ ಸೋಶಿಯಲ್ ಮೀಡಿಯಾ ಆಧಾರಿತ ಸಮುದಾಯವನ್ನು ಅಭಿವೃದ್ಧಿಪಡಿಸಲಾಗಿದೆ. ಜಾಗೃತಿ ಮೂಡಿಸಲು ಮತ್ತು ಹೆಚ್ಚನ್ನು ಮಾಡುವಂತೆ ಮಾರ್ಗದರ್ಶಕರನ್ನು ಪ್ರೋತ್ಸಾಹಿಸಲು, NITI ಆಯೋಗ್ AIMನ ಸೋಶಿಯಲ್ ಮೀಡಿಯಾ ಹ್ಯಾಂಡಲ್ಸ್-ನಲ್ಲಿ ನಮ್ಮ MoCಗಳ ಮಾರ್ಗದರ್ಶಕ ಕಥೆಗಳನ್ನು ಕ್ರಮವಾಗಿ ಪ್ರಸ್ತುತಪಡಿಸಲಾಗುತ್ತಿದೆ. ಕಡಿಮೆ ಟರ್ನ್‌ಅರೌಂಡ್ ಕ್ವೆರಿ ರೆಸಲ್ಯೂಷನ್ ಸಿಸ್ಟಮ್ ಸಹಾಯದಿಂದ ಟ್ಯುಟೋರಿಯಲ್ ತೆಗೆದುಕೊಳ್ಳಲು, ಸೆಷನ್ಗಳನ್ನು ರೆಕಾರ್ಡ್ ಮಾಡಲು, ತಾಂತ್ರಿಕ ಚರ್ಚೆಗಳಲ್ಲಿ ಭಾಗವಹಿಸಲು, ATL InnoNet ಎಂಬ ಒಂದು ಪ್ರಬಲ ಮೆಂಟರಿಂಗ್ ಪೋರ್ಟಲ್, ಮೆಂಟರ್ ಆನ್-ಬೋರ್ಡಿಂಗ್ ಮತ್ತು ಆಕ್ಟಿವೇಷನ್-ಗಾಗಿ ಕಾರ್ಯತತ್ಪರವಾಗಿ ಸಹಾಯಮಾಡುತ್ತಿದೆ. ಇದಲ್ಲದೆ, ATL ವಿದ್ಯಾರ್ಥಿಗಳೊಂದಿಗೆ ಕೆಲಸ ಮಾಡಲು ಮತ್ತು ಅದೇ ಸಮಯದಲ್ಲಿ ATL ಆವಿಷ್ಕಾರದ ಕೇಂದ್ರವಾಗುತ್ತಿರುವ ನಿರೂಪಣೆಯನ್ನು ಪ್ರಚೋದಿಸಲು ಸಮುದಾಯವನ್ನು ಒಳಗೂಡಿಸಲು ಮಾರ್ಗದರ್ಶಕರಿಗೆ ಮಾಸಿಕ ಮಾರ್ಗದರ್ಶನ ಥೀಮ್ ಅನ್ನು ಪ್ರಾರಂಭಿಸಲಾಗಿದೆ. ಇತ್ತೀಚೆಗೆ, ದೇಶದಾದ್ಯಂತ ಎಂಟು ರಾಜ್ಯಗಳನ್ನು ಆವರಿಸುವ ಅನೇಕ ನಗರಗಳಲ್ಲಿ MoC ಮೀಟ್ಸ್ ಆಯೋಜಿಸಲಾಗಿತ್ತು, ಇದು ಅವರ ಸಮಸ್ಸೆಯಗಳ ಬಗ್ಗೆ ತಿಳಿದುಕೊಳ್ಳಲು, ಫೀಡ್-ಬ್ಯಾಕ್ ಪಡೆದುಕೊಳ್ಳಲು, ಸ್ಪಷ್ಟೀಕರಣಗಳನ್ನು ನೀಡಲು ಮತ್ತು ಪ್ರೋಗ್ರಾಂ ವಿಷಯದಲ್ಲಿ ಬಲವಾದ ಭಾವನೆಯನ್ನು ಮೂಡಿಸಲು ಆಯೋಜಿಸಲಾಗಿತ್ತು. ಸತತವಾಗಿ ಗಮನಿಸಲಾದಂತೆ, ಈ ಮೀಟ್ಸ್ ಒಂದು ಸಮಸ್ಯೆಯನ್ನು ಹಂಚಿಕೊಳ್ಳುವ ವೇದಿಕೆಯಾಗಿ ಆರಂಭಗೊಳ್ಳುತ್ತವೆ ಮತ್ತು ಎರಡು ತಾಸುಗಳ ಕಾಲಾವಧಿಯಲ್ಲಿ, ಎಬ್ಬಿಸಲಾದ ಸಮಸ್ಯೆಗಳನ್ನು ಮಾರ್ಗದರ್ಶಕರು ಬಗೆಹರಿಸಲು ಬಹಳವಾಗಿ ಪ್ರಯತ್ನಿಸುತ್ತಿರುವಾಗ ಇವು ಕ್ರಮೇಣ ಸಾಮೂಹಿಕವಾಗಿ ಪರಿಹಾರವನ್ನು ಕಂಡುಕೊಳ್ಳುವ ಅವಕಾಶವಾಗಿ ಮಾರ್ಪಡುತ್ತವೆ. ಇಂಥ ಎಲ್ಲ ಕ್ರಮಗಳು ಈ ಕಾರ್ಯಕ್ರಮದ ಯಶಸ್ಸನ್ನು ಸಮಗ್ರವಾಗಿ ಉತ್ತೇಜಿಸುತ್ತಿವೆ ಮತ್ತು ಇದು ಕ್ರಮೇಣ ಒಂದು ರಾಷ್ಟ್ರೀಯ ಚಳುವಳಿಯ ರೂಪವನ್ನು ಪಡೆಯುತ್ತಿದೆ.

ಮಾರ್ಗದರ್ಶಕರ ಪ್ರಯತ್ನಗಳ ಪರಿಣಾಮವಾಗಿ, ೦ಖಿಐ ವಿದ್ಯಾರ್ಥಿಗಳು ನವೀನತೆ ಅಥವಾ ಆವಿಷ್ಕಾರವನ್ನು ಗ್ರಹಿಸುವ ರೀತಿಯಲ್ಲಿ ಮಹತ್ತರ ಬದಲಾವಣೆಯಾಗಿದೆ ಎಂಬುದಂತೂ ನಿಜ. NITI ಆಯೋಗ್ AIMನ ಸೂಪರ್ ಮೆಂಟರ್ಸ್ ಎಂದು ಕರೆಯಲ್ಪಡುವ ದೇಶದ ವಾಣೀಜ್ಯೋದ್ಯಮ ಪರಿಸರ ವ್ಯವಸ್ಥೆಯಲ್ಲಿ ಹೆಸರುವಾಸಿಯಾಗಿರುವ ದೇಶದ ಕೆಲವು ಪ್ರಮುಖ ಮತ್ತು ಜನಪ್ರಿಯ ವೃತ್ತಿಪರರನ್ನೂ ಒಳಗೊಂಡಂತೆ MoCಗಳು, ರಾಷ್ಟ್ರ ನಿರ್ಮಾಣದ ಉತ್ಕಟ ಬಯಕೆಯಿಂದ ಕ್ರಮವಾಗಿ ಶಾಲೆಗಳಿಗೆ ಭೇಟಿ ನೀಡುತ್ತಿದ್ದಾರೆ ಮತ್ತು ವಿದ್ಯಾರ್ಥಿಗಳ ಪ್ರೋಜೆಕ್ಟ್-ಗಳಲ್ಲಿ ಅವರೊಂದಿಗೆ ಕೆಲಸ ಮಾಡುತ್ತಿದ್ದಾರೆ. ಅವರು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದ್ದಾರೆ ಮಾತ್ರವಲ್ಲ, ಆವಿಷ್ಕಾರದ ಉತ್ಪಾದಕತೆಯನ್ನು ಉತ್ತಮಗೊಳಿಸಲು, ಈ ಆವಿಷ್ಕಾರದ ಪರಿಸರ ವ್ಯವಸ್ಥೆಯಲ್ಲಿ ಕ್ರಮೇಣ ಜವಾಬ್ದಾರಿಯುತ ಹಾಗೂ ವಾಚಿಕ ಹೂಡಿಕೆದಾರರಾಗಲು ATL-ಇನ್-ಚಾರ್ಜ್ ಅವರನ್ನೂ ಸಂಪರ್ಕಿಸುತ್ತಾರೆ. ಈ ಕಾರ್ಯಕ್ರಮದ ಯಶಸ್ವಿ ಅನುಷ್ಠಾನದ ಮೂಲಕ ಮತ್ತು ಇದಕ್ಕೆ ದೊರೆತ ಪ್ರತಿಕ್ರಿಯೆಯ ಮೂಲಕ, ಕೊಡುಗೆ ನೀಡಲು ಯಾವಾಗಲೂ ಹುರುಪು ಇತ್ತು ಆದರೆ ಜನಸಾಮಾನ್ಯರ ಮೇಲೆ ಪ್ರಭಾವವನ್ನು ಬೀರಲು ಗೌರವ, ಜವಾಬ್ದಾರಿ ಮತ್ತು ಸಾಮರ್ಥ್ಯವನ್ನು ಒದಗಿಸುವಂಥ ಸುವ್ಯವಸ್ಥಿತ ಅವಕಾಶ ಮಾತ್ರ ಬೇಕಾಗಿತ್ತು ಎಂಬುದು ಅರ್ಥವಾಗಿದೆ. ಇದನ್ನು ಪೂರೈಸಲು ಈ ಕಾರ್ಯಕ್ರಮವು ಅನುವು ಮಾಡಿಕೊಟ್ಟಿತು.

ಮಾರ್ಗದರ್ಶಕರಂತೆ, ವಿದ್ಯಾರ್ಥಿಗಳ ಯೋಚನಾ ಧಾಟಿಯನ್ನು ವರ್ಧಿಸುವ ಮೂಲಕ ಶಾಲೆಯ ATL ಅನ್ನು ಆವಿಷ್ಕಾರದ ಕೇಂದ್ರವಾಗಿ ಮಾಡುವಲ್ಲಿ ಹಳೆಯ ವಿದ್ಯಾರ್ಥಿಗಳು ನಿಜವಾದ ಕೊಡುಗೆಯನ್ನು ನೀಡಬಲ್ಲರು.

**ಕೇಸ್ ಸ್ಟಡಿ: ಸಸ್ಟೈನಬಲ್ ಪಾರ್ಟನರ್ ನೆಟ್ವರ್ಕ್ – ಹಳೆಯ ವಿದ್ಯಾರ್ಥಿಯೊಂದಿಗೆ ಕೆಲಸ ಮಾಡುವುದು**

**ಶಾಲೆ: ATL ಗವರ್ನಮೆಂಟ್ ಸ್ಕೂಲ್ ಕ್ಲಸ್ಟರ್, ಚಂಡೀಗಢ**

ATL ಹಳೆಯ ವಿದ್ಯಾರ್ಥಿಗಳು ATLನ ಯಶಸ್ಸನ್ನು ಖಾತ್ರಿಪಡಿಸುವುದರಲ್ಲಿ ಅತ್ಯಂತ ಪ್ರಮುಖ ಪಾಲುದಾರರಾಗಿದ್ದಾರೆ. ನಾಲ್ಕು ಮಂದಿ ಮಾಜಿ–ATL ಅನ್ವೇಷಕರು ಇದನ್ನು ಸಾಬೀತುಪಡಿಸಿದ್ದಾರೆ. ಇವರು ಚಂಡೀಗಢದ ಬೇರೆ ಬೇರೆ ಸರಕಾರೀ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು ಮತ್ತು ಈ ಬಳಿಕ ತಮ್ಮ ನಗರದಲ್ಲಿ ಅಂತರ್ಗತ ATL ಸಮುದಾಯವನ್ನು ರಚಿಸಲು ಒಗ್ಗೂಡಿದ್ದಾರೆ.

ATLನ ಈ ಎಲ್ಲ ಹಳೆಯ ವಿದ್ಯಾರ್ಥಿಗಳು ಈಗ ವಿಭಿನ್ನ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಮತ್ತು ಪಂಜಾಬ್ ಇಂಜಿನಿಯರಿಂಗ್ ಕಾಲೇಜ್ (PEC) ಮತ್ತು ಕಾಲೇಜ್ ಆಫ್ ಇಂಜಿನಿಯರಿಂಗ್ ಆಂಡ್ ಟೆಕ್ನಾಲಜಿ (CCET) ಕಾಲೇಜಿನ ಇತರ ಸೆಕೆಂಡ್ ಇಯರ್ ಇಂಜಿನಿಯರಿಂಗ್ ವಿದ್ಯಾರ್ಥಿಗಳೊಂದಿಗೆ ಸೇರಿಕೊಂಡು ATL ಮಾರ್ಗದರ್ಶಕರ ಗುಂಪನ್ನು ರಚಿಸಲು ಪ್ರಯತ್ನಿಸುತ್ತಿದ್ದಾರೆ. ಇಂಥ ಹನ್ನೆರಡು ವಿದ್ಯಾರ್ಥಿಗಳಿಗೆ, CCET ಎಲೆಕ್ಟ್ರಾನಿಕ್ಸ್ ಇಲಾಖೆಯ ಮುಖ್ಯಸ್ಥರಾಗಿರುವ ಡಾ. ಸುನಿಲ್ ಕುಮಾರ್ ಸಿಂಗ್ ಅವರು ಮಾರ್ಗದರ್ಶನ ನೀಡುತ್ತಿದ್ದಾರೆ ಮತ್ತು ಇವರು ಆ ವಿದ್ಯಾರ್ಥಿಗಳನ್ನು ATL ಗಾಗಿ ನಿಪುಣ ಮಾರ್ಗದರ್ಶಕರಾಗಲು ತರಬೇತಿ ನೀಡುವ ಹೊಣೆಯನ್ನು ಹೊತ್ತಿದ್ದಾರೆ.

ಈ ಎಲ್ಲಾ ATL ಮಾರ್ಗದರ್ಶಕರು ತಮ್ಮನ್ನು ಏರೋಸ್ಪೇಸ್, 3D ಪ್ರಿಂಟಿಂಗ್ ಮತ್ತು ರೋಬೋಟಿಕ್ಸ್ ಎಂಬ ಮೂರು ಗುಂಪುಗಳಾಗಿ ವಿಭಾಗಿಸಿಕೊಂಡಿದ್ದಾರೆ ಮತ್ತು ಗವರ್ನಮೆಂಟ್ ಸ್ಕೂಲ್ ಸೆಕ್ಟರ್ 16, ಗವರ್ನಮೆಂಟ್ ಸ್ಕೂಲ್ ಸೆಕ್ಟರ್ 19, ಗವರ್ನಮೆಂಟ್ ಸ್ಕೂಲ್ ಸೆಕ್ಟರ್ 37, ಗವರ್ನಮೆಂಟ್ ಸ್ಕೂಲ್ ಡಾಡು ಮಜ್ರಾ ಮತ್ತು ರಯಾನ್ ಇಂಟರ್ನ್ಯಾಷನಲ್ ಸ್ಕೂಲ್, ಚಂಡೀಗಢ ಅನ್ನೂ ಸೇರಿಸಿ ತಮ್ಮ ಸಮುದಾಯದ ಐದು ATL ಶಾಲೆಗಳೊಂದಿಗೆ ಇವರು ಕೆಲಸ ಮಾಡುತ್ತಿದ್ದಾರೆ.

ಈ ಯುವ ಮಾರ್ಗದರ್ಶಕರು ಸಮರ್ಥನೀಯ ಕ್ಯಾಲೆಂಡರನ್ನು ರಚಿಸಿದ್ದಾರೆ, ಇದರಲ್ಲಿ ಪ್ರತಿ ಶನಿವಾರ ಅವರು ವಿವಿಧ ತಂತ್ರಜ್ಞಾನಗಳ ವಿಷಯದಲ್ಲಿ ಮೂರು ತಾಸುಗಳ ಸೆಷನ್ ನಡೆಸಲು ATL ಶಾಲೆಗಳಿಗೆ ಭೇಟಿ ನೀಡುತ್ತಾರೆ ಮತ್ತು ಪ್ರತಿ ಶಾಲೆಯು ತಿಂಗಳಿಗೆ ಮೂರು ಶನಿವಾರದ ಸೆಷನ್ ಗಳನ್ನು ಪಡೆಯುತ್ತದೆ-ಮೇಲೆ ತಿಳಿಸಲಾದ ಕ್ಷೇತ್ರಗಳಲ್ಲಿ ಪ್ರತಿಯೊಂದರಲ್ಲಿ ಒಂದು.







## ಸಾರಾಂಶ

ATLನ ಯಶಸ್ಸಿಗೆ ಮಾರ್ಗದರ್ಶನ ನೀಡುವುದು ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ಈ ಅಧ್ಯಾಯವು ಚರ್ಚಿಸಿತು. ಮುಂದಿನ ಅಧ್ಯಾಯವು ATL ಮುನ್ನೆಚ್ಚೆಯ ಫಲಿತಾಂಶವನ್ನು ಮತ್ತಷ್ಟು ಹೆಚ್ಚಿಸಲು ಸಂಸ್ಥೆಗಳು ನಿರ್ವಹಿಸಬಹುದಾದ ಪಾತ್ರದ ಕುರಿತು ಒತ್ತಿಹೇಳುತ್ತದೆ.

CHAPTER 6

# ಪ್ರಭಾವಶಾಲಿ ಅಟಲ್ ಟಿಂಕರಿಂಗ್ ಲ್ಯಾಬಿಗಾಗಿ ಸಹಯೋಗ

ATL ಮುನ್ನೆಜ್ಜೆಯ ಯಶಸ್ವಿಕರ ಅನುಷ್ಠಾನಕ್ಕೆ ಹಲವಾರು ಸಾಂಸ್ಥಿಕ ಪಾಲುದಾರರು ಒಟ್ಟುಗೂಡಿ ಆವಿಷ್ಕಾರ ಮತ್ತು ಕಲಿಕೆಯ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವುದು ಅಗತ್ಯಪಡಿಸುತ್ತದೆ, ಇದರಿಂದಾಗಿ ಪಾಲುದಾರ ಸಂಸ್ಥೆಗಳು ಸರಿಯಾದ ಪ್ರಮಾಣದ ಬೆಂಬಲ ರಚನೆಗಳನ್ನು ಒಟ್ಟಿಗೆ ಒದಗಿಸಸಾಧ್ಯವಾಗುತ್ತದೆ. ಈ ಮುನ್ನೆಜ್ಜೆಯ ಬಗ್ಗೆ ಸಮುದಾಯದಲ್ಲಿ ಸಕಾರಾತ್ಮಕ ಭಾವನೆಯನ್ನು ಮೂಡಿಸುವುದು, ಪ್ರಭಾವವನ್ನು ಉಂಟುಮಾಡಲು ಒಂದು ಪ್ರಾಮುಖ್ಯ ಅಂಶವಾಗಿದೆ.

ನವೀನತೆ ಅಥವಾ ಆವಿಷ್ಕಾರದ ಸಮುದಾಯ ಕೇಂದ್ರವಾಗಿ ತನ್ನನ್ನು ಸ್ಥಾಪಿಸಿಕೊಳ್ಳುವುದರಲ್ಲಿ ATLಗೆ ಸಹಾಯ ಮಾಡುವುದರಲ್ಲಿ ಸಂಸ್ಥೆಗಳು ಪ್ರಮುಖ ಕೊಡುಗೆದಾರರಾಗಿ ಕಾರ್ಯನಡಿಸಬಹುದು. ATL ನಲ್ಲಿ ತೆಗೆದುಕೊಳ್ಳಲಾಗುವ ಆವಿಷ್ಕಾರದ ಮುನ್ನೆಜ್ಜೆಗಳ ಕುರಿತು ಮಾರ್ಗದರ್ಶನದ ನೀಡುವ ಮೂಲಕ ಮತ್ತು ಜಾಗೃತಿ ಮೂಡಿಸುವ ಮೂಲಕ ಸಂಸ್ಥೆಗಳು ATLಗೆ ಬೆಂಬಲ ನೀಡಬಹುದು. ಕಾರ್ಪೊರೇಟ್ ಸಂಸ್ಥೆಗಳು ಸ್ಟಾರ್ಟ್-ಅಪ್ಸ್, ಮೈಕ್ರೋ, ಸ್ಮಾಲ್ ಅಂಡ್ ಮೀಡಿಯಮ್ ಎಂಟರ್ಪ್ರೈಸಸ್ (MSMEs) ಹಾಗೂ ATL ವಿದ್ಯಾರ್ಥಿಗಳನ್ನು ಮುಂದುವರಿದ ತಂತ್ರಜ್ಞಾನಕ್ಕೆ ಎಕ್ಸ್‌ಪೋಸ್ ಮಾಡಬಹುದಾದ ದೊಡ್ಡ ಕಾರ್ಪೊರೇಟ್ಸ್ ಅನ್ನು ಒಳಗೊಂಡಿರಬಹುದು. ಇದಲ್ಲದೆ, AIM ಕೈಗೊಂಡ ಭಾರೀ ಪ್ರಯತ್ನಗಳ ಕಾರಣ ಉದ್ಯಮಶೀಲತೆಯು ಅತಿ ವೇಗವಾಗಿ ಮುಂದುವರಿದಿರುವುದರಿಂದ ಸಫಲರಾದ ಆರಂಭದ ಸಂಸ್ಥಾಪಕರು ಮಾರ್ಗದರ್ಶಕರೋಪಾದಿ ಯುವ ATL ಅನ್ವೇಷಕರೊಂದಿಗೆ ಹಂಚಿಕೊಳ್ಳಲು ಮತ್ತು ಶಿಕ್ಷಣ ನೀಡಲು ಅವರ ಬಳಿ ಮಹಾನ್ ಕಥೆಗಳಿವೆ. ಅಷ್ಟುಮಾತ್ರವಲ್ಲ, ಸ್ಥಳೀಯ ಹಾಗೂ ಪ್ರಾದೇಶಿಕ ತಯಾರಕರು ಸಹ ವರ್ಕ್-ಶಾಪ್ಗಳು ಮತ್ತು ಟ್ರೈನಿಂಗ್ ಸೆಷನ್ಸ್ ಮೂಲಕ ATL ವಿದ್ಯಾರ್ಥಿಗಳಿಗೆ ವ್ಯಾಪಕ ಬೆಂಬವನ್ನು ಒದಗಿಸಬಹುದು.

ಇದಲ್ಲದೆ, ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್ಗಳು, ITIಗಳಂಥ ಶೈಕ್ಷಣಿಕ ಸಂಸ್ಥೆಗಳು ಮತ್ತು ಇತರ ಶಿಕ್ಷಣ ಸಂಸ್ಥೆಗಳು, ಟಿಂಕರಿಂಗ್, ತಯಾರಿಕೆಯಂಥ ಪರಿಕಲ್ಪನೆಗಳನ್ನು ವಿದ್ಯಾರ್ಥಿಗಳು ಬೇಗನೆ ಗ್ರಹಿಸಲು ಸಹಾಯ ಮಾಡಬಹುದು ಮತ್ತು ಅದೇ ಸಮಯದಲ್ಲಿ ಅವರು ತಮ್ಮ ಕಲಿಕೆಯ ರೇಖೆಯನ್ನು ವೇಗಗೊಳಿಸಲು ನೆರವು ನೀಡಬಹುದು. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ (IISc), ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (IITs), ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ (IIMs)ಗಳಂಥ ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಇತರ ಪ್ರತಿಷ್ಠಿತ ಸಂಸ್ಥೆಗಳು ಸಹ, ತಮ್ಮ ಬೋಧನಾ ವಿಭಾಗದ ಪರಿಣಿತ ಸದಸ್ಯರು ಮತ್ತು ಸಂಶೋಧನಾ ತಂಡಗಳ ಸಹಾಯದಿಂದ ಮೆಂಟರಿಂಗ್ ನಡೆಸುವ ಮೂಲಕ ನೆರವು ನೀಡಸಾಧ್ಯವಿದೆ. ಇದು ಒಂದು ದೃಢವಾದ ಆವಿಷ್ಕಾರದ ಮೌಲ್ಯ ಸರಪಳಿಯನ್ನು ರೂಪಿಸುತ್ತದೆ ಮತ್ತು ಇದರಲ್ಲಿ ಜೊತೆಗೂಡುವ ಪರಿಸರ ವ್ಯವಸ್ಥೆಯ ಪಾಲುದಾರರು ಉತ್ಪಾದನಾ ಹಂತದಲ್ಲಿರುವವರಿಗೆ ಇನ್ನೂ ನಿಕಟವಾದ ಬೆಂಬಲವನ್ನು ನೀಡಬಲ್ಲರು ಮತ್ತು ಈ ಮೂಲಕ ಸಮರ್ಥನೀಯ ಭಾರತೀಯ ಆವಿಷ್ಕಾರ ಪರಿಸರ ವ್ಯವಸ್ಥೆಯು ಸೃಷ್ಟಿಯಾಗುತ್ತದೆ.

ಈ ಸಂಸ್ಥೆಗಳಲ್ಲಿ ಹಲವಾರು ಸಂಸ್ಥೆಗಳು, ವಿದ್ಯಾರ್ಥಿಗಳಿಗೋಸ್ಕರ ಒಂದು ಫಲದಾಯಕ ATL ಪ್ರಯಾಣವನ್ನು ರೂಪಿಸುವುದರಲ್ಲಿ ಗಮನಾರ್ಹ ಪಾತ್ರವನ್ನು ನಿರ್ವಹಿಸಬಲ್ಲವು.

ಈ ಮೇಲೆ ವಿವರಿಸಲಾದಂತೆ ಬಾಹ್ಯ ಪಾಲುದಾರರಿಂದ ಒದಗಿಸಲ್ಪಡಬಹುದಾದ ಬೆಂಬಲವನ್ನೂ ಮೀರಿ, ಕೆಲವೊಂದು ಶಾಲೆಗಳಿಗೆ ಹೆಚ್ಚುವರಿಯಾದ ಜಾಗರೂಕ ಬೆಂಬಲ ಮತ್ತು ಮಾರ್ಗದರ್ಶನದ ಅಗತ್ಯವಿರಬಹುದು. ಇಂಥ ಸಂದರ್ಭಗಳಲ್ಲಿ ಸಾಂಸ್ಥಿಕ ಪಾಲುದಾರರು ATL ದತ್ತುಸ್ವೀಕಾರದ ಮೂಲಕ ಪ್ರಮುಖ ಕೊಡುಗೆಯನ್ನು ಅಂದರೆ ಅತ್ಯಧಿಕ ಸಹಾಯವನ್ನು ನೀಡಬಹುದು-ವಿಶೇಷವಾಗಿ ಸರಕಾರಿ ಶಾಲೆಗಳು ಅಥವಾ ಸುಧಾರಿತ ಮೂಲಸೌಕರ್ಯಗಳಿಗೆ ಹೆಚ್ಚಿನ ಅವಕಾಶವಿಲ್ಲದಿರುವುದರಿಂದ ATL ಮುನ್ನೆಜ್ಜೆಯ ಅನುಷ್ಠಾನದ ಗುಣಮಟ್ಟದ ಮೇಲೆ ಪರಿಣಾಮ ಬೀರಬಹುದಾದ ಎರಡನೆಯ/ಮೂರನೆಯ ಶ್ರೇಣಿಯ ನಗರಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಇರುವ ಶಾಲೆಗಳ ವಿಷಯದಲ್ಲಿ ಅವರು ಹೀಗೆ ಮಾಡಬಹುದು. ATL ದತ್ತುಸ್ವೀಕಾರಕ್ಕಾಗಿ AIM ಸ್ಪಷ್ಟವಾದ ಮಾರ್ಗದರ್ಶನಗಳನ್ನು ಸ್ಥಾಪಿಸಿದ್ದು, ಈ ಅರ್ಥಪೂರ್ಣ ಕೊಡುಗೆಯನ್ನು ಮಾಡಲು ಬಯಸುವಂಥ ಯಾವುದೇ ಸಂಸ್ಥೆಯು ಈ ಮಾರ್ಗದರ್ಶನಗಳನ್ನು ಅಳವಡಿಸಿಕೊಳ್ಳಬಹುದು.

ATL ಶಾಲೆಗಳನ್ನು ದತ್ತುಸ್ವೀಕರಿಸುವಂಥ ಪಾಲುದಾರರ ಪ್ರಧಾನ ಜವಾಬ್ದಾರಿಯಲ್ಲಿ ಈ ಮುಂದಿನ ವಿಷಯಗಳು ಒಳಗೂಡಿವೆ:

- ಶಾಲೆಯಲ್ಲಿ ATL ಸಂಬಂಧಿತ ಚಟುವಟಿಕೆಗಳನ್ನು ನಿರ್ವಹಿಸಲು, ATL ಇನ್-ಚಾರ್ಜ್ಗೆ ಬೆಂಬಲ ನೀಡಲು ಮತ್ತು ಶಾಲೆಯಲ್ಲಿ ATL ಮುನ್ನೆಜ್ಜೆಯ ಯಶಸ್ವಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಒಬ್ಬ ರಿಸೋರ್ಸ್ ಪರ್ಸನ್ (RP) ಅನ್ನು ನೇಮಿಸುವುದು. ATL ಇನ್-ಚಾರ್ಜ್ ಅವರೊಂದಿಗೆ ಜೊತೆಗೂಡಿ RPಗಳು ಶಿಕ್ಷಕ ತರಬೇತಿ ಕಾರ್ಯಕ್ರಮಗಳು, ವಿದ್ಯಾರ್ಥಿಗಳ ವರ್ಕ್-ಶಾಪ್ಸ್ ಮತ್ತು ಬೂಟ್-ಕ್ಯಾಂಪ್ಸ್ ಅನ್ನು ಸುಗಮಗೊಳಿಸಬೇಕು. ಅವರು ATL ಬಗ್ಗೆ ಜಾಗೃತಿ ಮೂಡಿಸಲು ಸಮುದಾಯದ ಹೊರಗಿನ ಸೆಷನ್ಗಳನ್ನು ಸಹ ನಡೆಸಬೇಕು.

- ATL ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಮೆಂಟರಿಂಗ್ ಸೆಷನ್ಗಳನ್ನು ನಡೆಸಶಕ್ತರಾಗಿರುವಂಥ ಸ್ವಯಂ ಸೇವಕರನ್ನು ನಿರಂತರವಾಗಿ ಒದಗಿಸುವುದು ಮತ್ತು ಇದು ಅಂತಿಮವಾಗಿ ತಾಂತ್ರಿಕ ಆವಿಷ್ಕಾರಗಳ ಸೃಷ್ಟಿಗೆ ಮುನ್ನಡೆಸುತ್ತದೆ.
- ಪಾಲುದಾರರ ದ್ವಿತೀಯ ಜವಾಬ್ದಾರಿಗಳಲ್ಲಿ ಈ ಮುಂದಿನ ವಿಷಯಗಳು ಒಳಗೊಂಡಿವೆ:
- ದತ್ತುಸ್ವೀಕಾರಮಾಡಿದ ATLಗಾಗಿ ಕಾರ್ಯಕ್ರಮಗಳನ್ನು/ಸ್ಪರ್ಧೆಗಳನ್ನು/ವಸ್ತುಪ್ರದರ್ಶನಗಳನ್ನು ನಡೆಸುವುದು ಮತ್ತ ಅದೇ ಸಮಯದಲ್ಲಿ ವಿವಿಧ ಆವಿಷ್ಕಾರ ಕಾರ್ಯಕ್ರಮಗಳಲ್ಲಿ/ಸ್ಪರ್ಧೆಗಳಲ್ಲಿ, ಚಾಲೆಂಜುಗಳಲ್ಲಿ ಭಾಗವಹಿಸುವಂತೆ ATL ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು.
- ತಮ್ಮ ಸೋಶಿಯಲ್ ಮೀಡಿಯಾ ಉಪಸ್ಥಿತಿಯನ್ನು ಹೆಚ್ಚಿಸಲು ATL ಶಾಲೆಗಳಿಗೆ ಬೆಂಬಲ ನೀಡುವುದು
- ವರ್ಕ್‌–ಶಾಪ್ಗಳನ್ನು ಆಯೋಜಿಸುವುದು: ವಿದ್ಯಾರ್ಥಿಗಳು ಆವಿಷ್ಕಾರದ ಬಗ್ಗೆ ಹೆಚ್ಚು ಉತ್ತಮವಾಗಿ ಅರ್ಥಮಾಡಿಕೊಳ್ಳಲು ATL ವಿದ್ಯಾರ್ಥಿಗಳಿಗೋಸ್ಕರ ವಿವಿಧ ಮುಖ್ಯ ವಿಷಯಗಳ ವರ್ಕ್‌–ಶಾಪ್ಗಳನ್ನು ಆಯೋಜಿಸಬಹುದು.
- ಮಾರ್ಗದರ್ಶನ: ಪಾಲುದಾರರು ಮೆಂಟರಿಂಗ್ ಕಾರ್ಯಕ್ರಮಗಳನ್ನು ನಡೆಸಬಹುದು ಮತ್ತು ಈ ಸಮಯದಲ್ಲಿ ಅನುಭವವಿರುವ ವೃತ್ತಿಪರರು ಯುವ ಅನ್ವೇಷಕರೊಂದಿಗೆ ಸಮಯ ಕಳೆಯಬಹುದು ಹಾಗೂ ತಮ್ಮ ನವೀನ ಐಡಿಯಾಗಳನ್ನು ಮುಂದುವರಿಸುವುದರಲ್ಲಿ ಅವರಿಗೆ ಸಹಾಯ ಮಾಡಬಹುದು ಮತ್ತು ಸಲಹೆ ನೀಡಬಹುದು.
- ಟ್ರೈನಿಂಗ್ ಸೆಷನ್ಸ್: ATL ಕಾರ್ಯಾಚರಣೆಯ ಬಗ್ಗೆ ATL-ಇನ್–ಚಾರ್ಜ್ ಅವರಿಗೆ ಶಿಕ್ಷಣ ನೀಡಲಿಕ್ಕಾಗಿ ವಿವಿಧ ATL ಶಾಲೆಗಳಲ್ಲಿ ಪಾಲುದಾರರು ಶಿಕ್ಷಕರ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಬಹುದು ಮತ್ತು ಲ್ಯಾಬ್ನಲ್ಲಿ ಇರುವಂಥ ಬೇರೆ ಬೇರೆ ಉಪಕರಣಗಳ ಕುರಿತು ನೇರವಾದ ಭಾಗವಹಿಸುವಿಕೆಯ ಮೂಲಕ ಕಲಿಯುವಂತೆ ಮಾಡಬಹುದು.

ಹಾಗಿದ್ದರೂ, ಪಾಲುದಾರರು ಒದಗಿಸಬಹುದಾದ ಬೆಂಬಲವು ಹಣಕಾಸೇತರ ಅಂಶಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ, ಅವರು ATLಗೆ ಸಂಬಂಧಿಸಿದ ವಿಸ್ತರಣೆಗಾಗಿ, ಬಂಡವಾಳಕ್ಕಾಗಿ ಮತ್ತು ಇತರ ಕಾರ್ಯಾಚರಣಾ ವೆಚ್ಚಗಳಿಗಾಗಿ ಹಣಕಾಸಿನ ಸಹಾಯವನ್ನೂ ಒದಗಿಸಬಹುದು.

ಕಾರ್ಪೊರೇಟ್ ಸೋಶಿಯಲ್ ರೆಸ್ಪಾನ್ಸಿಬಲಿಟಿ (CSR)[10] ಸಂಸ್ಥೆಯು ಒಳ್ಳೇ ಮಾರ್ಗವನ್ನು ಒದಗಿಸುತ್ತದೆ, ಇದರ ಸಹಾಯದಿಂದ ಕಾರ್ಪೊರೇಟ್ಸ್ ATLಗೆ ಬೆಂಬಲವನ್ನು ಒದಗಿಸಬಹುದು ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಮಹತ್ತರವಾದ ಕೊಡುಗೆಯನ್ನು ನೀಡಬಹುದು.

[10] CSR ಎಂದರೇನು ? ವಿಶ್ವಸಂಸ್ಥೆಯ ಕೈಗಾರಿಕಾ ಅಭಿವೃದ್ಧಿ ಸಂಸ್ಥೆ

ATL ಅನ್ನು ನಡೆಸಲು ಹಲವಾರು ಕಾರ್ಪೋರೇಟ್ ಪಾಲುದಾರರು NITI ಆಯೋಗ್ ಅಡಿಯಲ್ಲಿ AIMಗೆ ಬೆಂಬಲ ನೀಡುತ್ತಾರೆ. ಇಂಟೆಲ್, ಐಬಿಎಮ್, ಡೆಲ್, ಲರ್ನಿಂಗ್ ಲಿಂಕ್ಸ್ ಫೌಂಡೇಶನ್, ಎಫ್‌ಐಸಿಇ, ಕೆಪಿಐಟಿ, ಮೈಕ್ರೊಸಾಫ್ಟ್, ನೆಟ್ವರ್ಕ್ ಕ್ಯಾಪಿಟಲ್, ಎಸ್‌ಎಪಿ, ಸ್ಟ್ರಾಟಾಸಿಸ್, ಟಿಜಿಇಎಲ್‌ಎಫ್, ಎಐಸಿಟಿಇ, ವರ್ಕ್–ಬೆಂಚ್ ಪ್ರೋಜೆಕ್ಟ್, ಮೇಕರ್ಸ್ ಅಸಿಲಮ್, ಟಿ–ವರ್ಕ್ಸ್, ಎನ್ಯೂಬ್ ಲ್ಯಾಬ್ಸ್ ಮತ್ತು ದಿ ಬೆಟರ್ ಇಂಡಿಯಾಗಳನ್ನೂ ಒಳಗೊಂಡು AIMನ ಪಾಲುದಾರರು ಮತ್ತು ಇನ್ನು ಅನೇಕ ಸಂಸ್ಥೆಗಳು, ATL ಪರಿಸರ ವ್ಯವಸ್ಥೆಯನ್ನು ಬಲಪಡಿಸುವುದರಲ್ಲಿ ಮತ್ತು ಇದನ್ನು ಯಶಸ್ವಿಕರವಾದ ರಾಷ್ಟ್ರವ್ಯಾಪಿ ಹಸ್ತಕ್ಷೇಪವಾಗಿ ಮಾಡುವುದರಲ್ಲಿ ತಮ್ಮ ಬೆಂಬಲ ಮತ್ತು ವಚನ ಬದ್ಧತೆಯನ್ನು ರುಜುಪಡಿಸಿವೆ. ಇವು ಜೊತೆಗೂಡಿ ಭಾರತ ದೇಶದಾದ್ಯಂತ ಇರುವ ನೂರಾರು ATLಗಳನ್ನು ದತ್ತುಸ್ವೀಕರಿಸಿವೆ ಮತ್ತು ATL ಕಾರ್ಯಾಚರಣೆಯನ್ನು ಸಕ್ರಿಯವಾಗಿ ಬೆಂಬಲಿಸುತ್ತಿವೆ. ಇವು ಈ ಕೆಳಗಿನ ಕ್ಷೇತ್ರಗಳಲ್ಲಿ ಸಹಯೋಗದಿಂದ ಬೆಂಬಲವನ್ನು ನೀಡುವ ಮೂಲಕ ATL ಪರಿಸರ ವ್ಯವಸ್ಥೆಯನ್ನು ಬಲಪಡಿಸುತ್ತವೆ:

1. ವರ್ಕ್–ಶಾಪ್ಗಳನ್ನು ಸಂಘಟಿಸುವ ಮೂಲಕ: ATL ವಿದ್ಯಾರ್ಥಿಗಳಿಗೆ ವಿವಿಧ ಮುಖ್ಯ ವಿಷಯಗಳ ಮೇಲೆ ವರ್ಕ್–ಶಾಪ್ಗಳನ್ನು AIMನ ಕಾರ್ಪೋರೇಟ್ ಪಾಲುದಾರರು ಆಯೋಜಿಸುತ್ತಾರೆ ಮತ್ತು ಇದು ವಿದ್ಯಾರ್ಥಿಗಳಿಗೆ ನವೀನತೆ ಅಥವಾ ಆವಿಷ್ಕಾರವನ್ನು ಉತ್ತಮ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

2. ಮಾರ್ಗದರ್ಶಕರ ಕಾರ್ಯಕ್ರಮಗಳು: ಪಾಲುದಾರರು ಮೆಂಟರಿಂಗ್ ಕಾರ್ಯಕ್ರಮಗಳನ್ನು ನಡೆಸುತ್ತಾರೆ ಮತ್ತು ಈ ಸಮಯದಲ್ಲಿ ಅನುಭವವಿರುವ ವೃತ್ತಿಪರರು ಯುವ ಅನ್ವೇಷಕರೊಂದಿಗೆ ಸಮಯ ಕಳೆಯುತ್ತಾರೆ ಹಾಗೂ ತಮ್ಮ ನವೀನ ಐಡಿಯಾಗಳನ್ನು ಮುಂದುವರಿಸುವುದರಲ್ಲಿ ಅವರಿಗೆ ಸಹಾಯ ಮಾಡುತ್ತಾರೆ ಮತ್ತು ಸಲಹೆ ನೀಡುತ್ತಾರೆ.

3. ಟ್ರೈನಿಂಗ್ ಸೆಷನ್ಸ್: ATL ಕಾರ್ಯಾಚರಣೆಯ ಬಗ್ಗೆ ATL-ಇನ್–ಚಾರ್ಜ್ ಅವರಿಗೆ ಶಿಕ್ಷಣ ನೀಡಲಿಕ್ಕಾಗಿ ವಿವಿಧ ATL ಶಾಲೆಗಳಲ್ಲಿ ಪಾಲುದಾರರು ಶಿಕ್ಷಕರ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುತ್ತಾರೆ ಮತ್ತು ಲ್ಯಾಬ್ನಲ್ಲಿ ಇರುವಂಥ ಬೇರೆ ಬೇರೆ ಉಪಕರಣಗಳ ಕುರಿತು ನೇರವಾದ ಭಾಗವಹಿಸುವಿಕೆಯ ಮೂಲಕ ಕಲಿಯುವಂತೆ ಮಾಡುತ್ತಾರೆ.

4. ಕೆಲವು ಶಾಲೆಗಳಲ್ಲಿ ATL ಅನ್ನು ಸ್ಥಾಪಿಸುವುದು: ಶಾಲೆಗಳಲ್ಲಿ ATL ಅನ್ನು ಸ್ಥಾಪಿಸಲು ಸಹಾಯ ಮಾಡಲಿಕ್ಕಾಗಿ ಹಲವಾರು ಪಾಲುದಾರರು ಇತ್ತೀಚಿಗೆ AIMನೊಂದಿಗೆ ಸಹಭಾಗಿಯಾಗಿದ್ದಾರೆ. ATL ಆವಿಷ್ಕಾರದ ಪ್ರಯಾಣವನ್ನು ಶೀಘ್ರಗೊಳಿಸಲಿಕ್ಕಾಗಿ ಇವರು ಕಾರ್ಯ ಯೋಜನೆ, ವಿದ್ಯಾರ್ಥಿ ದಾಖಲಾತಿ, ಹಣಕಾಸು ನಿರ್ವಹಣೆ ಇನ್ನು ಮುಂತಾದ ವಿಷಯಗಳಲ್ಲಿ ಶಾಲೆಯ ಪ್ರಿನ್ಸಿಪಾಲರೊಂದಿಗೆ ಮತ್ತು ATL-ಇನ್–ಚಾರ್ಜ್ ಜೊತೆಗೆ ಕೆಲಸಮಾಡುತ್ತಾರೆ.

5. ಮಾನವ ಸಂಪನ್ಮೂಲಗಳನ್ನು ಒದಗಿಸುವುದು: ಕೆಲವು AIM ಪಾಲುದಾರರು ATLಗೆ ತರಬೇತಿ ಪಡೆದ, ಸಮರ್ಪಿತ ಮಾನವ ಸಂಪನ್ಮೂಲಗಳನ್ನು ಸಹ ಒದಗಿಸುತ್ತಾರೆ ಮತ್ತು ಈ ಮೂಲಕ ಒಂದು ಉತ್ತಮ ಆವಿಷ್ಕಾರದ ಪರಿಸರ ವ್ಯವಸ್ಥೆಯನ್ನು ರಚಿಸುವುದರಲ್ಲಿ ಶಾಲೆಗೆ ಸಹಾಯ ಮಾಡುತ್ತಾರೆ.

ತನ್ನ ಎಲ್ಲ ಪಾಲುದಾರರು ಒಗ್ಗಟ್ಟಿನಿಂದ ಕೆಲಸ ಮಾಡುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು AIM ಅವರೊಂದಿಗೆ ನಿಕಟವಾಗಿ ಕೆಲಸ ಮಾಡುತದೆ. ಹಾಗೆಯೇ ಸಾದಿಸಲು ಬಯಸಿದ ಫಲಿತಾಂಶಗಳಲಿ ಏಕರೂಪತೆಯನು. ಕಾಪಾಡಿಕೊಳುತದೆ.



*NITI ಆಯೋಗ್ನ ಸಿಇಒ ಆಗಿರುವ ಶ್ರೀ ಅಮಿತಾಬ್ ಕಾಂತ್ ಅವರು ಎಲ್ಲಾ ATL ಪಾಲುದಾರರು ಮತ್ತು ಮಾರ್ಗದರ್ಶಕರ ಪ್ರಯತ್ನಗಳನ್ನು ಗಣ್ಯಮಾಡುತ್ತಿರುವುದು*

## ಸಾರಾಂಶ

ಈ ಅಧ್ಯಾಯವು ವಿವಿಧ ಬೆಂಬಲ ಕಾರ್ಯವಿಧಾನಗಳ ಮೂಲಕ ATLಗೆ ಸಹಾಯ ಮಾಡುವುದರಲ್ಲಿ ಮತ್ತು ಇದರಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ತಮ್ಮ ನೈಜ ಸಾಮರ್ಥ್ಯವನ್ನು ತಲಪುವಂತೆ ಮಾಡುವುದರಲ್ಲಿ ಸಾಂಸ್ಥಿಕ ಸಹಯೋಗಗಳ ಮಹತ್ವವನ್ನು ಚರ್ಚಿಸಿತು.

ಮುಂದಿನ ಅಧ್ಯಾಯವು ATL ಪ್ರಭಾವವನ್ನು ಅಳೆಯಲು ಮತ್ತು ಸರಿಯಾದ ದಿಕ್ಕಿನಲ್ಲಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಖಚಿತಪಡಿಸಿಕೊಳ್ಳಲು ಮೇಲ್ವಿಚಾರಣಾ ಚೌಕಟ್ಟನ್ನು ವಿವರಿಸುತ್ತದೆ.

CHAPTER 7

# ಒಂದು ಅಟಲ್ ಟಿಂಕರಿಂಗ್ ಲ್ಯಾಬಿನ ಯಶಸ್ಸನ್ನು ಅಳೆಯುವುದು

ಒಳ್ಳೆಯ ಆಡಳಿತ ಮತ್ತು ನಿಯಮಿತವಾದ ಮೇಲ್ವಿಚಾರಣೆ ಇವೆರಡೂ ಅತಿ ಪ್ರಾಮುಖ್ಯವಾಗಿವೆ ಮತ್ತು ಪ್ರೋಜೆಕ್ಟ್ ಮ್ಯಾನೇಜ್ಮೆಂಟ್ ಮತ್ತು ಯಾವುದೇ ಹೊಸ ಮುನ್ನೆಚ್ಚೆಯ ಯಶಸ್ವಿಕರ ಅನುಷ್ಠಾನಕ್ಕೆ ಅತ್ಯಾವಶ್ಯಕ ಅಂಶಗಳಾಗಿವೆ. ಆದುದರಿಂದ, ನಿಯಮಿತವಾದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವು ಎರಡು ರೀತಿಯದ್ದಾಗಿರುವುದು: ಮೊದಲನೆಯದು, ವಿದ್ಯಾರ್ಥಿಗಳಿಗೆ ಮತ್ತು ಸಮುದಾಯಕ್ಕೆ ನವೀನತೆ ಅಥವಾ ಆವಿಷ್ಕಾರದ ವೇದಿಕೆಯಾಗಿ ATL ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದರ ಕುರಿತು ಮತ್ತು ಎರಡನೆಯದು, ವಿದ್ಯಾರ್ಥಿ ಮಟ್ಟದಲ್ಲಿ ವಿಕಸಿಸಲ್ಪಟ್ಟ ಕೌಶಲಗಳ ವಿಷಯದಲ್ಲಿ ಸೃಷ್ಟಿಸಲಾದ ಪ್ರಭಾವದ ಕುರಿತು.

## 7.1 ಮಾನಿಟರಿಂಗ್ ಡ್ಯಾಶ್ಬೋರ್ಡ್

ATLನ ಕಾರ್ಯಕ್ಷಮತೆಯನ್ನು ಕೆಲವು ನಿಯತಾಂಕಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ, ಇದನ್ನು ಒಂದು ಮಾಸಿಕ / ತ್ರೈಮಾಸಿಕ ವರದಿಯ ಮೂಲಕ ಸಲ್ಲಿಸಬಹುದು. ATLನ ಯಶಸ್ಸನ್ನು ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ ಎರಡೂ ನಿಯತಾಂಕಗಳ ಆಧಾರದ ಮೇಲೆ ಅಳೆಯಲಾಗುತ್ತದೆ—ಅಂದರೆ ATLನಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ, ಆಯೋಜಿಸಲಾದ ATL ವರ್ಕ್–ಶಾಪ್ಗಳ ಸಂಖ್ಯೆ, ಏರ್ಪಡಿಸಲಾದ ಮೆಂಟರಿಂಗ್ ಸೆಷನ್ಗಳ ಸಂಖ್ಯೆ, ತರಬೇತಿ ಪಡೆದ ಶಿಕ್ಷಕರ ಸಂಖ್ಯೆ, ಪ್ರಾರಂಭಿಸಿದ ಇನ್ನೋವೇಶನ್ ಪ್ರೋಜೆಕ್ಟ್‌ಗಳ ಸಂಖ್ಯೆ, ಸಮುದಾಯಕ್ಕೆ ತೆಗೆದುಕೊಂಡ ಆವಿಷ್ಕಾರಗಳ ಸಂಖ್ಯೆ, ಫೈಲ್ ಮಾಡಲಾದ ಹಕ್ಕುಪತ್ರಗಳು ಮತ್ತು ಹಕ್ಕುಸ್ವಾಮ್ಯಗಳ ಸಂಖ್ಯೆ (ಒಂದುವೇಳೆ ಇರುವಲ್ಲಿ) ಇನ್ನು ಮುಂತಾದ ವಿಷಯಗಳ ಆಧಾರದ ಮೇಲೆ. ಮಾನಿಟರಿಂಗ್ ವರದಿಯಲ್ಲಿ ಹಣಕಾಸಿನ ಖರ್ಚಿನ ವಿವರಗಳು ಸಹ ಒಳಗೊಂಡಿರಬೇಕು. ATL ಇನ್–ಚಾರ್ಜ್ ಅವರು ಎಲ್ಲಾ ಖರ್ಚುವೆಚ್ಚಗಳ ಒಂದು ಇನ್ವಾಯ್ಸ್/ಬಿಲ್ಲನ್ನು ತಮ್ಮ ದಾಖಲೆಗಾಗಿ ಮತ್ತು AIMಗೆ ತದನಂತರದ ಸಲ್ಲಿಕೆಗಾಗಿ ಇಟ್ಟುಕೊಳ್ಳುವಂತೆ ಸಲಹೆ ನೀಡಲಾಗಿದೆ.

## 7.2 ಸೃಷ್ಟಿಸಲಾದ ಪ್ರಭಾವ

ಯಾವುದೇ ಪ್ರೋಗ್ರಮ್ಯಾಟಿಕ್ ಇಂಟರ್ವೆನ್ಷನ್ ಸ್ಥಳದಲ್ಲಿ ಗಣನೀಯ ಪ್ರಮಾಣದ ಪ್ರಭಾವವನ್ನು ಉಂಟುಮಾಡಲು ಪರಿಣಾಮ–ಆಧಾರಿತ ವಿಧಾನವನ್ನು[11] ಅಳವಡಿಸಿಕೊಳ್ಳುವುದು ತುಂಬ ಪ್ರಾಮುಖ್ಯ. ATL ಒಂದು ರಾಷ್ಟ್ರೀಯ ಮುನ್ನೆಚ್ಚೆಯಾಗಿರುವುದರಿಂದ, ಒಟ್ಟು ಪರಿಣಾಮಗಳನ್ನು ಸತತವಾಗಿ ಮೇಲ್ವಿಚಾರಣೆ ಮಾಡುವುದು ಮತ್ತು ಅಗತ್ಯವಿರುವಾಗೆಲ್ಲ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಗತ್ಯವಾಗಿದೆ. ಯಶಸ್ಸನ್ನು ಅಳೆಯುವುದರಲ್ಲಿ ಹೂಡುವಳಿಗಳು, ಹುಟ್ಟುವಳಿಗಳು (ಇನ್ಪುಟ್ಸ್, ಔಟ್ಪುಟ್), ಫಲಿತಾಂಶಗಳು ಮತ್ತು ಸೃಷ್ಟಿಸಲಾದ ಒಟ್ಟಾರೆ ಪ್ರಭಾವಗಳು ಒಳಗೂಡಿವೆ. ATL ಕಾರ್ಯಾಚರಣೆಯ ಉದ್ದೇಶಗಳನ್ನು ಸಾಧಿಸುವಂತೆ ಪ್ರೇರೇಪಿಸುವ ATL ಹಸ್ತಕ್ಷೇಪದ ಇನ್ಪುಟ್ನಲ್ಲಿ, ವಿದ್ಯಾರ್ಥಿಗಳ ಸಂಖ್ಯೆ, ಉಪಯೋಗಿಸಲಾದ ಶಿಕ್ಷಕರು ಮತ್ತು ಮಾರ್ಗದರ್ಶಕರು, ಆವಿಷ್ಕಾರದ ವಿವಿಧ ಘಟಕಗಳು ಮತ್ತು ಬೌದ್ಧಿಕ ಆಸ್ತಿ (ಐಪಿ) ರಚನೆಯ ಬಗ್ಗೆ ನಡೆಸಲಾದ ತರಬೇತಿ ಕಾರ್ಯಕ್ರಮಗಳ ಸಂಖ್ಯೆ ಮತ್ತು ನಡೆಸಲಾದ ಆವಿಷ್ಕಾರದ ಕಾರ್ಯಕ್ರಮಗಳ ಸಂಖ್ಯೆಯು ಒಳಗೂಡಿರಬಹುದು.

ಇದರ ಔಟ್ಪುಟ್ನಲ್ಲಿ, ಸಂಖ್ಯಾತ್ಮಕ ವಿವರಗಳು ಅಂದರೆ ATL ನಲ್ಲಿ ರಚಿಸಲಾದ ಆವಿಷ್ಕಾರಗಳ ಸಂಖ್ಯೆಯು ಒಳಗೂಡಿದೆ. ATL ಫಲಿತಾಂಶಗಳನ್ನು ನಮ್ಮ ದೇಶದ ಯುವ ಜನರ ಸಮಸ್ಯೆಯನ್ನು ಪರಿಹರಿಸುವ, ಅನ್ವೇಷಕ ಮನೋಭಾವದ ಮೇಲೆ ಅವು ಬೀರುವಂಥ ಪ್ರಭಾವದ ಮೂಲಕ ಮೌಲ್ಯಮಾಪನ ಮಾಡಲಾಗುವುದು ಮತ್ತು ಇದು ದೇಶದ ವೇಗವರ್ಧಿತ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯನ್ನು ಸಾಧ್ಯಗೊಳಿಸುವ ದೊಡ್ಡ ಪ್ರಮಾಣದ ಉದ್ಯಮಶೀಲ ಮುನ್ನೆಚ್ಚೆಗಳಿಗೆ ಕಾರಣವಾಗುತ್ತದೆ. ಸೃಜನಶೀಲತೆ ಮತ್ತು ಆವಿಷ್ಕಾರ, ಐಪಿ ರಚನೆ, ಉದ್ಯಮಶೀಲತಾ ಮನೋಭಾವ, ನಿರ್ಣಾಯಕ ಚಿಂತನೆ ಮತ್ತು ಸಮಸ್ಯೆ ಬಗೆಹರಿಸುವ ಕೌಶಲಗಳು, ಸಂವಾದಮಾಡುವ ಸಾಮರ್ಥ್ಯ, ಸಹಯೋಗದ ಕೌಶಲಗಳು, ಹೊಂದಿಕೊಳ್ಳುವಿಕೆ ಮತ್ತು ಹೊಂದಾಣಿಕೆಯ ಸಾಮರ್ಥ್ಯ, ನೇತೃತ್ವ ಮತ್ತು ಸ್ವಯಂ ಪ್ರೇರಣೆ, ಸಾಮಾಜಿಕ ಮತ್ತು ವಿಭಿನ್ನ–ಸಂಸ್ಕೃತಿಯ ಕೌಶಲಗಳು, ಉತ್ಪಾದಕತೆ ಮತ್ತು ಹೊಣೆಗಾರಿಕೆ, ಎಥಿಕಲ್ ಲೀಡರ್ಶಿಪ್, ಸಮಗ್ರತೆ ಮತ್ತು ಜವಾಬ್ದಾರಿ, ಪರಹಿತಚಿಂತನೆ ಮತ್ತು ಸಾಮಾಜಿಕ ಚಿಂತನೆ, ಆತ್ಮ ವಿಶ್ವಾಸ ಮತ್ತು ಸಮಗ್ರತಾ ಭಾವನೆ ಇನ್ನು ಮುಂತಾದವುಗಳನ್ನೂ ಒಳಗೊಂಡು 21ನೇ ಶತಮಾನದ ವಿವಿಧ ಕೌಶಲಗಳನ್ನು ಅಚ್ಚೊತ್ತಲು ATL ಹೇಗೆ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತದೆ ಎಂಬುದರ ಆಧಾರದ ಮೇಲೆ ಫಲಿತಾಂಶಗಳನ್ನು ಮೌಲ್ಯಮಾಪನ ಮಾಡಬಹುದು.

---

[11] ಔಟ್ಪುಟ್ಗಳಿಂದ ಫಲಿತಾಂಶಗಳತ್ತ ಸಾಗುವುದು: ವಿಶ್ವದಾದ್ಯಂತ ಇರುವ ಸರಕಾರಗಳಿಂದ ಪ್ರಾಯೋಗಿಕ ಸಲಹೆ, ಸಾಧನೆ ಮತ್ತು ಫಲಿತಾಂಶಗಳ ಸರಣಿಯ ನಿರ್ವಹಣೆ, ಆನ್ಲೈನ್ ಸಂಪನ್ಮೂಲಗಳು, ವಿಶ್ವ ಬ್ಯಾಂಕ್

ತನ್ನ AICs, ANICs ಮೂಲಕ AIM ಅನುಕೂಲಮಾಡಿಕೊಡುತ್ತಿರುವ ಆವಿಷ್ಕಾರದ ಮುನ್ನೆಜ್ಜೆಗಳ ಒಂದು ಸರಣಿಯಲ್ಲಿ ATL ಮೊದಲ ಹೆಜ್ಜೆಯಾಗಿದ್ದು, ದೇಶದ ಉದ್ದಗಲಕ್ಕೂ ನವೀನತೆ ಅಥವಾ ಆವಿಷ್ಕಾರದ ಮತ್ತು ಉದ್ಯಮಶೀಲತೆಯ ಸ್ವಯಂ–ವರ್ಧಿಸುವ ಮತ್ತು ನಿರಂತರವಾಗಿ ಉತ್ತಮಗೊಳ್ಳುವ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸುತ್ತಿದೆ.

## ಸಾರಾಂಶ

ಈ ಅಧ್ಯಾಯವು, ಸರಿಯಾದ ದಿಕ್ಕಿನಲ್ಲಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲು ATL ಕೈಗೊಳ್ಳಬೇಕಾದ ಮೇಲ್ವಿಚಾರಣಾ ಚೌಕಟ್ಟು ಮತ್ತು ವಿವಿಧ ಮೌಲ್ಯಮಾಪನಗಳನ್ನು ವಿವರಿಸಿತು.

ಮುಂದಿನ ಅಧ್ಯಾಯವು ಆವಿಷ್ಕಾರದ ಪ್ರಯಾಣವನ್ನು ಆಚರಿಸುವುದರ ಮೇಲೆ ಮತ್ತು ಮನ್ನಣೆ ನೀಡುವ ಮೂಲಕ ವಿದ್ಯಾರ್ಥಿಗಳನ್ನು ಹೇಗೆ ಪ್ರೋತ್ಸಾಹಿಸಬಹುದು ಎಂಬುದರ ಕಡೆಗೆ ಗಮನ ಸೆಳೆಯುತ್ತದೆ. ಮತ್ತು ಅಸಾಧಾರಣ ರೀತಿಯ ಆವಿಷ್ಕಾರ ಸಾಮರ್ಥ್ಯವನ್ನು ತೋರಿಸಿರುವಂಥ ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿರುವ ವಿವಿಧ ಅವಕಾಶಗಳ ಒಂದು ನಸುನೋಟವನ್ನು ನೀಡುತ್ತದೆ.

CHAPTER 8

# ಕನಸುಗಳನ್ನು ನನಸು ಮಾಡುವುದು: ಆವಿಷ್ಕಾರವನ್ನು ಆಚರಿಸುವುದು

ಇದನ್ನು ಯಶಸ್ವಿಯಾಗಿ ಮಾಡಲು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಮಾರ್ಗದರ್ಶಕರ ಪ್ರಯತ್ನಗಳನ್ನು ATL ಪ್ರೋತ್ಸಾಹಿಸಬೇಕು, ಆಚರಿಸಬೇಕು ಮತ್ತು ಮಾನ್ಯತೆ ನೀಡಬೇಕು. ಮಾನ್ಯತೆ ನೀಡುವುದು ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸುವುದು ಹೆಚ್ಚಿನ ಪ್ರಯತ್ನಗಳನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ ಮಾತ್ರವಲ್ಲ ಈ ಕಾರ್ಯಾಚರಣೆ ಮೂಲಕ ಸೃಷ್ಟಿಸಲ್ಪಟ್ಟ ಪ್ರಭಾವದ ಬಗ್ಗೆ ಜಾಗೃತಿಯನ್ನೂ ಮೂಡಿಸುತ್ತದೆ[12]. ಅಸಾಧಾರಣ ರೀತಿಯ ಆವಿಷ್ಕಾರ ಸಾಮರ್ಥ್ಯವನ್ನು ತೋರಿಸಿರುವಂಥ ವಿದ್ಯಾರ್ಥಿ ಅನ್ವೇಷಕರಿಗೆ AIMನಿಂದ ಒದಗಿಸಲ್ಪಡುವ ವಿವಿಧ ಅವಕಾಶಗಳನ್ನು ಸಹ ಈ ಅಧ್ಯಾಯವು ಚರ್ಚಿಸುತ್ತದೆ.

## 8.1 ಅಟಲ್ ಟಿಂಕರಿಂಗ್ ಲ್ಯಾಬ್ ವಾಲ್ ಆಫ್ ಫೇಮ್

NITI ಆಯೋಗ್ ಅಡಿಯಲ್ಲಿ AIM, ATL ವಾಲ್ ಆಫ್ ಫೇಮ್ ಅನ್ನು ಆರಂಭಿಸಿದ್ದು, ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಮಾರ್ಗದರ್ಶಕರ ಸ್ಫೂರ್ತಿದಾಯಕ ಆವಿಷ್ಕಾರದ ಕಥೆಗಳನ್ನು ನಿಯಮಿತವಾಗಿ ಹಂಚಿಕೊಳ್ಳಲಾಗುವಂಥ ಒಂದು ವೇದಿಕೆ ಇದಾಗಿದೆ. ಈ ಕಥೆಗಳು ಅವರು ಭಾಗವಹಿಸಿರುವಂಥ ಕಾರ್ಯಕ್ರಮಗಳಿಗೆ ಸಂಬಂಧಿಸಿದವುಗಳಾಗಿವೆ ಅಥವಾ ATLನೊಂದಿಗಿನ ಅವರ ಆವಿಷ್ಕಾರದ ಪ್ರಯಾಣಗಳ ಕುರಿತಾದವುಗಳೂ ಆಗಿವೆ.

ATL ವಾಲ್ ಆಫ್ ಫೇಮ್ ಕಥೆಗಳನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/newsletter-march.php

### 8.2 ಸೋಶಿಯಲ್ ಮೀಡಿಯಾ ಕಥೆಗಳು

NITI ಆಯೋಗ್ ಅಡಿಯಲ್ಲಿ AIM ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಮಾರ್ಗದರ್ಶಕರು ತಮ್ಮ ಆವಿಷ್ಕಾರದ ಕಥೆಗಳನ್ನು ಸೋಶಿಯಲ್ ಮೀಡಿಯಾ ವೇದಿಕೆಗಳಲ್ಲಿ ಪೋಸ್ಟ್ ಮಾಡುವಂತೆ ಉತ್ತೇಜಿಸುತ್ತದೆ, ನಂತರ AIM ಅವುಗಳನ್ನು ಶೇರ್ ಮಾಡುತ್ತದೆ. ಈ ಕಥೆಗಳು ದೇಶದ ಆವಿಷ್ಕಾರ ಮನೋಭಾವವನ್ನು ಬದಲಾಯಿಸುವುದರಲ್ಲಿ ATLನ ಕೊಡುಗೆಯನ್ನು ಹಂಚಿಕೊಳ್ಳಲು ಸಹಾಯ ಮಾಡುತ್ತವೆ ಮಾತ್ರವಲ್ಲ, ಈ ರಾಷ್ಟ್ರೀಯ ಉದ್ದೇಶದ ಕಡೆಗೆ ನಮ್ಮ ಪಾಲುದಾರರ ಬದ್ಧತೆಗಾಗಿ ಅವರಿಗೆ ಪ್ರೋತ್ಸಾಹಕವಾಗಿಯೂ ಕಾರ್ಯನಡಿಸುತ್ತವೆ.

### 8.3 ಟಿಂಕರರ್ಸ್ ಅವಕಾಶಗಳು

ವಿದ್ಯಾರ್ಥಿಗಳಿಗೆ ತಮ್ಮ ಕನಸುಗಳನ್ನು ನನಸು ಮಾಡುವ ಅವಕಾಶವನ್ನು ATL ಒದಗಿಸುತ್ತಿದೆ. ಯಾರಿಗೆ ಶಾಲೆಗೆ ಹೋಗುತ್ತಿದ್ದಾಗ ಇಂಥ ಒಂದು ಅವಕಾಶ ಸಿಗಲಿಲ್ಲವೋ ಅವರು ಇದನ್ನು ಸುಲಭವಾಗಿ ದೃಢೀಕರಿಸಬಲ್ಲರು. ವಿದ್ಯಾರ್ಥಿಗಳ ಬೆಳವಣಿಗೆ ಮತ್ತು ಆವಿಷ್ಕಾರ ಮನೋಭಾವಕ್ಕೆ ATL ಜ್ವಲನವನ್ನು ಒದಗಿಸುತ್ತಿದೆ ಮಾತ್ರವಲ್ಲ ಇದಕ್ಕೂ ಮಿಗಿಲಾದ ಕನಸು ಕಾಣಲು—ತಮ್ಮ ರೆಕ್ಕೆಗಳನ್ನು ಚಾಚಿ, ಅನ್ವೇಷಕರಿಂದ ವಾಣಿಜ್ಯೋದ್ಯಮಿಯಾಗಿ ಪದವಿಪಡೆಯುವಂತೆ ಸಹ ಅವರನ್ನು ಪ್ರೋತ್ಸಾಹಿಸುತ್ತದೆ.

ಕಾರ್ಪೊರೇಟ್ ಪಾಲುದಾರರ ಬೆಂಬಲದೊಂದಿಗೆ, ಹೆಚ್ಚು ಉನ್ನತ ಮಟ್ಟದ ಆವಿಷ್ಕಾರದ ಹಸಿವನ್ನು ತೋರಿಸಿರುವ ATL ವಿದ್ಯಾರ್ಥಿಗಳನ್ನು ಈಗ ವಿವಿಧ AIM ಕಾರ್ಯಕ್ರಮಗಳ ಮೂಲಕ ಮುಂದುವರಿದ ತಂತ್ರಜ್ಞಾನಕ್ಕೆ ಎಕ್ಸ್‌ಪೋಸ್ ಮಾಡಲಾಗುತ್ತಿದ್ದು, ಇವು ಸಮುದಾಯದ ಸಮಸ್ಯೆಗಳನ್ನು ಬಗೆಹರಿಸಲು ಅವರು ಮಾಡುವ ನಿರಂತರ ಪ್ರಯತ್ನದಲ್ಲಿ ಅವರಿಗೆ ಆವಿಷ್ಕಾರದ ತೊಡಕುಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ.

[12] ಯುವ ವಿದ್ಯಾರ್ಥಿಗಳನ್ನು ಆವಿಷ್ಕಾರಕ್ಕಾಗಿ ಉತ್ತೇಜಿಸಲು ನಗದು ಬಹುಮಾನ ಪ್ರಶಸ್ತಿಗಳಷ್ಟೇ ಸಾಕಾಗುವುದಿಲ್ಲ, NITI ಆಯೋಗ್ 2018

## ಎ. ATL ಸ್ಟೂಡೆಂಟ್ ಇನ್ನೋವೇಟರ್ ಪ್ರೋಗ್ರಾಮ್

ATL ಸ್ಟೂಡೆಂಟ್ ಇನ್ನೋವೇಟರ್ ಪ್ರೋಗ್ರಾಮ್ (SIP) ಎಂಬುದು 3 ತಿಂಗಳ ಎಂಗೇಜ್ಮೆಂಟ್ ಪ್ರೋಗ್ರಾಮ್ ಆಗಿದ್ದು, ATL ವಿದ್ಯಾರ್ಥಿಗಳು ತಮ್ಮ ಆವಿಷ್ಕಾರಗಳನ್ನು ಮಾರುಕಟ್ಟೆಗೆ ಸಿದ್ಧವಾದ ಉತ್ಪನ್ನ/ಸರ್ವಿಸ್ ಆಗಿ ಮಾಡುವ ಉದ್ದೇಶದಿಂದ ಇನ್ನಷ್ಟು ಪರಿಷ್ಕರಿಸಲು ಮತ್ತು ಮೂಲಮಾದರಿಗೊಳಿಸಲು ಸಮರ್ಥರಾಗುವಂತೆ ಮಾಡಲು ವಿನ್ಯಾಸಿಸಲಾಗಿದೆ. ATL ಟಿಂಕರಿಂಗ್ ಮ್ಯಾರಥಾನ್ 2017ರ ಟಾಪ್ 30 ವಿಜೇತ ತಂಡಗಳಿಗೆ ATL SIP ಅನ್ನು ಆಫರ್ ಮಾಡಲಾಯಿತು. ಅಷ್ಟುಮಾತ್ರವಲ್ಲ, NITI ಆಯೋಗ್ ಉಪಾಧ್ಯಕ್ಷರಾದ ಡಾ. ರಾಜೀವ್ ಕುಮಾರ್ ಅವರಿಂದ ಪ್ರಾರಂಭಿಸಲಾದ ATL ಟಾಪ್ 30 ಸಂಕಲನದಲ್ಲಿ ಈ 30 ಆವಿಷ್ಕಾರಗಳು ಸ್ಥಾನವನ್ನು ಪಡೆದಿವೆ.




***NITI ಆಯೋಗ್‌ನಲ್ಲಿ ATL ಟಾಪ್ 30 ಸಂಕಲನದ ಉದ್ಘಾಟನೆ***

ATL ಟಾಪ್ 30 ಸಂಕಲನವನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

http://aim.gov.in/pdf/top30final-low.pdf

## ಬಿ. ATL ಸ್ಟೂಡೆಂಟ್ ಇಂಟರ್ನ್ಶಿಪ್ಸ್

ಅತ್ಯುತ್ತಮವಾಗಿ ಕಾರ್ಯನಡಿಸುವ ATL ತಂಡಗಳಿಗೆ, ಒಂದು ಬಹುರಾಷ್ಟ್ರೀಯ ಪಾಲುದಾರ IBM ನೊಂದಿಗೆ ಅದರ ಬೆಂಗಳೂರು ಕ್ಯಾಂಪಸ್ನಲ್ಲಿ ಇಂಟರ್ನ್ ಪಡೆಯುವ ಅಪೂರ್ವವಾದ ಮತ್ತು ಈ ರೀತಿಯ ಮೊಟ್ಟಮೊದಲ ಅವಕಾಶದೊಂದಿಗೆ ಬಹುಮಾನಿಸಲಾಯಿತು.



***ಬೆಂಗಳೂರಿನ IBM ನಲ್ಲಿ ATL ಸ್ಟೂಡೆಂಟ್ ಇಂಟರ್ನ್ಶಿಪ್ ಸನ್ಮಾನ ಸಮಾರಂಭ***

### ಸಿ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಚಾಲೆಂಜುಗಳಲ್ಲಿ ಭಾಗವಹಿಸುವಿಕೆ ಮತ್ತು ಮನ್ನಣೆ

ಅಸಾಧಾರಣ ರೀತಿಯಲ್ಲಿ ಅತ್ಯುತ್ತವಾಗಿ ಕಾರ್ಯನಡಿಸುತ್ತಿರುವ ಮತ್ತು AIM ಆಯೋಜಿಸಿದ ಕೆಲವು ಚಾಲೆಂಜುಗಳಲ್ಲಿ ವಿಜೇತರಾಗುತ್ತಿರುವ ATL ಶಾಲೆಗಳಿಗೆ, ಬಾಹ್ಯ ಆವಿಷ್ಕಾರ ಸಂಬಂಧಿತ ಕಾರ್ಯಕ್ರಮಗಳು ಮತ್ತು ವಸ್ತುಪ್ರದರ್ಶನಗಳಲ್ಲಿ ಭಾಗವಹಿಸುವ ಅನೇಕ ಸದವಕಾಶಗಳನ್ನು ಒದಗಿಸಲಾಗಿದೆ. ಗಮನಾರ್ಹ ಉದಾಹರಣೆಗಳಲ್ಲಿ ಕೆಲವು, ಅಂತರರಾಷ್ಟ್ರೀಯ ಮಟ್ಟದ ರೋಬೋಟಿಕ್ಸ್ ಚಾಲೆಂಜ್ ಆದ ವರ್ಲ್ಡ್ ರೋಬೋಟ್ ಒಲಂಪಿಯಾಡ್, ನೊಬೆಲ್ ಪ್ರೈಝ್ ಸೀರೀಸ್, ಇಂಡಿಯಾ ಇಂಟರ್ನ್ಯಾಷನಲ್ ಫೆಸ್ಟಿವಲ್, ವೈಬ್ರಂಟ್ ಗುಜರಾತ್ ಸಮ್ಮಿಟ್, ಮೇಕರ್ ಫೇರ್, ಮೇಕರ್ ಮೇಲಾ ಮತ್ತು ಇನ್ನೂ ಇತರವುಗಳನ್ನು ಒಳಗೊಂಡಿದೆ.

### ಡಿ. ಇನ್ನೋವೇಶನ್ ವಿನಿಮಯ ಕಾರ್ಯಕ್ರಮ

AIM-ಸಿರಿಯಸ್ (Sirius) ಇನ್ನೋವೇಶನ್ ಫೆಸ್ಟಿವಲ್ – ದ ಇಂಡೊ–ರಷ್ಯನ್ ATL ಇನ್ನೋವೇಶನ್ ಬೂಟ್–ಕ್ಯಾಂಪ್ ಈ ರೀತಿಯ ಮೊದಲ ಮುನ್ನೆಜ್ಜೆಯಾಗಿದ್ದು, ಎರಡು ವಿಭಿನ್ನ ದೇಶಗಳಾದ್ಯಂತ ಪ್ರೌಢಶಾಲೆಗಳ ವಿದ್ಯಾರ್ಥಿಗಳು ಆವಿಷ್ಕಾರಮಾಡಲು ಮತ್ತು ಜಗತ್ತಿನ ಸಾಮಾನ್ಯ ಸಮಸ್ಯೆಗಳನ್ನು ಪರಿಹರಿಸಲು ಒಟ್ಟುಗೂಡಿಬಂದರು. ಇದು ಭಾರತ ಮತ್ತು ರಷ್ಯಾ ದೇಶಗಳ ದ್ವಿಪಕ್ಷೀಯ ಸಂಬಂಧಗಳಿಗೆ ಹೊಸ ಯುಗದ ಆರಂಭವಾಗಿದೆ, ಮತ್ತು ನಮ್ಮ ಯುವ ಜನತೆಯನ್ನು ಜಾಗತಿಕ ಮಟ್ಟದಲ್ಲಿ ಸೂಕ್ತವಾದ ಕೌಶಲಗಳೊಂದಿಗೆ ಸಜ್ಜುಗೊಳಿಸಲು ಅವರಿಗಾಗಿ ಇನ್ನೋವೇಶನ್ ವಿನಿಮಯ ಸೇತುವೆಯನ್ನು ನಿರ್ಮಿಸಲು ಒಂದು ಸದವಕಾಶವಾಗಿದೆ. ATL ವಿದ್ಯಾರ್ಥಿಗಳೊಂದಿಗೆ ಸೇರಿಕೊಂಡು ಚಲನಶೀಲತೆ, ಅಗ್ರಿಟೆಕ್, ಆರೋಗ್ಯ, ಅಂತರಿಕ್ಷ ಮತ್ತು ಕ್ಲೀನ್ ಎನರ್ಜಿ ಎಂಬ ಐದು ಮುಖ್ಯ ವಿಷಯಗಳ ಕುರಿತಾದ ಆವಿಷ್ಕಾರಗಳನ್ನು ಜೊತೆಯಾಗಿ ರಚಿಸುವುದಕ್ಕಾಗಿ ಒಂದು ರಷ್ಯನ್ ವಿದ್ಯಾರ್ಥಿ ಪ್ರತಿನಿಧಿಗಳ ತಂಡಕ್ಕೆ ನಾಲ್ಕು ದಿನಗಳ ಇಂಡೋ–ರಷ್ಯನ್ ಇನ್ನೋವೇಶನ್ ಬೂಟ್–ಕ್ಯಾಂಪ್ ಏರ್ಪಡಿಸಲಾಗಿತ್ತು. ನಾಲ್ಕು ದಿನಗಳ ಇಂಡೋ–ರಷ್ಯನ್ ATL ಇನ್ನೋವೇಶನ್ ಬೂಟ್–ಕ್ಯಾಂಪ್ ಅನ್ನು ಡಿಪಾರ್ಟ್ಮೆಂಟ್ ಆಫ್ ಡಿಸೈನ್, ಐಐಟಿ ದೆಹಲಿಯ ಬೆಂಬಲದೊಂದಿಗೆ ಆಯೋಜಿಸಲಾಗಿತ್ತು. ಇಲ್ಲಿ ಯುವ ವಿದ್ಯಾರ್ಥಿ ಅನ್ವೇಷಕರು ನೈಜ ಸಮಸ್ಯೆಗಳನ್ನು ಪರಿಹರಿಸಲು ಅಟಲ್ ಟಿಂಕರಿಂಗ್ ಲ್ಯಾಬ್ಸ್–ನಲ್ಲಿ ಲಭ್ಯವಿರುವ ತಂತ್ರಜ್ಞಾನಗಳನ್ನು ಸದುಪಯೋಗಿಸಿಕೊಂಡರು; ಇದು ಇನ್ನಷ್ಟು ಅಭಿವೃದ್ಧಿಗೊಳಿಸಬಹುದಾದ, ಉತ್ಪನ್ನವಾಗಿ ಮಾರ್ಪಡಿಸಬಹುದಾದ ಮತ್ತು ತರುವಾಯ ವಾಣಿಜ್ಯೀಕರಿಸಬಹುದಾದ ಆವಿಷ್ಕಾರಗಳಿಗೆ ಮುನ್ನಡಿಸಬಹುದು. ಈ ಆವಿಷ್ಕಾರಗಳನ್ನು ಭಾರತದ ಸನ್ಮಾನ್ಯ ಪ್ರಧಾನ ಮಂತ್ರಿಯವರಿಗೆ ಮತ್ತು ರಷ್ಯಾದ ಸನ್ಮಾನ್ಯ ರಾಷ್ಟ್ರಾಧ್ಯಕ್ಷರಿಗೆ




ಪ್ರದರ್ಶಿಸಲಾಯಿತು.

***ಭಾರತದ ಸನ್ಮಾನ್ಯ ಪ್ರಧಾನ ಮಂತ್ರಿಯವರಾದ ಶ್ರೀ ನರೇಂದ್ರ ಮೋದಿ ಮತ್ತು ರಷ್ಯಾದ ಸನ್ಮಾನ್ಯ ರಾಷ್ಟ್ರಾಧ್ಯಕ್ಷರಾದ ಶ್ರೀ ವ್ಲಾಡಿಮಿರ್ ಪುಟಿನ್ ಅವರೊಂದಿಗೆ AIM-SIRIUS ವಿದ್ಯಾರ್ಥಿ ಅನ್ವೇಷಕರು***

ನಾಲ್ಕು ದಿನಗಳ ಬೂಟ್-ಕ್ಯಾಂಪ್ ಜೊತೆಯಲ್ಲಿಯೇ, AIM ಮತ್ತು ರಷ್ಯಾದ SIRIUS ಎಜುಕೇಷನಲ್ ಸೆಂಟರ್ ಒಂದು ಸ್ಟೇಟ್ಮೆಂಟ್ ಆಫ್ ಇಂಟೆಂಟ್ ಒಪ್ಪಂದಕ್ಕೆ ಸಹಿಹಾಕಿತು, ಇದರ ಭಾಗವಾಗಿ ರಷ್ಯನ್ ಮತ್ತು ATL ಶಾಲೆಗಳಿಂದ ಭಾರತೀಯ ವಿದ್ಯಾರ್ಥಿಗಳು ವಾರ್ಷಿಕವಾಗಿ ವಿನಿಮಯ ಕಾರ್ಯಕ್ರಮಗಳಿಗೆ ಆಯ್ಕೆ ಮಾಡಲ್ಪಡುವರು.




***AIM-SIRIUS ಇನ್ನೋವೇಶನ್ ಫೆಸ್ಟಿವಲ್‌ನಲ್ಲಿ NITI ಆಯೋಗ್ ತಂಡ***

AIM-SIRIUS ಇನ್ನೋವೇಶನ್ ಫೆಸ್ಟಿವಲ್ನ ಪ್ರಯಾಣವನ್ನು ಸೆರೆಹಿಡಿಯುವಂಥ ಒಂದು ವಿಡಿಯೋ ಅನ್ನು ಇಲ್ಲಿ ಡೌನ್ಲೋಡ್ ಮಾಡಬಹುದು:

https://www.youtube.com/watch?v=GDEI5f-g5qo

## ಸಾರಾಂಶ

**ಈ ಅಧ್ಯಾಯವು ಸ್ಫೂರ್ತಿದಾಯಕ ಆವಿಷ್ಕಾರದ ಕಥೆಗಳನ್ನು ಹೇಗೆ ಮಾನ್ಯಮಾಡಬೇಕು ಎಂಬುದನ್ನು ಮತ್ತು ಭಾರತದ ಯುವ ಅನ್ವೇಷಕರು ತಮ್ಮ ಕನಸುಗಳನ್ನು ನನಸು ಮಾಡಲು ಅವರಿಗೆ AIM ಹೇಗೆ ಪ್ರತಿಷ್ಠಿತ ಅವಕಾಶಗಳನ್ನು ಒದಗಿಸುತ್ತಿದೆ ಎಂಬುದನ್ನು ಹಂಚಿಕೊಳ್ಳುತ್ತದೆ.**

# ಪಾಲುದಾರರ ಪಟ್ಟಿ

aic-aartech
SUPPORTED BY ATAL INNOVATION MISSION, NITI AAYOG

ATAL INCUBATION CENTRE
BANASTHALI VIDYAPITH
Supported by Atal Innovation Mission, NITI Aayog

ATAL INCUBATION CENTRE - BIMTECH
SUPPORTED BY AIM, NITI AAYOG

AICTE
All India Council for Technical Education

AMITY INNOVATION INCUBATOR

amrita tbi
...Together let us soar!

C-CAMP
Centre for Cellular and Molecular Platforms

DELL

FICE

IBM

inc

intel

KPIT

LEARNING LINKS FOUNDATION

Microsoft

Network Capital

SAP

stratasys

The Global Education & Leadership Foundation

TREC-STEP